ಪ್ರಥಮ ಮುದ್ರಣ ೧೦೦೦ ಪ್ರತಿಗಳು.

ಮೈಸೂರು :

ಶ್ರೀನಿವಾಸ್ ಎಲೆಕ್ಟ್ರಿಕ್ ಪ್ರೆಸ್,

1926.

[ಕ್ರಯ ಒಂದು ರೂಪಾಯಿ.]

...d by Mr. B. KRISHNAPPA, M.A., EDITOR,
...mala, 139, Narayana Sastry Road, Mysore.

ಕರ್ಣಾಟಕಗ್ರಂಥಮಾಲೆ ೧೧೭

ಶ್ರೀಃ

ಅಶೋಕವಿಜಯನಾಟಕಂ

ಪರಿವಿ. ಪದ್ಮನಾಭಯ್ಯ

ಪ್ರಥಮ ಮುದ್ರಣ ೧೦೦೦ ಪ್ರತಿಗಳು

ಮೈಸೂರು :

ಶ್ರೀನಿವಾಸ್ ಎಲೆಕ್ಟ್ರಿಕ್ ಪ್ರೆಸ್,

1926

[One Rupee ... ಒಂದು ರೂಪಾಯಿ.]

ಶ್ರೀಃ

ಮುನ್ನುಡಿ.

"ರಾಜಾ ಕಾಲಸ್ಯ ಕಾರಣಂ" ಎಂಬ ಆರ್ಯೋಕ್ತಿಯು ಪ್ರಭುಸಾಮಾನ್ಯ ಧರ್ಮವನ್ನು ಅದೆಷ್ಟು ಚೆನ್ನಾಗಿ ನಿರೂಪಿಸುತ್ತಿರುವುದೊ! ಆರ್ಯರ ಪುಣ್ಯಭೂಮಿಯಾದ ಈ ಭರತಖಂಡವನ್ನು ಹಿಂದೆ ಪರಿಪಾಲಿಸಿದ ಎಷ್ಟೋ ಮಂದಿ ಮಹಾಮಹೀಪತಿಗಳು ಧರ್ಮರಕ್ಷಣೆಯಲ್ಲಿ ದೀಕ್ಷಾಬದ್ಧರಾಗಿ ತಮ್ಮ ಪ್ರಜೆಗಳು ಸುಶಿಕ್ಷಿತರೂ, ಇಹಪರಗಳಲ್ಲಿ ಸುಖಿಗಳೂ ಆಗುವಂತೆ ನಿರಂತರವೂ ಪ್ರಯತ್ನಿಸುತ್ತ ಕೀರ್ತಿಯನ್ನು ಪಡೆದರೆಂದು ಅನೇಕ ಪುರಾಣಗಳೂ ಇತಿಹಾಸಗಳೂ ಉದ್ಘೋಷಿಸುತ್ತಿರುವುವು. ಇಂತಹ ರಾಜರ್ಷಿಗಳಲ್ಲಿ ಅಶೋಕಚಕ್ರವರ್ತಿಯು ಒಬ್ಬನಾಗಿರುವನು. ಸ್ವದೇಶ ಪರದೇಶಗಳಲ್ಲಿ ಎಲ್ಲೆಲ್ಲಿಯೂ ತನ್ನ ಧರ್ಮಪತಾಕೆಯನ್ನು ಹಬ್ಬಿಸಿ, ಶಾಂತಿಸಾಮ್ರಾಜ್ಯವನ್ನು ನೆಲೆಗೊಳಿಸಿದ ಮಹಾಮಹಿಮನ ಹೆಸರನ್ನು ಕೇಳಿದ ಕೂಡಲೆ ದೇಶಾಭಿಮಾನಿಗಳು ಪುಲಕಿತರಾಗುವುದರಲ್ಲಿ ಆಶ್ಚರ್ಯವಿರಲಾರದು. ಈ ವಿಷಯದಲ್ಲಿ ನನಗೆ ಇದ್ದ ಅಭಿನಿವೇಶವನ್ನು ಸ್ವಲ್ಪಮಟ್ಟಿಗಾದರೂ ತೃಪ್ತಿಗೊಳಿಸಲು ಷಟ್ಪದಿ ಅಥವಾ ಸರಳಚಂಪೂಕಾವ್ಯವಾಗಿ ಈ ಚರಿತೆಯನ್ನು ಬರೆಯಬೇಕೆಂಬ ನನ್ನ ಆಶಯವನ್ನು ಸೂಚಿಸಿದಾಗ ನನ್ನ ಶ್ರೇಯೋಭಿಲಾಷಿಗಳಾಗಿದ್ದ ರಿಟೈರ್ಡ್ ಸಬ್‌ಜಡ್ಜ ದಿವಂಗತ ಸೂ. ವರದರಾಜಯ್ಯಂಗಾರ್ ಅವರು ಒಂದು ನಾಟಕವಾಗಿ ವಿರಚಿಸಿದರೆ, ಬಹುಜನೋಪಯೋಗವಾಗುವುದೆಂದು ಸೂಚನೆಯನ್ನಿತ್ತರು. ಅವರ ಆ ಸೂಚನೆಯನ್ನು ಬಹು ಕೃತಜ್ಞತೆಯಿಂದ ಅಂಗೀಕರಿಸಿ, ಈ ಗ್ರಂಥವನ್ನು ಸಹೃದಯರ ಸನ್ನಿಧಿಯಲ್ಲಿ ಸಮರ್ಪಿಸಿರುವೆನು. ಶ್ರೀಯುತರಾದ (ಧಾರವಾಡದ) ಎಂ. ಪಿ. ಪೂಜಾರರವರ "ಅಶೋಕ ಅಥವಾ ಪ್ರಿಯದರ್ಶಿ" ಎಂಬ ಗ್ರಂಥದಿಂದ ಈ ನಾಟಕಕ್ಕೆ ಬೇಕಾದ ವಸ್ತುವನ್ನು ಆರಿಸಿಕೊಂಡಿರುವೆನಾದಕಾರಣ ಆ ಮಹನೀಯರಿಗೆ ನಿರಂತರವೂ ಕೃತಜ್ಞತೆಯನ್ನು ಸೂಚಿಸುವುದು ನನ್ನ ಕರ್ತವ್ಯವಾಗಿರುವುದು.

ಕಲ್ಪನಾಚಾತುರ್ಯಕ್ಕಾಗಲೀ, ವರ್ಣನಾವೈಚಿತ್ರ್ಯಕ್ಕಾಗಲೀ ಈ ನಾಟಕದಲ್ಲಿ ಎಡೆಗೊಟ್ಟಿಲ್ಲ. ಅಶೋಕನ ಇತಿಹಾಸದ ಮುಖ್ಯಾಂಶಗಳನ್ನು ಪಾಠಕಪ್ರೇಕ್ಷಕರ ಮನಕ್ಕೆ ಬರಮಾಡಬೇಕೆಂಬುದೇ ಈ ಗ್ರಂಥದ ಮುಖ್ಯಧ್ಯೇಯವಾಗಿರುವುದು.

ಈ ಗ್ರಂಥರಚನೆಗೆ ಪ್ರೋತ್ಸಾಹಕರೂ, ಸಹೃದಯಹೃದಯಾಹ್ಲಾದಕವಾಗುವಂತೆ ಉಚಿತವಾದ ಮಾರ್ಪಾಡುಗಳಿಂದ ತಮ್ಮ ಅಮೋಘವಾದ ಕರ್ಣಾಟಕ ಗ್ರಂಥಮಾಲೆಯಲ್ಲಿ ಪ್ರಕಾಶಪಡಿಸಿದವರೂ ಆದ ಶ್ರೀ|| ಮ|| ರಾ|| ಬಿ. ಕೃಷ್ಣಪ್ಪ ಎಂ.ಎ. ಯವರಿಗೂ, ಪ್ರೋತ್ಸಾಹಕರಾದ ಶ್ರೀಮನ್ಮಹಾರಾಜರವರ ಕಾಲೇಜ್ ಆ|| ಪ್ರೊಫೆಸರ್ ಎಸ್. ವಿ. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ., ಬಿ.ಎಲ್. ಅವರಿಗೂ, ಇದರ ಅವಲೋಕನದಿಂದ ಸಂತುಷ್ಟರಾಗಿ "ಈ ಚಾರಿತ್ರನಾಟಕವು ನಿಸ್ಸಂದೇಹವಾಗಿ ಬಹು ಜನೋಪಯೋಗವಾಗುವುದು" ಎಂಬ ಸದಭಿಪ್ರಾಯದಿಂದ ಪ್ರೋತ್ಸಾಹಿಸಿದ ಶ್ರೀಯುತರಾದ ಪ್ರಾಕ್ತನವಿಮರ್ಶವಿಚಕ್ಷಣ, ರಾವ್‌ಬಹದೂರ್ ಆರ್. ನರಸಿಂಹಾಚಾರ್, ಎಂ.ಎ., ಎಂ. ಆರ್. ಎ. ಎಸ್. ಅವರಿಗೂ, ಇದನ್ನು ಪರಿಷ್ಕರಿಸಿ ಸಹಾಯಮಾಡಿದ ನನ್ನ ಪರಮಮಿತ್ರರಾದ ಶ್ರೀ|| ಮ|| ರಾ|| ಪಂಡಿತ ಎಂ. ಚೆನ್ನಕೃಷ್ಣಯ್ಯನವರಿಗೂ ಕೃತಜ್ಞತೆಯಿಂದ ವಂದನೆಗಳನ್ನು ಅರ್ಪಿಸುವೆನು.

ಗುಣಜ್ಞರು ನನ್ನ ಪ್ರಮಾದದಿಂದ ಇದರಲ್ಲಿ ಕಂಡುಬರುವ ದೋಷಗಳನ್ನು ಕ್ಷಮಿಸಿ ಸೂಚಿಸಿದರೆ ಸಂತೋಷದಿಂದ ಅಂಗೀಕರಿಸಿ ಮುಂದಣ ಮುದ್ರಣದಲ್ಲಿ ಸರಿಪಡಿಸಿಕೊಳ್ಳುವೆನು.

ಇಂತು ತಮ್ಮ ನಮ್ರಸೇವಕ,

೧೦-೪-೨೬,

ಸೂಲಿಕುಂಟೆ, ಮಾದಮಂಗಲ.

ಪರಿ ಮಿ. ಪದ್ಮನಾಭಯ್ಯ.

ಸಮರ್ಪಣೆ.

ನ್ಯಾಯಶಾಸ್ತ್ರವಿಶಾರದರೂ, ಭರತಖಂಡದ ಅಖಿಲಪುಣ್ಯಕ್ಷೇತ್ರ ಯಾತ್ರೆಗಳಿಂದ ನಿರಂತರವೂ ತಮ್ಮ ಜೀವಮಾನವನ್ನು ಸಾರ್ಥಕಗೊಳಿಸಿದವರೂ ಆಗಿದ್ದು ಶ್ರೀಮಚ್ಛಂಕರಾಚಾರ್ಯರವರ ಆರಾಧನೆಯ ಪುಣ್ಯ ದಿನದಲ್ಲಿ [ದುಂದುಭಿ ಸಂ. ವೈಶಾಖ ಶು. ೧೨] ಪರಂಧಾಮವನ್ನು ಹೊಂದಿದ ನನ್ನ ಚಿಕ್ಕತಂದೆಯವರಾದ ಪರಿಮಿ. ಶ್ರೀನಿವಾಸಶಾಸ್ತ್ರಿಗಳವರ ಚರಣಾರವಿಂದಗಳಲ್ಲಿ ಗುರುಭಕ್ತಿಪೂರ್ವಕವಾಗಿ ಈ ಗ್ರಂಥವು ಸಮರ್ಪಿತವಾಗಿರುವುದು.

—: ಶ್ರೀ :—

ಶ್ರೀಗುರು ದಕ್ಷಿಣಾಮೂರ್ತಯೇನಮಃ.

ಅಶೋಕವಿಜಯನಾಟಕಂ.

ಪ್ರ ಥ ಮಾಂ ಕ ಂ.

ವೃ॥ ಶ್ರೀಯಂ ಮಾಟಿಕ್ಕಿ ನಿರಂತರಂ ಪ್ರವಿಮಲಪ್ರಜ್ಞಾಬ್ಧಿಚಂದ್ರೋದಯಂ ।
ಶ್ರೇಯೋಮಾರ್ಗನಿದಾನ ಬೋಧನಚಣಂ ಧರ್ಮಾಹ್ವಯಂ ಚಿನ್ಮಯಂ ॥
ಮಾಯಾಮಗ್ನ ಜಗತ್ಸಮುದ್ಧರಣ ದಿವ್ಯಾನಂದ ಸದ್ವೈಭವಂ ।
ಧ್ಯೇಯಂ ಸತ್ವಗುಣಾಶ್ರಯಂ ಗುರುವರಂ ಶ್ರೀಬುದ್ಧನಾರಾಯಣಂ ॥೧॥

[ನಾಂದ್ಯಂತದಲ್ಲಿ ಸೂತ್ರಧಾರನು ಪ್ರವೇಶಿಸುವನು[

ಸೂತ್ರ :—[ಕೈಜೋಡಿಸಿ]

ಕಂ॥ ಜಯಜಯ! ಧರ್ಮಾಶ್ರಯೆ! ಜಯ ।
ಜಯ ನಿರ್ಮಲ ಸತ್ಯವಿಜಯ ಭೂಭೃನ್ನಿಚಯೇ ॥
ಜಯಜಯ! ಸನ್ಮುನಿ ಸಂಶ್ರಯೆ ।
ಜಯಜಯ! ಕಲ್ಯಾಣಿ! ಭಾರತಾವನಿ! ಜನನೀ ॥೨॥
ಉದಧಿಕ್ಷಾಲಿತ ಚರಣೇ ।
ಸದಮಲ ನೀಹಾರ ಶಿಖರ ಸುಂದರ ಶೀರ್ಷೇ ॥
ಸದಯೇ! ಬಹುಪುಣ್ಯನದೀ ।
ಸದಸಂಶೋಭಿತೆ! ಮನೋಜ್ಞೆ! ಭಾರತಿ! ಮಣಿವೆಂ ॥೩॥

[ಹೂವನ್ನೆರಚಿ] ಆಹಾ! ಆಶ್ಚರ್ಯವೇನು? ಭಾರತೀಪುತ್ರರು ನಿರಂತರ ಧರ್ಮಾನುರಾಗಿಗಳಲ್ಲವೆ? ಯಾವ ಮಹಾಪುರುಷನ ಪ್ರಭುತ್ವವು ಪೌರಸ್ತ್ಯ ಪ್ರಪಂಚವೆಲ್ಲವನ್ನೂ ಸುಖಮಯವನ್ನಾಗಿ ಮಾಡಿತೋ ಆ ಮಹಾನುಭಾವನಾದ ಧರ್ಮಾಶೋಕನ ಇತಿಹಾಸವನ್ನು ಅಭಿನಯಿಸಬೇಕೆಂದು ಆರ್ಯಶಿರೋಮಣಿಗಳು ಮಾಡಿರುವ ಆಜ್ಞೆಯು ಶಿರೋಧಾರ್ಯವು! ನಾಟಕಶಾಲೆಯಲ್ಲಿ ಇನ್ನೂ ಸಂಗೀತಾರಂಭವಾಗದಿರಲು ಕಾರಣವೇನಿರಬಹುದು? [ತೆರೆಯಕಡೆ ನೋಡಿ] ಮಾರಿಷನೆ! ಇತ್ತಬಾ!

ಮಾರಿಷ :—[ಪ್ರವೇಶಿಸಿ] ಭಾವನೆ! ಇದೋ ಆಜ್ಞೆಯಂತೆ ಸಿದ್ಧವಾಗಿರುವೆನು.

ಸೂತ್ರ :—ಮಾರಿಷ! ಭಗವಂತನಾದ ಬುದ್ಧದೇವನ ಪರಮಧರ್ಮವೇ ಮೂರ್ತೀಭವಿಸಿದಂತಿರುವ ಈ ಮಹಾಸಭೆಯನ್ನು ನೋಡಿದೆಯಾ?

ಕಂ|| ದಯೆಯುಂ ದಾಕ್ಷಿಣ್ಯಂ ಸ |
ನ್ನಯಶಾಂತಿ ವಿಲಾಸವಮಲ ಸೌಹಾರ್ದಂ ಮೇಣ್ ||
ಪ್ರಿಯವಾಕ್ ಪರಮೋಲ್ಲಾಸಂ |
ಪ್ರಿಯದರ್ಶಿ ನೃಪಾಲ ನಾಕ್ಕೆಯಂ ನೆನೆಯಿಸುಗುಂ ||೪||

ಮಾರಿಷ :—ಆರ್ಯ! ಭಾರತಮಾತೆಯ ಪಾರತಂತ್ರ್ಯವನ್ನು ಚಿಂತಿಸಿ ವ್ಯಸನಾಕ್ರಾಂತರಾಗಿದ್ದ ಈ ಸಭ್ಯರು ಪ್ರಿಯದರ್ಶಿಯ ನಾಮಶ್ರವಣಮಾತ್ರದಿಂದ ಪ್ರಫುಲ್ಲವದನರಾದರು! ಆದುದರಿಂದ "ಅಶೋಕವಿಜಯ" ರೂಪಕವೇ ಈ ಮಹನೀಯರ ಚಿತ್ತವನ್ನಾರಾಧಿಸಲು ತಕ್ಕುದು.

ಸೂತ್ರ :—ಮಾರಿಷ! ನಮ್ಮ ಕುಶೀಲವರನ್ನು ಎಚ್ಚರಗೊಳಿಸು ;
ಗ್ರಂಥಕರ್ತನ ಆಶಯವನ್ನು ಕೈಗೂಡಿಸಿ ನಾವೂ ಕೃತಾರ್ಥರಾಗುವ!

ಮಾರಿಷ :—ಭಾವನೆ! ಈ ನಾಟಕವನ್ನು ಬರೆದ ಕವಿಯಾರು? ಆತನ ಆಶಯವೇನು?

ಸೂತ್ರ :— ಕಂ|| ಸಂತರ ಚಿತ್ತಾರಾಧನ |
ಮೆಂತುಂ ಪರಮೇಶಪೂಜೆಯೆಂಬೊಳ್ಪಗೆಯಿಂ ||
ತಾಂ ತಳ್ವದೆ ವಿರಚಿಸಿದಂ |
ಸಂತಸದಿಂ ಪದ್ಮನಾಭನೀರೂಪಕಮಂ ||೫||

ಮಾರಿಷ :—ಆರ್ಯನೆ! ಪುಣ್ಯಾಕರವಾದ ಪ್ರಿಯದರ್ಶಿಯ ಚಾರಿತ್ರವೂ, ಕವಿಯ ಸರಸೋಕ್ತಿ ಚಾತುರ್ಯವೂ, ನಟಾಚಾರ್ಯನೆನಿಸಿದ ನಿನ್ನ ಸುಶಿಕ್ಷಣವೂ, ನಮ್ಮ ಇಷ್ಟಾರ್ಥಸಿದ್ಧಿಯಲ್ಲಿ ಸಂಪೂರ್ಣ ಸಹಾಯವೆನಿಸುವುವು; ಇನ್ನೇನು? ರಾಜ್ಯಲಕ್ಷ್ಮಿಯು ಕೈಸೇರಿದಷ್ಟು ಸಂತೋಷ.

ಸೂತ್ರ :—ಮಾರಿಷ! ರಾಜ್ಯಲಕ್ಷ್ಮೀಪ್ರಾಪ್ತಿಯು ಸಂತೋಷಪ್ರದವೆಂದು ಹೇಳುವೆಯಾ? ಅದು ಸ್ವಾರ್ಥಪರತೆಯನ್ನು ಹೆಚ್ಚಿಸಿ ಅನೇಕ ಪಾಪಗಳಿಗೆ ಮೂಲವಾಗಿರುವುದು. ಲೋಕದಲ್ಲಿ ಸ್ವಾರ್ಥಪರರಾದವರು :—

ಕಂ|| ಗುರುವಂ ಸಂಭಾವಿಸರಾ |
ಪ್ತರುಮಂ ವಂಚಿಸುವರಂತು ಬಂಧುಗಳಂ ಸಂ |
ಹರಿಸರ್ ನಿರ್ಮಮತೆಯೊಳಾ |
ದುರಾಸೆಯುಳ್ಳರ್ಗದಾವಪಾಪಂ ಪಿರಿದೋ ||೬||

[ತೆರೆಯಲ್ಲಿ]

ಎಲೆಲೋ! ನಟಾಧಮ! ಸಾಕು, ಸಾಕು! ನಿನ್ನ ಧರ್ಮಪರತೆಯು!! ಬಾಯಿಮುಚ್ಚು!!

ಸೂತ್ರ:—[ಕೇಳಿ] ಮಾರಿಷ! ತಂದೆಯ ಸಿಂಹಾಸನವನ್ನು ಪಡೆಯುವ ಆತುರವುಳ್ಳ ಅಶೋಕನು ಖಡ್ಗದಿಂದ ತನ್ನ ಸಹೋದರರನ್ನೂ ನಿಗ್ರಹಿಸಲು ಸಿದ್ಧನಾಗಿರುವನು.

ಮಾರಿಷ:—[ಮರುಕದಿಂದ] ಅಕಟಕಟಾ! ಒಡಹುಟ್ಟಿದವರನ್ನು ಖಡ್ಗದಿಂದ ನಿಗ್ರಹಿಸುವುದೇ?

ತೆರೆಯಲ್ಲಿ:— ಛೀ! ಮೂರ್ಖನೆ! ಬಾಯಿಮುಚ್ಚು! ನನ್ನ ಇಷ್ಟಕ್ಕೆ ವಿರೋಧವಾಗಿ ನುಡಿವವರ ತಲೆಗಳು ನೆಲಕ್ಕೆ ಉರುಳುವುವು! ಎಚ್ಚರಿಕೆ!!

ಮಾರಿಷ:—[ನಡುಗುತ್ತ] ಭಾವನೆ! ಬದುಕಿಸು, ಬದುಕಿಸು!! ನಾನೇಕೆ ಹೀಗೆ ನುಡಿದೆನೊ?

ಸೂತ್ರ:—ಮಾರಿಷ! ಹೆದರಬೇಡ! ಈ ಪಾತ್ರವನ್ನು ಧರಿಸಿರುವ ನಮ್ಮ ಕಲಕಂಠನು ತಕ್ಕ ದರ್ಪದಿಂದ ಕೂಡಿ, ಚೆನ್ನಾಗಿ ಅಭಿನಯಿಸುವ ಕುತೂಹಲವುಳ್ಳವನಾಗಿರುವನು. ನಡೆ; ನಾವು ಮುಂದಿನ ಪಾತ್ರಗಳನ್ನು ಅನುಗೊಳಿಸುವ.

ಮಾರಿಷ:—ಭಾವನೆ! ಹಾಗಾಗಲಿ! [ಇಬ್ಬರೂ ಹೊರಡುವರು]

ಇದು ಪ್ರಸ್ತಾವನೆ.

[ಅನಂತರ ಖಡ್ಗಹಸ್ತನಾದ ಅಶೋಕನು ಬಿಲ್ಲಾತಕ ರಾಧಾಗುಪ್ತರೆಂಬ ಮಂತ್ರಿಗಳೊಡನೆ ಪ್ರವೇಶಿಸುವನು]

ಅಶೋಕ:—ಮಂತ್ರಿಗಳೆ! ರಾಜ್ಯಾಧಿಕಾರವನ್ನೆಲ್ಲವನ್ನೂ ನನಗೀಗಲೇ ಒಪ್ಪಿಸಿಬಿಡತಕ್ಕದು!

ರಾಧಾಗುಪ್ತ:—ಮಹಾಪ್ರಭು! ತಮ್ಮ ಆಜ್ಞೆಯಂತೆ ಸಿದ್ಧವಾಗಿರುವೆವು; ಆದರೆ

ಕಂ|| ಬಹುಕಂಟಕಮಂ ಸಲೆ ನಿ |
ಗ್ರಹಿಸುತೆ ಕೇತಕಿಯ ಪುಷ್ಪಮಂ ಗ್ರಹಿಸುವವೋಲ್ ||
ಬಹುಕಂಟಕಮಂ ಸಲೆ ನಿ |
ಗ್ರಹಿಸಿ ಮನೋಭೀಷ್ಟ ಸಿದ್ಧಿಯಂ ಪಡೆ ಭೂಪಾ ||೭||

ಅಶೋಕ:—ಆ! ಖಡ್ಗಹಸ್ತನಾದ ನನ್ನ ಇಷ್ಟಾರ್ಥಸಿದ್ಧಿಯಲ್ಲಿ ಕಂಟಕವೆಂದರೇನು?

ವೃ|| ಕಡುಪಿಂ ಸಿಂಗನ ದಾಡೆಯಂ ಪಿಡಿದದಾವಂ ಕೀಳಿಕೊಳ್ವಡಾರ್ವನಾ |
ಸಿಡಿಲಂ ತಾಂ ತುಡುಕಲ್ ಕರಂ ಬಗೆವನಾವಂ ಮೆಟ್ಟುವಂ ವ್ಯಾಳನಂ ||
ಮೃಗಭಾಳಾಕ್ಷಿಯನಾವನಾಂಪೊಡೆ ಬಲಂ ಮೇಣಿರ್ಪನಾವೊರ್ಕಿಗಂ |
ಫಡ! ನನ್ನಂ ತಡೆಯಲ್ಕೆ ನಲ್ವನವನೊಂದಾಟೋಪಮಂ ನೋಡಿಪೆನಾಂ ||

ಮತ್ತು— ಕಂ|| ಮುತ್ತಿದರಂ ಕತ್ತರಿಪೆಂ |
ಪತ್ತಿದರಂ ತುತ್ತುಗೊಳ್ವೆನೆತ್ತಂ ಮತ್ತಂ ||
ಬಿತ್ತರಿಸಿ ವಿಕ್ರಮಾಗ್ನಿಯ |
ನಿತ್ತಪೆನಾಹುತಿಯನೊತ್ತಿಬರ್ಪರಿಕುಲಮಂ ||೮||

ಖಲ್ಲಾತಕ:—ಪ್ರಭು! ಮಹಾವೀರಾಗ್ರಣಿಗಳಾದ ತಾವೇ ಮಗಧಸಿಂಹಾಸನಕ್ಕೆ ಅರ್ಹರು.

ರಾಧಾ:—ಮಹಾರಾಜ! ಹಿಂದೆ ತಕ್ಷಶಿಲಾಪ್ರಾಂತದಲ್ಲಿ ಉಂಟಾಗಿದ್ದ ಪ್ರಚಂಡವಾದ ದಂಗೆಯನ್ನು ನಿರಾಯುಧರಾಗಿ ಅಡಗಿಸಿ ಸಮಾಧಾನವನ್ನು ನೆಲೆಗೊಳಿಸಿದ ತಮ್ಮ ಸಾಹಸಕ್ಕೆ ಮೆಚ್ಚಿ, ತಂದೆಯವರಾದ ಬಿಂದುಸಾರ ಮಹಾರಾಜರವರು ವಿಸ್ತಾರವಾದ ಉಜ್ಜಯಿನಿಯ ಕಾರ್ಯಭಾರವನ್ನು ತಮಗೆ ವಹಿಸಿದರು. ಈಗಲೂ ಪಾಟಲೀಪುತ್ರಸಿಂಹಾಸನವನ್ನು ತಾವೇ ಆರೋಹಿಸಬೇಕೆಂದು ಸ್ವರ್ಗವಾಸಿಗಳಾದ ಪಿತೃಗಳು ಅಪೇಕ್ಷಿಸುವರು.

ಅಶೋ:—ಮಂತ್ರಿಗಳೇ! ಯುವರಾಜನಾದ ಸುಷೀಮನ ವಿಷಯದಲ್ಲಿ ನಿಮಗೆ ಅನಾದರವುಂಟಾಗಲು ಕಾರಣವೇನು?

ರಾಧಾ:—ಪ್ರಭು! ತಾನು ಯುವರಾಜನೆಂಬ ಅಹಂಕಾರದಿಂದ ಮಂತ್ರಿಗಳನ್ನು ಅವಮಾನಗೊಳಿಸಲೂ ಹಿಂದೆಗೆಯದೆ ಇದ್ದ ಸುಷೀಮನನ್ನು ಪ್ರೀತಿಸುವುದು ಹೇಗೆ?

ಖಲ್ಲಾ :—ಒಡೆಯ! ತಕ್ಷಶಿಲೆಯಲ್ಲಿ ಈಗ ತಿರುಗಿ ಪ್ರಾಪ್ತವಾದ ವಿಪ್ಲವವನ್ನು ಶಾಂತಿಗೊಳಿಸಲಾರದೆ ಪರಾಜಿತನಾಗಿ ಹಲ್ಲುಕಿರಿಯುತ್ತಿರುವ ಹೇಡಿ ಸುಷೀಮನು ಪ್ರಭುವಾಗುವುದನ್ನು ನಾವು ಎಂದಿಗೂ ಸಮ್ಮತಿಸಲಾರೆವು.

ಅಶೋ :—ಮಂತ್ರಿಗಳೆ ನನ್ನಲ್ಲಿ ನಿಮಗೆ ಅತ್ಯಧಿಕವಾದ ಪ್ರೀತಿಯಿದ್ದುದರಿಂದಲೇ ತಂದೆಯ ಮರಣಕಾಲಕ್ಕೆ ನನ್ನನ್ನು ಉಜ್ಜಯಿನಿಯಿಂದ ಬರಮಾಡಿದಿರಿ! ಇದಕ್ಕೆ ನಾನು ನಿಮಗೆ ಬಹುಕೃತಜ್ಞನಾಗಿರುವೆನು. ನನ್ನ ವಿಷಯದಲ್ಲಿ ಭಿನ್ನಾಭಿಪ್ರಾಯವುಳ್ಳವರು ಯಾರೂ ಇಲ್ಲವಷ್ಟೆ?

ರಾಧಾ :—ಪ್ರಭು! ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅಮಾತ್ಯವಿಶ್ವಗುಪ್ತನೇ ಮೊದಲಾದ ಕೆಲವರು ದುರ್ಮಂತ್ರಿಗಳು ಸುಷೀಮನ ಪಕ್ಷವಾಗಿದ್ದುಕೊಂಡು ಕುತಂತ್ರಗಳನ್ನು ನಡೆಯಿಸುತ್ತಿರುವರು. ಅವರು ರಾಜಪುತ್ರರು ಸೂರ್ವರೊಡನೆ ಸೇರಿ ತಮಗೆ ವಿರೋಧವಾಗಿ ಆಲೋಚಿಸುತ್ತಿರುವುದನ್ನು ಈಗಲೇ ತೋರಿಸುವೆನು; ದಯೆಮಾಡಿ ನನ್ನೊಡನೆ ಬರಬೇಕು. ಅವರೆಲ್ಲರೂ ನಿಗ್ರಹಯೋಗ್ಯರೇ! ಅದೇನು ಸ್ವಾಮಿಯವರಿಗೆ ಒಂದು ಅಸಾಧ್ಯವಾದ ಕೆಲಸವಲ್ಲ.

ಅಶೋ :—ಮಂತ್ರಿಗಳೇ! ತೆರಳಿರಿ. ಮೊದಲು ಅವರ ಅಂತರಂಗವನ್ನು ತಿಳಿದು ಆಮೇಲೆ ತಕ್ಕುದನ್ನು ಆಲೋಚಿಸುವ [ಎಂದು ಮಂತ್ರಿಗಳೊಡನೆ ಹೊರಡುವನು.]

[ಅನಂತರ ಅಮಾತ್ಯವಿಶ್ವಗುಪ್ತನೊಡನೆ ಆಲೋಚಿಸುತ್ತಾ ರಾಜಪುತ್ರರು ಪ್ರವೇಶಿಸುವರು; ಅಶೋಕನು ಖಲ್ಲಾತಕರಾಧಾಗುಪ್ತರೊಡನೆ ಮರೆಯಾಗಿದ್ದು ಕೇಳುತ್ತಿರುವನು]

ವಿಶ್ವಗುಪ್ತ :—ರಾಜಪುತ್ರರೆ! ಜ್ಯೇಷ್ಠಪುತ್ರನಾದ ಯುವರಾಜ ಸುಷೀಮನಲ್ಲದೆ ರಾಜ್ಯಪದಕ್ಕೆ ಅರ್ಹರು ಮತ್ತೆ ಯಾರು? ತಕ್ಷಶಿಲೆಯಿಂದ ಆತನನ್ನು ಬೇಗನೆ ಕರೆಯಿಸಬೇಕು; ರಾಧಾಗುಪ್ತನೇ ಮೊದಲಾದವರು ಆ ದುಷ್ಟನಾದ ಅಶೋಕನನ್ನು ಸಿಂಹಾಸನದಮೇಲೆ ಕುಳ್ಳಿರಿಸಲು ಕುತಂತ್ರಗಳನ್ನು ನಡೆಯಿಸುತ್ತಿರುವರು; ಈ ಸಮಯದಲ್ಲಿ ನಾವು ವಿಳಂಬಿಸಿದರೆ ಕಾರ್ಯವು ಕೆಡುವುದು!

ಸುಮಿತ್ರ :—ಅಮಾತ್ಯ ! ವಿಶ್ವಗುಪ್ತ ! ಕ್ಷೌರಕಾರಿಣಿಯಾಗಿದ್ದ ಆ ಸುಭದ್ರಾಂಗಿಯ ಮಗನು ರಾಜ್ಯವನ್ನು ಪಡೆಯಲು ಮಾಡುವ ಪ್ರಯತ್ನವನ್ನು ನಾವೆಂದಿಗೂ ನಡೆಯಿಸಲಾರೆವು.

ಪ್ರಸೇನ :—ಆ ನೀಚರಾದ ಖಲ್ಲಾತಕರಾಧಾಗುಪ್ತರಿಗೆ ನೆತ್ತಿಗೆ ಪಿತ್ತವೇರಿರುವಂತಿದೆ. ಮೊದಲು ಅದನ್ನು ಇಳಿಸಬೇಕು.

ಸುಭದ್ರ :—ನಮ್ಮ ಉಪ್ಪುತಿಂದು ನಮಗೇ ಕೇಡನ್ನು ಬಗೆವ ಆ ಕುಮಂತ್ರಿಗಳಿಗೆ ಈ ಖಡ್ಗದಿಂದಲೇ ಬುದ್ಧಿಗಲಿಸುವೆನು.

ವೀರಸೇನ :—ಆ ಕುರೂಪಿಯಾದ ಅಶೋಕನ ಮುಖವನ್ನು ನೋಡಲು ಅಸಹ್ಯಪಟ್ಟ ನಮ್ಮ ತಂದೆಯು ಅವನನ್ನು ದೂರವಾಗಿ ಉಜ್ಜಯಿನಿಗೆ ಸಾಗಿಸಿದ್ದನು. ಅಷ್ಟು ಅಧಿಕಾರಮಾತ್ರದಿಂದಲೇ ಕೊಬ್ಬಿದ್ದ ಆ ನೀಚನು ಪಾಟಲೀಪುತ್ರಸಿಂಹಾಸನಕ್ಕೂ ತಾನೇ ಅರ್ಹನೆಂದು ಭಾವಿಸಿಕೊಂಡನೋ ?

ಚಂದ್ರಸೇನ :—ಆ ನೀಚನನ್ನು ಮೊದಲು ಸಂಹರಿಸಿಬಿಡುವ; ಆಮೇಲೆ ಅಣ್ಣನಾದ ಸುಷೀಮನು ಬಂದು ನಿರಾತಂಕವಾಗಿ ಸಿಂಹಾಸನವನ್ನು ಹತ್ತಲಿ !

ವಿಶ್ವಗುಪ್ತ :—ರಾಜಪುತ್ರರೆ ; ವಿಲಂಬಿಸಬೇಡಿರಿ : ನೀವು ನೂರುಮಂದಿಯೂ ಒಂದಾದಮೇಲೆ ಆ ಅಶೋಕನು ಏನು ಮಾಡಲಾಪನು ? ಅವನನ್ನು ಮೊದಲು ನಿಗ್ರಹಿಸಿರಿ ? ನಾನು ಯುವರಾಜನಾದ ಸುಷೀಮನನ್ನು ಕರೆಯಿಸುವ ಪ್ರಯತ್ನವನ್ನು ಈಗಲೇ ಮಾಡುವೆನು.

ರಾಜಪುತ್ರರು :—ಇದೋ ! ಇದೋ ! ಆ ನೀಚನನ್ನೂ ಅವನ ಸಹಾಯಕರನ್ನೂ ಈಗಲೇ ಕೊಂದುಬಿಡುವೆವು [ಸಿದ್ಧರಾಗುವರು]

ಅಶೋ :—ಮಂತ್ರಿಗಳೆ ! ಈ ನೀಚರ ಅಂತರಂಗವನ್ನು ತಿಳಿದೆನು. ಈಗಲೇ ಇವರಿಗೆ ತಕ್ಕುದನ್ನು ಮಾಡುವೆನು ! ದುಷ್ಟನಾದ ವಿಶ್ವಗುಪ್ತನು ಮೊದಲು ನನ್ನ ಕತ್ತಿಗೆ ಬಲಿಯಾಗತಕ್ಕವನು. [ಎಂದು ಆಟೋಪದಿಂದ ನುಗ್ಗಿ] ಎಲೆಲೈ ದುರಾತ್ಮಕರೆ !

ಕಂ|| ಬಗೆವಗೆಯಿಂ ದೂಷಿಪ ನಾ |
ಲಗೆಯಂ ಸೀಳನೆ ಕಡಂಗಿ ನೀಳ್ವೆಂ ಕೀಟಿಸ್ವೆಂ ||
ಮಿಗೆ ನಿಮ್ಮಸುಗಳನೀಗಳೆ |
ಪೊಗೆವೀಮತ್ಕೋಪವಹ್ನಿಗಾಹುತಿಗುಡುವೆಂ ||೧೦||

[ಕತ್ತಿಯನ್ನು ಹಿರಿದು] ಎಲೆಲೋ ! ದುರಾತ್ಮನಾದ ವಿಶ್ವಗುಪ್ತ ! ನಿನ್ನ ಕುಮಂತ್ರಕ್ಕೆ ತಕ್ಕ ಫಲವನ್ನು ಕಾಣು ! [ಎಂದು ಶಿರಶ್ಛೇದವನ್ನು ಮಾಡುವನು]

ರಾಜಪುತ್ರರು :—[ಒಟ್ಟಾಗಿ ನುಗ್ಗಿ]

ವೃ|| ಫಡಫಡ ! ದುಷ್ಟ! ದುರ್ಮದ ! ದುರಾಶಯ ! ದುರ್ಮನ ! ದುಷ್ಟಲಾತನಾ|
ಬಿಡು ಬಿಡು ! ಗರ್ವಮಂ ತುಡುಕಿ ನಿನ್ನನುಗೊಂಡಪೆವಿಂದೆ ಖಡ್ಗದಿಂ ||
ಪೊಡವಿಗೆ ದಾಹಶಾಂತಿಯು ನೆಗೞ್ಚುವೆವು ನಿನ್ನಯ ರಕ್ತಧಾರೆಯಿಂ |
ಬಿಡದುರೆ ಬಿರ್ದಿನೂಟಕೆಡೆಗೆಯ್ವೆವು ನಿನ್ನಡಗಿಂದೆ ನಾಯ್ಗಳಾ ||೧೧||

ಅಶೋ :—ಎಲೈ ಬುದ್ಧಿಯಿಲ್ಲದ ಬಾಲಕರೆ ! ಆ ದುರ್ಮಂತ್ರಿಗಳ ಪ್ರೇರಣೆಯಿಂದ ಏತಕ್ಕೆ ಕೆಟ್ಟುಹೋಗುವಿರಿ ? ನನಗೆ ವಿಧೇಯರಾಗಿದ್ದು ನನ್ನ ಅಪರಿಮಿತವಾದ ಪ್ರೀತಿಯ ಫಲವನ್ನು ಅನುಭವಿಸಿರಿ !

ರಾಜಪುತ್ರರು :—ಎಲೆಲೋ ದುಷ್ಟ ! ಕುಲಾಧಮನಾದ ನಿನ್ನ ವಶವರ್ತಿಗಳಾಗಿ ನಾವು ಬಾಳಬೇಕೇ ! ನಮ್ಮೊಡೆಯನಾಗಲು ಕ್ಷೌರಕಾರಿಣಿಯ ಮಗನು ಅರ್ಹನೆ? ಮೌರ್ಯವಂಶ ಮಹಾನಂದನದಲ್ಲಿ ಕಳೆಯಂತಿರುವ ನಿನ್ನನ್ನು ಮೂಲೋತ್ಪಾಟನಮಾಡಿ, ವಂಶವನ್ನು ಪವಿತ್ರವೆನಿಸುವೆವು ! [ಎಂದು ಮೇಲೆ ನುಗ್ಗುವರು]

ಅಶೋ :—ಆ ಆಃ ! ನನ್ನ ಮಾರ್ಗದಲ್ಲಿ ವಿಘ್ನಕಾರಿಗಳಾಗಿರುವ ಈ ನೀಚರನ್ನು ಸಂಹರಿಸುವುದೇ ಯುಕ್ತವು [ಎಂದು ಶಂಖವನ್ನು ಊದುವನು]

[ಕೂಡಲೆ ಆಯುಧಪಾಣಿಗಳಾದ ಅಂಗರಕ್ಷಕರನೇಕರು ಬರುವರು]

ರಾಜಪುತ್ರರು :—[ನೋಡಿ ಭೀತರಾಗಿ] ಎಲ್ಲಿ ನಿಲ್ಲಿ ! ನಮ್ಮ ಅಂಗರಕ್ಷಕರು ? [ತುತೂರಿಯನ್ನು ಊದುವರು ; ಯಾರೂ ಬರುವುದಿಲ್ಲ] ಇದೇನು ? ನಮ್ಮ ಸೈನಿಕರು ಯಾರೂ ಬಾರದಿರಲು ಕಾರಣವೇನು ? [ಊಹಿಸಿ] ಈ ನೀಚನು ಎಲ್ಲರನ್ನೂ ಸ್ವಾಧೀನಪಡಿಸಿಕೊಂಡಿರುವಂತಿರುವುದಲ್ಲ ! [ಚಿಂತಿಸಿ] ಈಗ ಕಾಲಿಗೆ ಬುದ್ಧಿ ಹೇಳುವುದೇ ಬದುಕುವುದಕ್ಕೆ ಉಪಾಯವು [ಎಂದು ಓಡಲು ಯತ್ನಿಸುವರು]

ಅಶೋ :—ಎಲೈ ಸೈನಿಕರೆ! ಈ ನೀಚರನ್ನು ಮುತ್ತಿಕೊಳ್ಳಿರಿ ! [ಬೆಂಬತ್ತಿ ಹೊರಟು]

ಕಂ|| ನಿಲ್ಲಿರಿ ನಿಲ್ಲಿರಿ ಮೂಢರೆ |
ಎಲ್ಲಿಗೆ ಪೋದಪೊಡೆ ಸೊಗದೆ ಬಾಬ್ಬೀರೆಲ್ವೆ ಸೀಂ ||
ಬಲ್ಲೆಂ ಬಲ್ಲೆಂ ಯಮಪುರ |
ದಲ್ಲಿ ಸೊಗಂಬಾಬ್ಬಿರಲ್ಲಿಗಟ್ಟುವೆನೀಗಳ್ ||೧೨||

[ಅಟ್ಟಿಕೊಂಡು ಹೋಗಿ ಎಲ್ಲರನ್ನೂ ಸಂಹರಿಸುವನು.]

[ಅನಂತರ ಸುವೃತ್ತೆ ಎಂಬ ಧಾತ್ರಿ ಪ್ರವೇಶಿಸಿ]

ಸುವೃತ್ತೆ :—ಅಕ್ಕಟಾ! ರಾಜವಂಶವು ನಿರ್ನಾಮವಾಯಿತು? ಆ ಚಂಡಾಶೋಕನ ಮಹಾಜ್ವಾಲೆಯು ಅಂತಃಪುರಕ್ಕೂ ವ್ಯಾಪಿಸುವುದೋ ಏನೋ? ಗರ್ಭಿಣಿಯಾಗಿರುವ ಯುವರಾಜಪತ್ನಿಯನ್ನು ಹೇಗಾದರೂ ಸಂರಕ್ಷಿಸಲು ಪ್ರಯತ್ನಿಸುವೆನು. ಅಯ್ಯೋ! ಮೌರ್ಯವಂಶವೇ! ನಿನಗಿಂತಹ ದುರ್ಗತಿ ಪ್ರಾಪ್ತವಾಯಿತೇ? [ದುಃಖಿಸುತ್ತಾ ಅಂತಃಪುರದಕಡೆಗೆ ಹೋಗುವಳು; ಯುವರಾಜ್ಞಿಯಾದ ಚಂದ್ರಮತಿಯು ಅಂತಃಪುರದಲ್ಲಿ ನಿದ್ರಿಸುತ್ತಿರುವಳು]

ಸುವೃತ್ತೆ :—[ಪ್ರವೇಶಿಸಿ] ಅಯ್ಯೋ! ಪಾಟಲೀಪುತ್ರವೆಲ್ಲವೂ ಹೊತ್ತಿಕೊಂಡು ಜೇಯುತ್ತಿರುವಾಗ ಈ ಮುಗ್ಧೆಯು ಬಂದನ್ನೂ ಅರಿಯದೆ ಸುಖವಾಗಿ ನಿದ್ರಿಸುತ್ತಿರುವಳಲ್ಲ! ಆಹಾ! ಲೋಕದಲ್ಲಿ ಜೀವಿಗಳ ಕಷ್ಟವನ್ನು ಮರೆ ಮಾಡಿ ಆನಂದವನ್ನು ಸುರಿಸುವ ನಿದ್ರಾದೇವಿಯೇ! ನೀನೇ ಶ್ರೇಷ್ಠಳು! [ಸಮೀಪಕ್ಕೆ ಹೋಗಿ]

ಒಡತಿ! ಏಳು ಏಳು! [ತಟ್ಟಿ ಎಬ್ಬಿಸುವಳು]

ಚಂದ್ರಮತಿ :—[ಎದ್ದು ಕುಳಿತು] ಸಖಿ! ಸುವೃತ್ತೆ! ಅದೇಕೆ ನನ್ನನ್ನೆಚ್ಚರಗೊಳಿಸಿದೆ?

ಸುವೃತ್ತೆ :—ಸಖಿ! ನಾನೇನುಹೇಳಲಿ! ಮೊದಲು ಇಲ್ಲಿಂದ ನಡೆ! ನಡೆ! ಸ್ವಲ್ಪವೂ ವಿಲಂಬಿಸಬೇಡ! ಮೌರ್ಯವಂಶವನ್ನು ರಕ್ಷಿಸು ರಕ್ಷಿಸು!!

ಚಂದ್ರ:—ಸಖಿ! ನಿನ್ನ ಮಾತುಗಳು ನನಗೆ ಸ್ವಲ್ಪವೂ ಅರ್ಥವೇ ಆಗುವುದಿಲ್ಲ; ಆದರೂ ಕಳವಳವನ್ನು ಉಂಟುಮಾಡುತ್ತಿವೆ. ಸ್ಪಷ್ಟವಾಗಿ ಹೇಳಬಾರದೇ?

ಸುವೃತ್ತೆ :—ಅಯ್ಯೋ! ಅಯ್ಯೋ! ಚಂಡಾಶೋಕನಿಂದ ರಾಜವಂಶವೆಲ್ಲವೂ ನಿರ್ಮೂಲವಾಯಿತು.

ಚಂದ್ರ :—[ಗಾಬರಿಯಿಂದ] ಹಾ! ಹಾ! ಏನು! ಏನು! ರಾಜವಂಶ! ನಿರ್ಮೂಲ!! ಏಕೆ?

ಸುವೃತ್ತೆ :—ಅಯ್ಯೋ! ಹುಚ್ಚಳೇ! ಸ್ವಾರ್ಥಪರರು ಯಾವುದನ್ನು ಮಾಡುವು ದಕ್ಕೆತಾನೇ ಹಿಂಜರಿಯುವರು? ಆ ನೀಚನಾದ ಅಶೋಕನು ರಾಜ್ಯ ಲೋಭದಿಂದ ತೊಂಬತ್ತೊಂಬತ್ತು ಮಂದಿ ರಾಜಪುತ್ರರನ್ನು ತನ್ನ ಕೈಯಿಂದಲೇ ಕೊಂದುಬಿಟ್ಟನು! ಕಿರಿಯ ಸಹೋದರನಾದ ತಿಷ್ಯನೊಬ್ಬ ನನ್ನು ಮಾತ್ರ ಕೊಲ್ಲಲಿಲ್ಲ!

ಚಂದ್ರ :—ಅಕಟಕಟಾ! ಪ್ರಾಣಕಾಂತನಿಲ್ಲದವೇಳೆಯಲ್ಲಿ ಆ ದುಷ್ಟನು ಇಂತಹ ದಾರುಣಕಾರ್ಯವನ್ನು ಮಾಡಿದನೆ? ಬರಲಿ! ಬರಲಿ! ತಕ್ಷಶಿಲೆಯಿಂದ ಯುವರಾಜನು ಬರಲಿ! ಈ ನೀಚನ ಗತಿಯೇನಾಗುವುದೋ?

ಸುವೃತ್ತೆ :—ಅಯ್ಯೋ! ನಿರ್ಭಾಗ್ಯಳೇ! ಇನ್ನೆಲ್ಲಿಯ ಯುವರಾಜನು? ನಿನ್ನ ಸೌಮಂಗಲ್ಯವು ಇನ್ನೂ ಉಳಿದಿರುವುದೇ? ಹಾ! ಹಾ! ನಾನು ಹೇಗೆ ಹೇಳಲಿ? [ಎಂದು ತಲೆಯನ್ನು ಬಡಿದುಕೊಳ್ಳುವಳು]

ಚಂದ್ರ :—[ಕಳವಳದಿಂದ] ಅಯ್ಯೋ! ಅಯ್ಯೋ! ಏನು ಸರ್ವನಾಶ! ಸುಷೀ ಮನ ಗತಿಯೇನಾಯಿತು? ಸಖಿ! ಕೆಟ್ಟೆನು! ಕೆಟ್ಟೆನು! ಹೇಳುಹೇಳು! [ನೆಲಕ್ಕೆ ಬೀಳುವಳು]

ಸುವೃತ್ತೆ :—ಅಯ್ಯೋ! ದೇವಿಯೆ! ಅಶೋಕನು ಸಿಂಹಾಸನಾಕ್ರಮಣಮಾಡಿ ದುದನ್ನು ತಿಳಿದು ಸುಷೀಮನು ಪಾಟಲೀಪುತ್ರಕ್ಕೆ ಬರುವ ವೇಳೆಗೆ ಆ ನೀಚನು ಕಂದಕದಲ್ಲೆಲ್ಲಾ ಮಹತ್ತರವಾದ ಬೆಂಕಿಯನ್ನು ಹೊತ್ತಿಸಿದ್ದನು; ಯುವರಾಜನು ಅರಿಯದೆ ಕೋಟೆಯೊಳಕ್ಕೆ ಪ್ರವೇಶಿಸಲು ಪ್ರಯತ್ನಿಸಿ ದಾರುಣವಾದ ಅಗ್ನಿಯಲ್ಲಿ........ಅಯ್ಯೋ! ಅಯ್ಯೋ! ಇನ್ನು ಹೇಳಲಾ ರೆನು [ನೆಲಕ್ಕೆ ಬೀಳುವಳು]

ಚಂದ್ರ :—ಅಕಟಕಟಾ! ಮುಂದೇನುಗತಿ! [ಅಳುತ್ತ] ಹಾ!

ಕಂ|| ಮೌರ್ಯಕುಲಾಂಬುಧಿಚಂದ್ರಮ |
ಶೌರ್ಯೌದಾರ್ಯಾಭಿರಾಮ! ಭೀಮ! ಸುಷೀಮಾ ||
ಆರ್ಯಜನಪ್ರೇಮಾ! ವರ |
ಧೈರ್ಯಪ್ರೋದ್ದಾಮ! ನನ್ನಗಲ್ದೆಯ? ಕಾಣಾ ||೧೨||

[ಮೂರ್ಛಾಗತಳಾಗುವಳು]

ಸುವೃತ್ತೆ :—ಸಖಿ! ಚೇತರಿಸಿಕೊ! ಚೇತರಿಸಿಕೊ! [ಉಪಚರಿಸುವಳು]

ಚಂದ್ರ :—[ಮೇಲಕ್ಕೆದ್ದು] ಅಯ್ಯೋ! ಮೌರ್ಯವಂತದ ಮಾಣಿಕ್ಯವು ಒಡೆದು ಹೋಯಿತೆ?! ರಾಜಕುಲದಿನಮಣಿಯು ಅಸ್ತಂಗತನಾದನೆ?! ಪಾಟಲೀಪುತ್ರದ ಸೌಭಾಗ್ಯವು ಸೂರೆಹೋಯಿತೆ?! ಹಾ! ಹಾ!! [ಅಳುವಳು]

ಸುವೃತ್ತೆ :—ದೇವಿ! ದುಃಖಿಸುವುದಕ್ಕೆ ಇದು ಸಮಯವಲ್ಲ! ನಡೆ! ಮೊದಲು ನಿನ್ನ ಗರ್ಭವನ್ನು ಸಂರಕ್ಷಿಸಿಕೋ! ಧೈರ್ಯವನ್ನವಲಂಬಿಸು! ಅಳಿದವರನ್ನು ಕುರಿತು ಅಳುವುದರಿಂದ ಫಲವಿಲ್ಲ!

ಚಂದ್ರ :—ಸಖಿ! ನಾನೇನುಮಾಡಲಿ! ನನಗೊಂದೂ ತೋರುವುದಿಲ್ಲವಲ್ಲಾ! ಆ ಅಶೋಕನನ್ನೇ ಮರೆಹೊಕ್ಕು ಗರ್ಭಪಿಂಡವನ್ನು ರಕ್ಷಿಸಿಕೊಳ್ಳುವೆನು.

ಸುವೃತ್ತೆ :—ದೇವಿ! ನಿನ್ನ ಈ ಹುಚ್ಚುತನಕ್ಕೆ ನಾನೇನುಹೇಳಲಿ? ಅಯ್ಯೋ!

ಕಂ|| ದೇವಿಯೆ! ನಿನ್ನಯ ಮಿದು ನುಡಿ |
ಯಾವಿಷಮನ ಚಿತ್ತಕರ್ಕಶತೆಯಂ ಕಳೆಯಲ್ ||
ಭಾವಿಸೆ ಸಾಧ್ಯಮೆನಿಪುದೇಂ |
ದಾವಾಗ್ನಿಯ ನಂದಿಸಲ್ಕೆ ಸಲ್ಗುಮೆ? ಪೊಯ್ನೀರ್ ||೧೪||

ಚಂದ್ರ :—ಸಖಿ! ಅನಾಥಸ್ತ್ರೀಯಲ್ಲಿ ಆತನು ಒಂದಿಷ್ಟು ದಯೆತೋರಲಾರನೆ?

ಸುವೃತ್ತೆ :—ಆ ರಾಕ್ಷಸನಿಗೆ ದಯೆಯೆಂದರೇನು? ಹಿಂದೆ ಒಂದುವೇಳೆ ಹಲವರು ಪ್ರಮದೆಯರು ಉದ್ಯಾನವನದಲ್ಲಿ ವಿಹರಿಸುತ್ತ ಅಶೋಕವೃಕ್ಷವೊಂದನ್ನು ಪರಿಹಾಸಗೊಳಿಸಿದರೆಂದು ಆ ದುಷ್ಟನು ಅವರೆಲ್ಲರನ್ನೂ ಬೆಂಕಿಯಲ್ಲಿ ಸುಡಿಸಿಬಿಟ್ಟನು! ಒಡತಿ! ನಿನ್ನ ಸಾತ್ವಿಕತೆಗೆ ಇಲ್ಲಿ ಸ್ಥಳವಿಲ್ಲ; ಮೊದಲು ಮೌರ್ಯವಂಶವನ್ನುದ್ಧರಿಸು!

ಚಂದ್ರ :—[ಅಳುತ್ತ] ಸಖಿ! ಈ ರಾತ್ರಿಯಲ್ಲಿ ಎಲ್ಲಿಹೋಗುವುದು? ಯಾರನ್ನು ಆಶ್ರಯಿಸುವುದು. ಬ್ರಹ್ಮನು ಹಣೆಯಲ್ಲಿ ಬರೆದಂತೆ ಆಗಿಹೋಗಲಿ.

ಸುವೃತ್ತೆ :—ಸಖಿ! ನನ್ನ ಮಾತನ್ನು ಕೇಳು! ಅಪಾಯಕರವೆಂದು ತಿಳಿದ ಸ್ಥಳದಲ್ಲಿ ಇರಬಾರದು.

ಚಂದ್ರ :—ಸಖಿ! ನಾನಂತೂ ದುಃಖದಿಂದ ಮೂಢಳಾಗಿರುವೆನು. ನೀನೇನಾದರೂ ಮಾಡು! ನನಗಾರುದಿಕ್ಕು?!

[ಕಣ್ಣೀರನ್ನು ಸುರಿಸುತ್ತ ಸಮಾಪಿಸುವಳು]

ಸುವೃತ್ತೆ:—ಸಖಿ! ನನ್ನೊಡನೆ ಬಾ! ನನಗೊಂದುಗುಪ್ತದ್ವಾರವು ತಿಳಿದಿರುವುದು. ಪೂರ್ವದಿಕ್ಕಿನ ಅಗಳತೆಯಲ್ಲಿ ಇಳಿಯಬಿದ್ದು ಎಲ್ಲಿಯಾದರೂ ಹೊರಟು ಹೋಗುವ ನಡೆ!

ಚಂದ್ರ:—ಸಖಿ! ನಡೆ! ನಿನ್ನನ್ನೇ ಅನುಸರಿಸುವೆನು.

[ಇಬ್ಬರೂ ಹೊರಟುಬಂದು ಕಾಡಿನೊಳಕ್ಕೆ ಪ್ರವೇಶಿಸುವರು]

ಚಂದ್ರಮತಿ:—ಕಂ|| ಶೋಕಮನುರೆ ಪರ್ಬಿಸಿದನ |
ಶೋಕಂ ನೀನೆಂತುಟಾದೆ? ದುಷ್ಕೀರ್ತಿಯನೀ ||
ನಾಕಲ್ಪಾಂತಂ ಗಳಿಸಿದೆ |
ಲೋಕದೆ ಛೀ! ನಿನ್ನ ಬಾಳಿಕ್ಕೆಯಂ ಸುಡು ದುರುಳಾ ||

ಹಾ:—ಮೌರ್ಯವಂಶಕುಠಾರ! ನೃಪವಂಶದಾವಾನಲ! ರಾಜಕುಲಕಳಂಕ! ಚಂಡಾಶೋಕ!!

ಕಂ|| ಸೋದರರಂ ಕೊಂದುರೆ ಸಂ |
ಪಾದಿಸಿದಾ ವಿಭವಮೆಂದುಮಗಲದೆ ನಿನ್ನಂ?||
ಮೇದಿನಿಯೊಳ್ ಚಿರಕಾಲಂ |
ಮೋದದೊಳಿರ್ದನುಭವಿಸುವೆ ಸೊಗಮಂ ಪಾಪೀ ||೧೬||

[ಇಬ್ಬರೂ ಬರುತ್ತಿರುವರು]

ಸುವೃತ್ತೆ:—ಸಖಿ! ಭಯವನ್ನು ಬಿಟ್ಟು ನಡೆ!

ಚಂದ್ರ:—ಸಖಿ! ಅಂಧಕಾರದಿಂದ ದಾರಿಯೇ ಕಾಣುವುದಿಲ್ಲವಲ್ಲ?

ಸುವೃತ್ತೆ:—ತಲೆತಪ್ಪಿಸಿಕೊಂಡು ಓಡುವ ನಮಗೆ ದಾರಿಯಾವುದು? ದಿಕ್ಕಾವುದು?

ಚಂದ್ರ:—

ವೃ|| ದುಗುಡಂ ಮನ್ಮನಮಂ ವಲಂ ಮುಸುರ್ದವೋಲ್ ಪರ್ವಿತ್ತುಮರ್ವೆತ್ತಲುಂ |
ಮಿಗೆ ಹಾರ್ದ್ಯಾನ್ವಯದಂತೆ ಶೂನ್ಯಮೆನೆ ತೋರ್ಕುಂ ನಿರ್ಜನಂ ಕಾನನಂ ||
ನೆಗಟ್ದೀ ಹಿಂಸ್ರಮೃಗಾರವಂ ಪ್ರಬಲ ಚಂಡಾಶೋಕದರ್ಪಂಬೊಲೇಂ |
ಬಗೆಯಂ ಭೀತಿಗೊಳಿಪ್ಪುದೋ? ಅಕಟ! ಧೈರ್ಯಂಗೊಳ್ವೆನೆಂತಾಂಸಖೀ||೧೭||

ಸುವೃತ್ತೆ:—ಸಖಿ! ಅಂತಃಪುರದಲ್ಲಿ ಅನೇಕ ಪರಿಚಾರಿಣಿಯರಿಂದ ಸೇವೆಗೊಳ್ಳುತ್ತಿದ್ದ ಯುವರಾಜ್ಞಿಯಾದ ನಿನಗೆ ಇಂತಹ ಕಷ್ಟವನ್ನು ತಂದೊಡ್ಡಿದ

ಆ ವಿಧಿಯು ಇನ್ನೆಷ್ಟು ನಿರ್ದಯನೋ? ಕಲ್ಲುಮುಳ್ಳುಗಳೆನ್ನದೆ ಬಸವಳಿದು ಮಾರ್ಗಕ್ರಮಣಮಾಡುವ ನಿನ್ನನ್ನು ನೋಡುವ ನನ್ನ ಕಣ್ಣುಗಳು ಒಡೆಯದೆ ಇರುವವಲ್ಲ! ಅಯ್ಯೋ! ಅಯ್ಯೋ!

ಚಂದ್ರ:—[ಕಣ್ಣೀರು ಸುರಿಸುತ್ತ] ಸಖಿ! ನನ್ನ ಅಂತಃಪುರದ ಸೌಖ್ಯವನ್ನೇಕೆ ಜ್ಞಾಪಿಸುವೆ? ನನ್ನ ಯುವರಾಜ್ಞೀತ್ವವೂ ನನ್ನ ಸೌಮಂಗಲ್ಯದೊಡನೆಯೇ ಸುಟ್ಟು ಬೂದಿಯಾಯಿತು!! [ಅಳುವಳು]

ಸುವೃತ್ತೆ:—ಒಡತಿ! ಅಳಬೇಡ! [ಕಣ್ಣೀರೊರಸಿ] ಪ್ರಾರಬ್ಧಕರ್ಮಫಲವನ್ನು ಅನುಭವಿಸದಿದ್ದರೆ ತೀರದು!

ಚಂದ್ರ:—ಸಖಿ! ಸುವೃತ್ತೆ! ನಿರ್ಭಾಗ್ಯಳಾದ ನನ್ನನ್ನು "ಒಡತಿ" ಎಂದು ಏಕೆ ಸಂಬೋಧಿಸುವೆ?! ಪ್ರಾಣರಕ್ಷಣತತ್ಪರಳಾಗಿ ಅನ್ಯಾಶ್ರಯವನ್ನು ಅಪೇಕ್ಷಿಸಿ ಓಡುತ್ತಿರುವ ನನ್ನಿಂದ ಯಾರಿಗೇನು ಪ್ರಯೋಜನವಿರುವುದು?! [ದುಃಖಿಸುವಳು]

ಸುವೃತ್ತೆ:—ತಾಯೆ! ಬಾಲ್ಯದಿಂದಲೂ, ನಿನ್ನಿಂದ ಪೋಷಿತಳಾಗಿ ನಿನ್ನ ಕಷ್ಟ ಸಮಯದಲ್ಲಿಯಾದರೂ ಒಂದಿಷ್ಟು ಸಹಾಯಮಾಡಲು ಅಸಮರ್ಥಳಾದ ನನ್ನ ಬಾಳು ಏಕೋ?

ಚಂದ್ರ:—ಸಖಿ! ಸಂಪತ್ತಿನ ಸಮಯದಲ್ಲಿ ಮಾತ್ರ ಅನೇಕರು ಆಪ್ತರಂತೆ ಓಲೈಸುವರು. ಆಪತ್ಸಮಯದಲ್ಲಿಯೂ ನನ್ನನ್ನು ಎಡೆಬಿಡದ ನಿನ್ನ ಕೃತಜ್ಞತೆಯನ್ನು ಎಷ್ಟೆಂದು ಶ್ಲಾಘಿಸಲಿ! ನೀನೇ ಇಲ್ಲದಿದ್ದರೆ ನನ್ನನ್ನು ಕೇಳುವವರಾದರೂ ಯಾರಿದ್ದರು? ನಿನ್ನ ಧೈರ್ಯದಿಂದ ಇಷ್ಟುಮಟ್ಟಿಗೆ ಪ್ರಾಣಗಳನ್ನಾದರೂ ಧರಿಸಿರುವೆನು. [ನಿಟ್ಟುಸಿರು ಬಿಡುವಳು]

ಸುವೃತ್ತೆ:—ತಾಯಿ! ನವಮಾಸಗರ್ಭಿಣಿಯಾದ ನಿನಗೆ ಸದ್ಯದಲ್ಲಿ ಒಬ್ಬ ಸಭ್ಯಗೃಹಸ್ಥರ ಮನೆಯಲ್ಲಿ ಆಶ್ರಯದೊರೆಯಿತೆಂದರೆ ಅಲ್ಲಿಗೆ ನಾನು ಕೃತಾರ್ಥಳು! [ನಡೆಯುತ್ತಾ] ಪಾಟಲೀಪುತ್ರದಿಂದ ಈಗ ನಾವು ಬಹುದೂರದಲ್ಲಿರುವೆವು; ಮಾರ್ಗವನ್ನು ಲಕ್ಷಿಸದೆ ಕಾಡುಗಳನ್ನು ಹೊಕ್ಕು ಹೊರಟು ಬಂದಿರುವ ನಮಗೆ ಇನ್ನು ನಮ್ಮ ಶತ್ರುಗಳಿಂದ ಅನಿಷ್ಟವೊದಗುವುದೆಂಬ ಭಯಕ್ಕೆ ಕಾರಣವಿಲ್ಲ.

ಚಂದ್ರ :—ಸಖಿ! ಆ ಭಾಗದಲ್ಲಿ ಭಯವೇನೋ ದೂರವಾಯಿತು; ನಮ್ಮ ವಯೋರೂಪಗಳಿಂದ ಮತ್ತೊಂದು ವಿಧವಾದ ಭಯವೊದಗಿದರೆ ಗತಿ ಯೇನು? ಸ್ತ್ರೀಯರ ಜನ್ಮವು ಹೇಗೂ ಕಷ್ಟಮಯವಲ್ಲವೆ?

ಸುವೃತ್ತೆ :—ದೇವಿ! ಚಿಂತಿಸಬೇಡ! ಸೂರ್ಯೋದಯವು ಸಮೀಪಿಸುತ್ತಾ ಬಂದಿತು! ಲೋಕಬಾಂಧವನ ಅನುಗ್ರಹದಿಂದ ನಮ್ಮ ಕಷ್ಟಗಳು ತೊಲಗು ವುವು.

ಚಂದ್ರ :—[ಕೈಮುಗಿದು] ಭಗವಂತನಾದ ಸೂರ್ಯನಾರಾಯಣ!

ಕಂ|| ನೀನಾಪನ್ನರ ಮಿತ್ರಂ |
ನೀನೇ ವರಲೋಕಬಾಂಧವಂ ದಿನರಾಜಂ ||
ನೀನೆ ಜಗಚ್ಚಕ್ಷು ಕಣಾ |
ನೀನಲ್ತೆ ಕರ್ಮಸಾಕ್ಷಿ ಪೊರೆ ಪರಮೇಶಾ ||೧೮||

ಸುವೃತ್ತೆ :—ಸಖಿ! ಇಲ್ಲಿ ಒಂದು ಕಾಲುದಾರಿ ಹೋಗುತ್ತಿರುವುದು; ನಾವು ಇದನ್ನು ಅನುಸರಿಸಿದರೆ ಯಾವುದಾದರೊಂದು ಊರನ್ನು ಸೇರುವೆವು.

ಚಂದ್ರ :—ಸಖಿ! ಹಾಗೆಯೇ ಆಗಲಿ! ನಡೆ! [ಹೊರಟುಬರುತ್ತ] ಆಹಾ! ಯಾವುದೋ ಬೆಟ್ಟದ ಬುಡಕ್ಕೆ ಬಂದೆವಲ್ಲ!

ಸುವೃತ್ತೆ :—ಸಖಿ! ಅಂಜಬೇಡ! ಅಗೋ! ಅಲ್ಲಿ ಒಂದು ಜನನಿವಾಸವು ಇರು ವಂತೆ ತೋರುವುದು.

ಚಂದ್ರ :—[ಮುಂದೆನೋಡಿ] ಆಹಾ! ಯಾರೋ ಇತ್ತಕಡೆ ಬರುತ್ತಿರುವರು; ಇವರ ವೇಷಭಾಷೆಗಳು ನನ್ನ ಭಯವನ್ನು ಹೆಚ್ಚಿಸುವುವಲ್ಲ! [ನಡುಗುವಳು]

ಸುವೃತ್ತೆ :—ಸಖಿ! ಧೈರ್ಯವನ್ನು ತಳೆ! ಇವರು ಕಾಪಟ್ಯವನ್ನರಿಯದ ಅರಣ್ಯ ನಿವಾಸಿಗಳಂತಿರುವರು. ಇಲ್ಲಿಯೇ ಸ್ವಲ್ಪ ನಿಲ್ಲು! [ಇಬ್ಬರೂ ಮರೆಯಲ್ಲಿ ನಿಲ್ಲುವರು]

[ಅನಂತರ ಕೆಲವುಮಂದಿ ಕಿರಾತಕರು ಪ್ರವೇಶಿಸುವರು]

ಕಿರಾತಕರು :—ಶರಷಟ್ಪದಿ|| ಬನ್ನಿರಿ ಗೆಳೆಯರೆ |
ಬನ್ನಿರಿ ಬೇಗನೆ |
ಬನ್ನಿರಿ ಬೇಂಟೆಗೆ ನಲಿಯುತ್ತೆ ||

ಬನ್ನವನೆಸೆಯದೆ |
ಚೆನ್ನನೆ ನಾಯ್ಗಳ |
ಮುನ್ನಮೆ ನಡೆಯಿಸಿ ಬಿಸದಿಸುವ ||೧೯||
ಬಲೆಗಳ ಬೀಸುತೆ |
ಮೊಲಗಳ ಕೆಡೆವುವ |
ಛಲದಿಂ ಮಿಗಗಳ ಕುತ್ತಿಡುವ ||
ಸಲವಿಂ ಮಿಾಂಗಳ |
ಸಲೆ ಗಾಳದೆ ಪಿಡಿ |
ದೆಳೆಯುವ ಪಕ್ಕಿಯ ತಂಡವನು ||೨೦||
ನಟ್ಟು ಸಬಳದಿಂ |
ಕೆಟ್ಟ ಸೆಲಗಗಳ |
ಕುಟ್ಟಿ ಕರಡಿ ಹುಲಿ ಕೋಣಗಳ ||
ಜಟ್ಟಿಗಳೆನೆ ನಡು |
ಕಟ್ಟೆನಡೆವ ಬೊ |
ಬ್ಬಿಟ್ಟು ಮೃಗಾಳಿಯನೆಬ್ಬಿಸುವ ||೨೧||

ಕಾಟ:—ಎಲಾ! ಬೋರ! ಮೊಲದ ಮಾಂಸ ತಿಂದು ಬಲುದಿನವಾಯಿತಲ್ಲಾ!

ಬೋರ:—ಕಾಟಣ್ಣಾ! ಈ ಕಾಡಿನಲ್ಲಿ ಒಳ್ಳೊಳ್ಳೆಯ ಹಕ್ಕಿಗಳಿವೆ. ಹಕ್ಕಿಯ ಬೇಟೆ ಬಲು ಸೊಗಸಲ್ಲವೆ?

ಬುಕ್ಕ:—ಎಲೇ! ಅಣ್ಣಗಳಿರಾ! ಸಂಜೆಯವರೆಗೂ ಸುತ್ತಾಡಿ ಬೇಕಾದಷ್ಟು ಕೊಳ್ಳೆಯನ್ನು ಹೊಡೆದುಕೊಂಡು ಬರುವ! ನಡಿಯಿರೋ!

ಚೊಕ್ಕ:—ಏನಿರೋ? ಕೋಲು, ಕಣ್ಣಿ, ಬಲೆ, ಗಾಳ, ಅಂಟು ಇವೆಲ್ಲವನ್ನೂ ತಂದಿರುವಿರೇನೋ?

ತಾಳ:—ಹೂಂ! ಕಾಣಲಾ! ನಡಿಯಿರಿ! ಬುರುಡೆಯಲ್ಲಿ ಹೆಂಡ, ಕಲ್ಲಿಯಲ್ಲಿ ಬುತ್ತಿ, ಚೀಲದಲ್ಲಿ ಅಡಕೆಯೆಲೆ, ತುಂಬಿರುವಾಗ ನಮಗೆ ಸಂಜೆಯವರೆಗೂ ಕೊರತೆಯೇನು? [ಅಷ್ಟರಲ್ಲಿ ವೀರನಾಯಕನು ಪ್ರವೇಶಿಸಿ]

ವೀರ:—ಏನಿರೆಲೆ! ಇನ್ನೂ ಇಲ್ಲಿಯೇ ಇರುವಿರಿ! ಹೊತ್ತೇರಲಿಲ್ಲವೇ? ಎಲ್ಲರೂ ಬಂದಿರುವಿರೋ?

ಎಲ್ಲರೂ :—ಒಡೆಯ ! ಎಲ್ಲರೂ ಬಂದಿರುವೆವು; ದಣಿಯು, ಯಾರು ಯಾರು ಯಾವಯಾವ ಕೆಲಸಕ್ಕೆ ಹೋಗಬೇಕೆಂದರೆ ಅದಕ್ಕೆ ಹೋಗುವೆವು.

ವೀರ :—ಎಲೋ ಕಾಟಣ್ಣ ! ನೀನು ಹತ್ತುಮಂದಿಯನ್ನು ಕರೆದುಕೊಂಡು ಮೊಲ ಜಿಂಕೆಗಳ ಬೇಟೆಗೆ ಹೊರಡು ; ಬುಕ್ಕ ! ಬಲೆ ಬೀಸಿ ಹಕ್ಕಿಗಳನ್ನು ಹಿಡಿಯುವಕೆಲಸ ನಿನ್ನದು. ಎಲೋ ಕಾಳ ! ನೀನು ನಿನ್ನ ಸಂಗಡಿಗ ರೊಡನೆ ನನ್ನೊಂದಿಗೆ ಹೊರಟು ಹುಲಿ, ಕರಡಿ, ಹಂದಿ, ತೋಳ ಮೊದ ಲಾದ ದುಷ್ಟಮೃಗಗಳನ್ನು ಬೇಟೆಯಾಡಿ, ಚರ್ಮ, ಉಗುರು, ದಂತ, ಕೊಂಬು ಇವೆಲ್ಲವನ್ನೂ ಕೂಡಿಸಿಕೊಂಡು ಬರಬೇಕು. ಬೋರನು ಕಾಡಿ ನಲ್ಲಿ ಸುತ್ತಿ ಜೇನುತುಪ್ಪ, ಮೇಣ ಮೊದಲಾದುವನ್ನು ಕೂಡಿಹಾಕಿ ಕೊಂಡು ಬರಲಿ. ಎಲ್ಲಿ ? ಕೊಂಬು ತಮಟೆಗಳನ್ನು ಬಾಜಿಸಿಕೊಂಡು ಪದಗಳನ್ನು ಹಾಡುತ್ತ ಕೇಕೆಹಾಕಿ ನಡೆಯಿರಿ !

[ಎಲ್ಲರೂ ಹಾಗೆಯೇ ಮಾಡುತ್ತ ಹೊರಡುವರು]

ಕಾಟ :—[ಮುಂದೆ ನೋಡಿ] ಒಡೆಯನೆ ! ಇಲ್ಲಿ ಯಾರೋ ಇಬ್ಬರು ಹೆಂಗು ಸರು ದಾರಿತಪ್ಪಿ ಕಂಗೆಟ್ಟಿರುವಂತಿದೆ !

ವೀರ :—ಅಯ್ಯೋ ಪಾಪ ! ಆ ಬಡಪಾಯಿಗಳ ವಿಷಯವನ್ನು ವಿಚಾರಿಸಿ ತಿಳಿದು ನಮ್ಮಿಂದಾಗುವಷ್ಟು ಸಹಾಯವನ್ನು ಮಾಡುವ ! [ಎಂದು ಸಮೀಪಕ್ಕೆ ಬಂದು] ಅಮ್ಮಾ ! ನೀವು ಯಾರು ?

ಚಂದ್ರ :—[ನಡುಗುತ್ತ ಬಿಕ್ಕಿ ಬಿಕ್ಕಿ ಅಳುವಳು]

ಸುವೃತ್ತೆ :—ಅಪ್ಪಾ ! ನಮಗೇಕೋ ಬಹು ಭಯವಾಗುತ್ತಿದೆ !

ವೀರ :—ಅಮ್ಮಾ ! ನೀವು ನಾಗರಿಕರಾದ ಹೆಂಗುಸರಂತಿದೆ ; ಕಾಡುಜನಗಳಾದ ನಮ್ಮ ನಡೆನುಡಿಗಳು ಒರಟಾಗಿರುವುದರಿಂದ ನಿಮಗೆ ಭಯವಾಗಬಹುದು; ನೀವು ಅಂಜಬೇಡಿ.

ಸುವೃತ್ತೆ :—ಅಯ್ಯಾ ! ದಯಾಳುವೆ ! ನಾವು ಅನಾಥರು ! ದಿಕ್ಕುಗೆಟ್ಟು ಬಂದಿರುವೆವು !

ವೀರ :—ಅಯ್ಯೋ ! ಪಾಪ ! ನಿಮ್ಮನ್ನು ನೋಡಿದರೆಯೇ ತುಂಬ ದುಃಖಗೊಂ ಡಿರುವಂತೆ ಕಾಣುವುದು ! ನಿಮ್ಮ ಸಂಗತಿಯನ್ನು ನನ್ನೊಡನೆ ಹೇಳಬಹು ದಾಗಿದ್ದರೆ ಹೇಳಿರಿ !

ಸುವೃತ್ತೆ :—ಅಯ್ಯಾ! ಪುಣ್ಯಾತ್ಮ! ಪಾಪಿನಿಯರಾದ ನಮ್ಮ ಚರಿತ್ರೆಯನ್ನು ಕೇಳುವುದರಿಂದ ಏನೂ ಪ್ರಯೋಜನವಿಲ್ಲ.

ವೀರ :—ಒಳ್ಳೆಯದು; ನೀವು ಈಗ ಎಲ್ಲಿಗೆ ಹೋಗಬೇಕೆಂದಿರುವಿರಿ? ನನ್ನಿಂದೇನಾದರೂ ಸಹಾಯವು ಆಗಬೇಕಾಗಿದ್ದರೆ ಹೇಳಿರಿ.

ಸುವೃತ್ತೆ :—ಅಪ್ಪಾ! ಶಾಂತಹೃದಯ! ನಾವು ಎಲ್ಲಿಗೆ ಹೊರಟಿರುವೆವೆಂದು ಹೇಳೋಣ!! ನಮಗೆ ಯಾವ ಪುಣ್ಯಾತ್ಮರು ಆಶ್ರಯಕೊಟ್ಟರೆ ಅವರೇ ತಾಯಿತಂದೆಗಳು!

ವೀರ :—ಅಮ್ಮಾ! ನೀವು ಪೂಜ್ಯರಾದ ನಾಗರಿಕರು; ನಾವಾದರೋ ಅನಾಗರಿಕರಾದ ಚಂಡಾಲರು! ಆದರೂ ನಿಮ್ಮ ನುಡಿಗಳು ನನ್ನ ಎದೆಯನ್ನು ಕರಗಿಸುತ್ತಿವೆ! ಏನುಮಾಡಲಿ! ನಾನು ನಿಮಗೆ ಯಾವ ಸಹಾಯವನ್ನು ಮಾಡಲಿ!

ಸುವೃತ್ತೆ :—ಅಪ್ಪಾ! ಭದ್ರಮುಖನೆ! ಇಂತಹ ಪರಮದಯಾಶಾಲಿಯಾದ ನಿನ್ನನ್ನು ಚಂಡಾಲನೆಂದು ಭಾವಿಸುವುದು ಅಸಂಗತವು: ನಾವಾದರೋ ಧರ್ಮಬಾಹಿರರಾದ ಚಂಡಾಲರ ಸೆರೆಯಿಂದ ತಪ್ಪಿಸಿಕೊಂಡು ಬಂದಿರುವೆವು. ನಮಗೆ ನೀನೇ ದಿಕ್ಕು!

ವೀರ:—ಅಮ್ಮಾ! ನನ್ನಿಂದ ನಿಮಗೆ ಯಾವ ಸೇವೆಯಾಗಬೇಕು!

ಸುವೃತ್ತೆ :—ಪುಣ್ಯವಂತನೆ! ನೀನು ನಮ್ಮಲ್ಲಿ ತೋರುತ್ತಿರುವ ದಯೆಗೆ ದೇವರು ನಿನಗೆ ಮಂಗಳವನ್ನುಂಟುಮಾಡಲಿ! ನನ್ನ ಒಡತಿಯಾದ ಈಕೆಯು ನವಮಾಸಗರ್ಭಿಣಿ! ಈ ವಿಷಮಸಮಯದಲ್ಲಿ ಈಕೆಯನ್ನು ಸಂರಕ್ಷಿಸಿ ಪುಣ್ಯವನ್ನು ಸಂಪಾದಿಸಿಕೋ! ನೀನೇ ನಮ್ಮ ಭಾಗದ ದೇವರು!

ವೀರ:—[ದುಃಖದಿಂದ] ಅಯ್ಯೋ! ಎಂತಹ ಕಷ್ಟಕಾಲ?! [ನಿಟ್ಟುಸಿರು ಬಿಡುತ್ತ] ಅಮ್ಮಾ! ನಮ್ಮ ಮನೆಯಲ್ಲಿರುವುದಾದರೆ ದಯೆಮಾಡಿ ಬನ್ನಿರಿ! ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆ ಕಾಪಾಡುವೆನು. ನೀವು ಸ್ವಲ್ಪವಾದರೂ ಸಂಕೋಚಪಡಬೇಕಾದುದಿಲ್ಲ.

ಸುವೃತ್ತೆ :—ಮಾರಾಯ! ನಿನ್ನ ಹೊಟ್ಟೆ ತಣ್ಣಗಿರಲಿ! ಸಖಿ! ಚಂದ್ರಮತಿ! ಧರ್ಮಾತ್ಮನಾದ ಈತನ ಆಶ್ರಯವನ್ನು ಭಗವಂತನೇ ನಮಗೆ ಅನುಗ್ರಹಿಸಿದನು.

ಚಂದ್ರ :—ಸಖಿ! ಸುವೃತ್ತೆ! ನಿನ್ನ ಉಪಕಾರವನ್ನು ಎಷ್ಟೆಂದು ನೆನೆಯಲಿ? ನಡೆ; ವೂಜ್ಯನಾದೀತನ ಮನೆಯನ್ನು ಸೇರುವ! [ಚಂಡಾಲಪ್ರಮುಖ ನನ್ನು ಕುರಿತು] ತಂದೆಯೆ! ನಿಮ್ಮ ಮನೆಯೆಲ್ಲಿರುವುದು?

ವೀರ :—ಅವಮ್ಮಾ! ನಮ್ಮ ಗುಡಿಸಲು ಹತ್ತಿರದಲ್ಲಿಯೇ ಇರುವುದು! ನನ್ನೊಡನೆ ಬನ್ನಿರಿ!

ಇಬ್ಬರೂ :—ಪೂಜ್ಯನೆ! ಇದೋ ಬರುತ್ತಿರುವೆವು.

[ಎಲ್ಲರೂ ಹೊರಟುಹೋಗುವರು]

ಇದು ಪ್ರಥಮಾಂಕವು.

ದ್ವಿತೀಯಾಂಕ.

[ಸಮುದ್ರಗುಪ್ತನೆಂಬ ಭಿಕ್ಷು ಪ್ರವೇಶಿಸಿ]

ಸಮುದ್ರ :—ವೃ|| ಅಸ್ಥಿರಮೆಲ್ಲ ಜೀವಿಗಳ ಜೀವಿತಮುಂ ಜಲಬುದ್ಬುದಂ ಬೊಲಂ!
ತಸ್ಥಿರಮಲ್ತೆ? ಸರ್ವವಿಭವಂಗಳುಮೊಪ್ಪುವ ಯೌವನಂ ವಲಂ||
ಅಸ್ಥಿರಮಲ್ತೆ? ಭೋಗಸುವಿಲಾಸ ವಿಚಿತ್ರವಿನೋದದೇಳ್ಗೆ ಮೇ|
ಣಸ್ಥಿರಮಾಪ್ತಬಂಧು ಜನಸಂಗತಿ; ಬುದ್ಧನನುಗ್ರಹಂ ಸ್ಥಿರಂ||

ಪ್ರಪಂಚದ ವ್ಯಾಪಾರವು ಅತಿವಿಚಿತ್ರವಾಗಿರುವುದು! ದುರಾಶಾಪಿಶಾಚವು ಆಬಾಲವೃದ್ಧರಲ್ಲಿ ಒಬ್ಬರನ್ನಾದರೂ ಬಿಟ್ಟುದಿಲ್ಲ. ರಾಜರಿಗೆ ರಾಜ್ಯಲೋಭ! ಧನಿಗಳಿಗೆ ಧನಾಕಾಂಕ್ಷೆ! ಯುವಕರಿಗೆ ಸ್ತ್ರೀಲಾಲಸೆ! ಸ್ತ್ರೀಯರಿಗೆ ಸ್ವರ್ಣಪ್ರೈತ್ಯ! ಅಕ್ಕಟಾ! ತಮ್ಮ ಇಷ್ಟಾರ್ಥಸಿದ್ಧಿಗಾಗಿ ಲೋಕದಲ್ಲಿ ಎಂತಹ ಸಾಹಸವನ್ನಾದರೂ ಮಾಡುವರು! ಸ್ವಪ್ರಯೋಜನಕ್ಕಾಗಿ ಪರೋಪದ್ರವಕೊಡಲು ಎಳ್ಳಷ್ಟೂ ಹಿಂಜರಿಯರು! ಪರದುಃಖದಲ್ಲಿ ಅನುತಾಪವೆಂಬುದು ಸ್ವಪ್ನದಲ್ಲಿಯೂ ಅಗೋಚರ! ನೆರೆಮನೆಯಲ್ಲಿ ಹೊಟ್ಟೆಗಿಲ್ಲದೆ ನೊರಗಿ ಸಾಯುತ್ತಿದ್ದರೂ ತಾವು ಹಬ್ಬದೂಟದಿಂದ ಹಿಗ್ಗುವರು; ಇದಿರುಮನೆಯಲ್ಲಿ ರೋಗದಿಂದ ನರಳುತ್ತಿದ್ದರೆ ತಮ್ಮ ಮನೆಯಲ್ಲಿ ಪುತ್ರೋತ್ಸವದ ಆನಂದವನ್ನು ನಿಶ್ಚಿಂತರಾಗಿ ಅನುಭವಿಸುವರು! [ಆಕಾಶದಲ್ಲಿ ದೃಷ್ಟಿಯಿಟ್ಟು] ಬುದ್ಧ! ಬುದ್ಧ!? ನಿನ್ನ ಪರಮಾನುಗ್ರಹವು ಫಲಿಸುವು

ದೆಂದಿಗೆ? [ಬರುತ್ತಾ] ಇಲ್ಲಿ ಯಾವುದೋ ಒಂದು ರಮ್ಯವಾದ ಕಟ್ಟಡವೂ, ಮನೋಹರವಾದ ಉದ್ಯಾನವೂ ಕಾಣುತ್ತಿರುವುವು; ಇಲ್ಲಿ ಸ್ವಲ್ಪ ವಿಶ್ರಮಿಸಿ ಕೊಂಡು ಮುಂದಕ್ಕೆ ಹೊರಡುವೆನು. [ಎಂದು ಉದ್ಯಾನವನವನ್ನು ಪ್ರವೇಶಿಸಿ] ಆಹಾ:—ಜನಸ್ಥಲಗಳಿಗಿಂತ ವನಸ್ಥಲಗಳು ನಿಜವಾಗಿ ರಮ್ಯವೆನಿಸಿರುವುವು.

ವೃ|| ಪರಚಿತ್ತಕ್ಕುರುಮೋದವಿತ್ತು ಮೆರೆವೀ ಪೂವಲ್ಲಿಯಿಂದಂ, ನಿರಂ |
ತರಮುಂ ನಿರ್ಮಲಭಾವಮಂ ಪ್ರಕಟಿಪಂಭೋಜಾತಷಂಡಂಗಳಿಂ ||
ಪರರಂ ಸೇವಿಸಿ ತಾಂ ಕೃತಾರ್ಥಮೆನಿಪೀ ತಂಗಾಳಿಯಿಂ ಮೇಣ್ ಸ್ವರೋ|
ತ್ಕರದಿಂ ಲೋಕಕೆ ಮೋದಮೀವ ಖಗದಿಂದೀಸುಸಂದನಂ ಶೋಭಿಕುಂ ||

[ನೋಡುತ್ತ] ಬುದ್ಧದೇವನ ಅನುಗ್ರಹವನ್ನು ಇಲ್ಲಿ ಮಾತ್ರ ಕಾಣಬಹುದು.

ವೃ|| ಮುಗುಳೊಳ್ ಮಂದಸ್ಮಿತಂ ಬಳ್ಳಿಗಳೊಳೆ ಸುಮನೋವೈಭವಂ ಶುದ್ಧಸತ್ವಂ|
ಮಿಗೆ ಕಾಸಾರಂಗಳೊಳ್, ನಮ್ರತೆಫಲತರುವೊಳ್, ಶುದ್ಧಭಾವಂ ವಲಂ ಮ||
ಲ್ಲಿಗೆಯೊಳ್ ಧರ್ಮಾನುರಾಗಂ ಪುದಿದೆಳದಳಿರೊಳ್ ವಾಯುವೊಳ್ ಸಂದ [ದಾಕ್ಷಿ |
ಣ್ಯಗುಣಂ ಸನ್ಮಾರ್ದವಂ ಕೋಕಿಲಕಲರವದೊಳ್ ತೋರ್ಪುದೆತ್ತಂ ವಿಚಿತ್ರಂ||

ಪಕ್ಷಿಕೂಜನವ್ಯಾಜದಿಂದ ಸ್ವಾಗತವನ್ನು ಬಯಸುತ್ತಿರುವ ಈ ರಸಾಲ ರಾಜನ ಸತ್ಕಾರವನ್ನು ಪರಿಗ್ರಹಿಸುವೆನು [ಎಂದು ಹೋಗಿ ಮರದಡಿಯಲ್ಲಿ ಕುಳಿತು] ಎಲೆ ಸಹಕಾರರಾಜ!

ಕಂ|| ಬಿಸಿಲೊಳ್ ದಣಿದಿರ್ದುಂ ಸಂ |
ತಸದಿಂದಂ ಪಾಂಥ ಜನಕೆ ತಣ್ಣೆಳಲಿತ್ತೀ ||
ನೆನೆಪಯ್ ಕರಮುಪಚಾರಮ |
ನಸಮಂ ಗಡ! ನೀಂ ರಸಾಲ! ವಸುಧಾತಲದೊಳ್ ||೨೪||

ಮಾಕಂದಾಶ್ರಮದಲ್ಲಿ ಧರ್ಮೋಪದೇಶವನ್ನು ಮಾಡುತ್ತಿರುವ ಶುಕಾ ಚಾರ್ಯ! ಅಸಾಧುಲೋಕವು ಮಹಾತ್ಮನಾದ ನಿನ್ನನ್ನು ಪಂಜರಬಂಧನಕ್ಕೆ ಗುರಿ ಮಾಡಿದರೂ, ನೀನು ಧರ್ಮರಹಸ್ಯವನ್ನು ಬಿಡದೆ ವಿಸ್ತರಿಸುತ್ತಲೇ ಇರುವೆಯಲ್ಲವೆ? ಪರಮಶಾಂತನಾದ ನೀನೇ ಧನ್ಯನು!

[ಅನಂತರ ಅನುಚರರೊಡನೆ ಚಂಡಗಿರಿಕನೆಂಬ 'ನರಕಾ' ಧಿಪತಿಯು ಪ್ರವೇಶಿಸುವನು]

ಚಂಡಗಿರಿಕ:—ಎಲೈ ದುರ್ಮುಖದುರ್ಮರ್ಷಣರೇ! ಈ ದಿನ ಯಾವ ನರ ಪ್ರಾಣಿಗಳು ನಮ್ಮ 'ನರಕ' ಕ್ಕೆ ಸಿದ್ಧವಾಗಿರುವುವೋ ನೋಡಿ.

ದುರ್ಮುಖ:—ಒಡೆಯನೇ! ಈ ವನದ ಸೌಂದರ್ಯವು ಮಾನವರನ್ನು ಬರಮಾಡದೆ ಇದ್ದೀತೆ? ನಿನ್ನ ಅಧಿಕಾರವು ಅಪ್ರತಿಹತವಾಗಿ ನಡೆಯುತ್ತಲೇ ಇರುವುದು.

ದುರ್ಮರ್ಷಣ:—ಯುವರಾಜ! ಅಲ್ಲಿನೋಡು! ಯಾವುದೋ ಒಂದು ಶಲಭವು ಬೆಂಕಿಯಲ್ಲಿ ಬೀಳಲು ಸಿದ್ಧವಾಗಿರುವುದು.

ಚಂಡ:—[ಸಂತೋಷದಿಂದ] ಸಿದ್ಧವಾಗಿರುವುದೋ? ಸರಿ ಸರಿ! ಲೆಕ್ಕಕ್ಕೆ ಸೇರಿಸಿಬಿಡಿ. [ಅನುಚರರೊಡನೆ ಭಿಕ್ಷುವಿನ ಸಮೀಪಕ್ಕೆ ಬಂದು] ಎಲೈ ನೀನಾರು?

ಸಮುದ್ರ:—ಅಯ್ಯಾ! ನಾನೊಬ್ಬ ಸಂನ್ಯಾಸಿಯು!

ಚಂಡ:—ಇಲ್ಲಿಗೇತಕ್ಕೆ ಬಂದೆ?

ಸಮುದ್ರ:—ಮಾರ್ಗಾಯಾಸದಿಂದ ವಿಶ್ರಾಂತಿಗೊಳ್ಳಲು ಬಂದೆನು; ಏಕೆ ಕೇಳಿದೆ? ಹೀಗೆ ಮಾಡುವುದಕ್ಕೆ ಏನಾದರೂ ಆಕ್ಷೇಪಣೆಯುಂಟೇನು?

ಚಂಡ:—ಆಕ್ಷೇಪಣೆಯೇನೂ ಇಲ್ಲ; ವಿಶ್ರಾಂತಿಗಾಗಿ ಒಳ್ಳೆಯ ಸ್ಥಳಕ್ಕೇ ಬಂದೆ.

ಸಮುದ್ರ:—ಏನು? ಒಳ್ಳೆಯ ಸ್ಥಳವಲ್ಲವೆ?

ಚಂಡ:—ಅಲ್ಲವೆಂದೆನೆ? ಇಲ್ಲಿಯ ವಿಶ್ರಾಂತಿಮಹಿಮೆಯನ್ನು ವರ್ಣಿಸಲು ಅಸಾಧ್ಯ!

ಸಮುದ್ರ:—ಅದೇನು?

ಚಂಡ:—ಶಾಶ್ವತವಾದ ವಿಶ್ರಾಂತಿಯೇ ಇಲ್ಲಿ ದೊರೆಯುವುದು.

ಸಮುದ್ರ:—ಬೌದ್ಧ ಬಿಕ್ಷುಗಳು ಅದನ್ನೇ ತಾನೇ ಅಪೇಕ್ಷಿಸುವರು.

ಚಂಡ:—ಬಿಕ್ಷುಗಳಿಗೇ ಏಕೆ? ಈ ಸ್ಥಳವನ್ನು ಪ್ರವೇಶಿಸಿದವರಿಗೆಲ್ಲಾ ಮೋಕ್ಷ ಸಿದ್ಧಿಯಾಗುವುದು!

ಸಮುದ್ರ:—ಅಯ್ಯಾ ಮಹಾತ್ಮನೆ! ಇಲ್ಲಿಯ ವಿಶೇಷವೇನು!

ಚಂಡ:—ಚೆನ್ನಾಗಿ ವಿಮರ್ಶಿಸಿ ನೋಡುತ್ತ ಬಂದರೆ ಇಲ್ಲಿಯ ವಿಶೇಷವು ತಾನಾಗಿಯೇ ತಿಳಿಯುವುದು.

ಸಮುದ್ರ:—ಈ ವನದ ರಚನೆಯಂತೂ ವಿಚಿತ್ರವಾಗಿರುವುದು.

ಚಂಡ:—ನಿಜ ನಿಜ! ಇದು ಮಿಕ್ಕ ಉದ್ಯಾನವನಗಳಂತಲ್ಲ!

ಸಮುದ್ರ :—ಮೋಕ್ಷಸಿದ್ಧಿಯು ವನವೆಂದಮೇಲೆ, ಇದಕ್ಕೆ ಇತರ ನಂದನಗಳನ್ನು ಹೋಲಿಸಲಾದೀತೆ? ಅಯ್ಯಾ ಸಜ್ಜನಬಂಧು! ಈ ವನದ ವಿಷಯವಾಗಿ ನಾನು ಹೀಗೆ ತಿಳಿದಿರುವೆನು, ಸರಿಯೆ?

ಚಂಡ:—ಅದೇನು ಹೇಳು.

ಸಮುದ್ರ :—ಇದು ಒಬ್ಬಾನೊಬ್ಬ ಮಹನೀಯನ ತಪೋಭೂಮಿಯಾಗಿರಬೇಕು. ಆದುದರಿಂದ ನಿಮ್ಮ ಮಹಾರಾಜನು ನಂದನವನವನ್ನು ಪ್ರತಿಷ್ಠಿಸಿ ಕೀರ್ತಿಯನ್ನು ಪಡೆದಿರಬೇಕು! ಈ ಸ್ಥಳದ ರಹಸ್ಯವೆಲ್ಲವೂ ನಿನಗೆ ತಿಳಿದಿರುವುದಷ್ಟೆ?

ಚಂಡ :—ಆಹಾ! ಬಹು ಚೆನ್ನಾಗಿ ತಿಳಿದಿರುವುದು! ಇಲ್ಲಿ ತಪಸ್ಸುಮಾಡಿ ಮುಕ್ತರಾದ ಮಹನೀಯರು ಒಬ್ಬರಲ್ಲ; ಅನೇಕ ಲಕ್ಷಮಂದಿ ಕಟೂಗ್ರ ತಪಸ್ಸಿನಿಂದ ಮುಕ್ತರಾಗಿಯೂ, ಮುಕ್ತರಾಗುತ್ತಲೂ ಇರುವರು.

ಸಮುದ್ರ :—ಆಃ! ಇಂತಹ ಮಹಿಮೆಯುಳ್ಳ ಸ್ಥಳವು ಇದೆಂದು ನಾನು ಭಾವಿಸಿರಲಿಲ್ಲ; ಸಾಮಾನ್ಯವಾದ ಉಪವನವೆಂದು ಭಾವಿಸಿದ್ದೆನು.

ಚಂಡ :—ಎಲೈ ಸಂನ್ಯಾಸಿಯೆ! ಇಂತಹ ಮಹಾಸ್ಥಳಕ್ಕೆ ಬಂದು ಸುಮ್ಮನೆ ಕಾಲಹರಣಮಾಡಬಾರದು; ನೋಡತಕ್ಕುದನ್ನು ನೋಡಿ ಸೇವಿಸಿ ಕೃತಾರ್ಥನಾಗಬೇಡವೆ?

ಸಮುದ್ರ :—ಎಲೈ ಮಹಾನುಭಾವನೆ! ನನ್ನ ಕೃತಾರ್ಥತೆಯ ವಿಷಯದಲ್ಲಿ ಆತುರಗೊಳ್ಳುತ್ತಿರುವ ನೀನೆಂತಹ ಪುಣ್ಯಾತ್ಮನೊ? ಇಲ್ಲಿ ನಾನು ಹೇಗೆ ನಡೆದುಕೊಳ್ಳಬೇಕೆಂಬುದನ್ನು ದಯೆಯಿಟ್ಟು ತಿಳಿಸುವೆಯಾ?

ಚಂಡ :—ನಾನು ಅದಕ್ಕಾಗಿಯೇ ಇರುವುದು. ಇಲ್ಲಿಗೆ ಬರತಕ್ಕವರನ್ನು ಅತ್ಯಾದರದಿಂದ ನಿರೀಕ್ಷಿಸಿ ಬರಮಾಡಿಕೊಂಡು ಅವರ ಪುಣ್ಯಲೋಕಪ್ರಾಪ್ತಿಗೆ ಸಹಾಯಮಾಡುವೆನು.

ಸಮುದ್ರ :—ಮಾರಾಯ! ನಿನಗೆ ಸಾವಿರ ನಮಸ್ಕಾರಗಳು!

ಚಂಡ :—ನೀನೇನೂ ನನಗೆ ಅಷ್ಟು ಕೃತಜ್ಞತೆಯನ್ನು ತೋರಬೇಕಾದುದಿಲ್ಲ; ನಿಮ್ಮಂತಹವರ ಸೇವೆ ತಾನಾಗಿಯೇ ಲಭಿಸಿದುದಕ್ಕಾಗಿ ನಾನೆ ಎಷ್ಟೋ ಕೃತಜ್ಞನಾಗಿರಬೇಕು.

ಸಮುದ್ರ :—ಪುಣ್ಯಪುರುಷನೆ! ಈಗ ನಾನೇನುಮಾಡಲಿ?

ಚಂಡ :—[ಸ್ವಗತಂ] ಆಃ ಪುಣ್ಯಪುರುಷನೆಂಬ ಸಂಬೋಧನೆಯು ನನಗೆ ಬಹು ಚೆನ್ನಾಗಿ ಒಪ್ಪುವುದು. [ಪ್ರಕಾಶಂ] ಎಲೈ ಭಿಕ್ಷುವೆ! ನನ್ನೊಡನೆ ದಯೆಮಾಡಬೇಕು.

ಸಮುದ್ರ :—ಹಾಗೇಆಗಲಿ [ಎಂದು ಹೊರಟು ಇಬ್ಬರೂ 'ನರಕ' ವೆಂಬ ವಧಾಗಾರವನ್ನು ಪ್ರವೇಶಿಸುವರು]

ಚಂಡ :—ಎಲೈ ತಪಸ್ವಿಯೆ! ಈ ಸ್ಥಳವನ್ನು ಚೆನ್ನಾಗಿ ನೋಡು; ಇದೇ ಮೋಕ್ಷಸ್ಥಾನವು.

ಸಮುದ್ರ :—[ಅಸಹ್ಯದಿಂದ] ಎಲೈ, ನನ್ನನ್ನು ಇಲ್ಲಿಗೇತಕ್ಕೆ ಕರೆದುಕೊಂಡು ಬಂದೆ?

ಚಂಡ :—ನಿನಗೆ ಮೋಕ್ಷವನ್ನು ಅನುಗೊಳಿಸುವುದಕ್ಕೆ! ಈ ಪ್ರದೇಶವನು ನೋಡಿದರೆ ನಿನ್ನ ಮನಸ್ಸಿಗೆ ಬೋಧೆಯಾಗುವುದಿಲ್ಲವೆ? ಈ ಚಕ್ರಗಳು, ಶಸ್ತ್ರಗಳು, ಶೂಲಗಳು, ಕೀಲುಗಳು, ಗರಗಸಗಳು, ಕಾದೆಣ್ಣೆಯ ಕೊಪ್ಪರಿಗೆಗಳು—ಇವುಗಳು ಮೋಕ್ಷವನ್ನು ಕೊಡುವ ಸಾಧನಗಳಲ್ಲವೆ?

ಸಮುದ್ರ :—[ಸುತ್ತಲೂ ನೋಡಿ, ಭೀತಿಯಿಂದ] ಅಕಟಕಟಾ! ಭಯಂಕರವಾದ ಈ ಸ್ಥಾನವನ್ನು ನಾನು ನೋಡಲಾರೆನು! ನೋಡಲಾರೆನು!

ಚಂಡ :—ನೋಡುವುದಕ್ಕೇ ಕಷ್ಟವಾದರೆ ಅನುಭವಿಸುವುದು ಹೇಗೆ? ಇಲ್ಲಿ ನಿನ್ನ ಸಹೋದರರ ಸಮಾಧಿನಿಷ್ಠೆಯನ್ನು ನೋಡಿ ನೀನೂ ಅಭ್ಯಸಿಸಬಾರದೆ?

ಸಮುದ್ರ :—ಅಕಟಕಟಾ! ಮಾನವರು ಈ ಪ್ರದೇಶದಲ್ಲಿ ಅನುಭವಿಸುತ್ತಿರುವ ಹಿಂಸೆಯನ್ನು ನೋಡಿ ಹೇಗೆ ಸೈರಿಸಲಿ? [ದುಃಖಿಸುತ್ತ]

ವೃ|| ಕೀಳ್ವರ್ ನಾಲಗೆಯಂ; ವಲಂ ಕ್ರಕಚದಿಂ ಪೋಳ್ಗೈದಪರ್ ಮಂಡೆಯಂ |
ಸೀಳ್ವರ್ ತೀವ್ರಮುರಂಗಳಂ; ಉಗಿದಪರ್ ಖಂಡಂಗಳಂ ಕುತ್ತಿಮೇಣ್ ||
ಬೇಳ್ವರ್ ಬೆಂಕಿಯೊಳಯ್ಯೋ! ನೂಂಕಿಜಿಡುವರ್ ಕಾದೆಣ್ಣೆಯೊಳ್‌ಕೋಪದಿಂ|
ತಾಳ್ವರ್ ಕಾಲನರೂಪಮಂ ನರಕಮಿಂತೇಂ ಘೋರಮೋ? ಅಕ್ಕಟಾ ||

ಅಯ್ಯೋ! ಅಮ್ಮಾ! ಎಂದು ಗೋಳಿಡುತ್ತ, ಚೀರುತ್ತ, ಕೈಕಾಲುಗಳನ್ನು ಒದರುತ್ತ, ನಿಳುತ್ತ, ಬೀಳುತ್ತ, ಉರುಳುತ್ತ ಇಲ್ಲಿ ಮನುಷ್ಯರು ಪಡುವ ವಿಚಿತ್ರ ಹಿಂಸೆಯನ್ನು ನೋಡಿ ನನ್ನ ಹೃದಯವು ಒಡೆದುಹೋಗುತ್ತಿರುವುದಲ್ಲ! [ದುಃಖಿಸುವನು]

ಚಂಡ:—ಭಿಕ್ಷುವೆ! ಸಾಕು! ಸಾಕು! ನಿನ್ನ ರೋದನವು! ದೇವರ ಧ್ಯಾನವನ್ನು ಮಾಡಿ ಸಿದ್ಧನಾಗು: ಸಿದ್ಧನಾಗು; ಕಾದೆಣ್ಣೆಯ ಕೊಪ್ಪರಿಗೆಯು ನಿನ್ನನ್ನು ನಿರೀಕ್ಷಿಸುತ್ತಿರುವುದು! ಈ 'ನರಕ' ಕ್ಕೆ ನಾನು ಯುವರಾಜನಾಗಿರುವೆನೆಂಬುದು ಈಗ ತಿಳಿಯಿತಷ್ಟೆ?

ಸಮುದ್ರ:—ಅಯ್ಯೋ! ಈ ರೀತಿಯಾಗಿ ನರವಧೆಯನ್ನು ಮಾಡುವುದೇಕೆ?

ಚಂಡ:—ಏಕೆಂದರೆ:–ರಾಜಾಜ್ಞೆ! ಅದೆಲ್ಲವನ್ನೂ ನಿನಗೇತಕ್ಕೆ ಹೇಳಬೇಕು? ಚಂಡಗಿರಿಕನು ಸ್ವತಂತ್ರನು!

ಸಮುದ್ರ:—ಅಯ್ಯಾ! ನಿಮ್ಮ ರಾಜನು ಅಪರಾಧಿಗಳಿಗೆ ತಾನೆ ಇಂತಹ ಕ್ರೂರ ಶಿಕ್ಷೆಯನ್ನು ವಿಧಿಸುವನು? ನಾನೇನಪರಾಧವನ್ನು ಮಾಡಿರುವೆನು? ಏನೂ ಇಲ್ಲವಲ್ಲ!

ಚಂಡ:—ಅಪರಾಧಿಗಳಿಗೆ ಮಾತ್ರವಲ್ಲ; ಇಲ್ಲಿಗೆ ಪ್ರವೇಶಮಾಡಿದವರಿಗೆಲ್ಲಾ ಇದೇ ಗತಿ!

ಸಮುದ್ರ:—ನಿಮ್ಮ ರಾಜನು ಇಂತಹ ಆಜ್ಞೆಯನ್ನು ಯಾವಾಗ ಯಾತಕ್ಕೋಸ್ಕರ ಮಾಡಿದನು!

ಚಂಡ:—ಒಂದುಕಾಲದಲ್ಲಿ ತನಗಾಗದವರನ್ನು ಕೊಲ್ಲುವುದಕ್ಕೆ ಈ ಸ್ಥಳವು ನಿರ್ಮಿತವಾಯಿತು; ಮತ್ತು ನನಗೆ ಅಧಿಕಾರವು ಸಿಕ್ಕಿತು. ಅಂದಿನಿಂದಲೂ ಈ ಪದ್ಧತಿಯನ್ನು ಹೀಗೆಯೇ ನಡೆಯಿಸಿಕೊಂಡು ಬರುತ್ತಿರುವೆನು.

ಸಮುದ್ರ:—ಧರ್ಮಾತ್ಮನಾದ ನಿಮ್ಮ ರಾಜನು ಈಗ ಅದನ್ನು ಎಷ್ಟುಮಾತ್ರಕ್ಕೂ ಅನುಮೋದಿಸಲಾರನು.

ಚಂಡ:—ಬೇಡವೆಂದು ಆಜ್ಞೆಬರುವವರೆಗೂ, ನನ್ನ ಅಧಿಕಾರಕ್ಕೆ ತಡೆಯೇನೂ ಇರುವುದಿಲ್ಲ! ಎಲೈ ದುರ್ಮುಖಾದಿಗಳೆ! ಈ ಭಿಕ್ಷುವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿ ಕರಿದುಬಿಡಿ!

ಸೇವಕರು:—ಒಡೆಯನ ಅಪ್ಪಣೆಯಂತೆ [ಎಂದು ಹಿಡಿದೆಳೆಯುವರು]

ಸಮುದ್ರ:—ಅಯ್ಯಾ! ಯಮರಾಜ! ದಯಮಾಡಿ ನನ್ನ ಮಾತನ್ನು ಕೇಳುವೆಯಾ?

ಚಂಡ:—"ದಯೆ" ಯೆಂದರೇನು? ಅದಕ್ಕೆ ನನ್ನಲ್ಲಿ ಸ್ಥಳವಿಲ್ಲ; ಈಗ ನಿನ್ನ ಮಾತನ್ನು ಕೇಳಿಕೊಂಡಿರಬೇಕಾದ ಆವಶ್ಯಕತೆಯು ನನಗೇನೂ ಇಲ್ಲ. ಎಲೈ ಸೇವಕರೆ! ಬೇಗನೆ ಇವನನ್ನು ಎಳೆದುಕೊಂಡು ಹೋಗಿರಿ!

ಸೇವಕರು :—ಎಲೋ ನಡೆ ನಡೆ! ಇಲ್ಲಿ ಹಲ್ಲುಕಿರಿಯುತ್ತ ಏಕೆ ನಿಂತುಕೊಂಡೆ? ನಿನ್ನಂತೆ ಹೀಗೆ ಗೋಳಾಡಿದವರು ಎಷ್ಟೋ ಮಂದಿ!

ಸಮುದ್ರ :—ಅಯ್ಯ! ನಿಮಗೆ ನಮಸ್ಕರಿಸುವೆನು; ಸ್ವಲ್ಪ ತಾಳಿರಿ! ಅಯ್ಯಾ ಅಧಿಕಾರಿಯೆ! ಇಷ್ಟು ಪ್ರಾಣಿಗಳು ಘೋರಯಾತನೆಯನ್ನು ಅನುಭವಿಸುತ್ತಿರುವಾಗ ನನ್ನ ಪ್ರಾಣವು ಹೆಚ್ಚೆಂದು ನಾನು ಭಾವಿಸಲಾರೆನು.

ಚಂಡ :—ಮತ್ತೆ, ಇದೇನು ಗೋಳು? ಬಾಯಿಮುಚ್ಚಿಕೊಂಡು ಹೋಗಬಾರದೆ? ಏನುಮಾಡಿದರೂ ತಪ್ಪುವಹಾಗಿಲ್ಲ [ಕೋಪಿಸಿಕೊಳ್ಳುವನು]

ಸಮುದ್ರ :—ನನ್ನ ಈ ಕೊನೆಯ ವಿಜ್ಞಾಪನೆಯನ್ನು........

ಚಂಡ :—ಇಂತಹ ವಿಜ್ಞಾಪನೆಗಳೆಲ್ಲವನ್ನೂ ಬಲ್ಲೆನು? ನಡೆ ನಡೆ! ಮೂರ್ಖನೆ! [ಎಂದು ಗದರಿಸಿಕೊಳ್ಳುವನು]

ಸಮುದ್ರ :—ಮಹಾರಾಯ! ನಿಮ್ಮ ಮಹಾರಾಜನ ಕಿವಿಯಲ್ಲಿ ನಾನು ಹೇಳುವ ಒಂದು ಮಾತನ್ನು ಹಾಕಿ ಬಂದು ಆಮೇಲೆ ನಿನ್ನ ಕೆಲಸವನ್ನು ಮಾಡು.

ಚಂಡ :—ಅದೆಲ್ಲಾ ಆಗುವುದಿಲ್ಲ; ಆಗುವುದಿಲ್ಲ; ಸಾಯುವ ಪ್ರಾಣಿಗಳು ಇನ್ನು ಒಂದು ಕ್ಷಣಮಾತ್ರ ಬದುಕಿದ್ದರೆ ಅಷ್ಟೇ ಸಾಕೆಂದು ಅಪೇಕ್ಷಿಸುವುದು ಸಹಜ!

ಸಮುದ್ರ :—ಅಯ್ಯಾ! ಇಂದಿನಿಂದ ಈ ಕೊಲೆಯನ್ನು ನಿಲ್ಲಿಸಿಬಿಡು; ಶ್ರೀಬುದ್ಧದೇವನ ಅನುಗ್ರಹವು ನಿನಗುಂಟಾಗುವುದು.

ಚಂಡ :—ಸಾಕು ಸಾಕು! ನಿನ್ನ ಧರ್ಮೋಪದೇಶ! ಮರಣವನ್ನು ತಪ್ಪಿಸಿಕೊಳ್ಳುವುದಕ್ಕೆ ಎಷ್ಟು ಮಾತುಗಳನ್ನು ಕಲಿತಿರುವೆ? ಇದಕ್ಕೆಲ್ಲಾ ನಾನು ಮರುಳಾಗುವೆನೆ? [ಸೇವಕರನ್ನು ಕುರಿತು] ಎಲೈ ಏತಕ್ಕೆ ತಡಮಾಡುವಿರಿ? ನಿಮ್ಮ ಕೆಲಸವನ್ನು ಮಾಡಿಬಿಡಿ! [ಎಂದು ಹೊರಟುಹೋಗುವನು]

ಸೇವಕರು :—[ಭಿಕ್ಷುವನ್ನು ಎಳೆದೊಯ್ಯುತ್ತ] ಏನಯ್ಯ! ನಿನ್ನ ಪುರಾಣವೆಲ್ಲಾ ಮುಗಿಯಿತೊ?

ಸಮುದ್ರ :—ಮಿತ್ರರೆ! ಇನ್ನು ನಿಮಗೆ ಆಜ್ಞೆಯಾದಂತೆ ನಡೆಯಿರಿ!

ಸೇವಕರು :—ಸರಿಸರಿ! ನಿನಗೆ ಈಗ ನಾವೇ ಮಿತ್ರರು! ಇನ್ನು ಯಾರೂ ನಿನ್ನೊಡನೆ ಇಷ್ಟುದೂರ ಬರುವವರಿಲ್ಲ [ಎಳೆದುಕೊಂಡು ಹೋಗಿ] ಕಾದಿಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿ ಉರಿಹಚ್ಚುವರು.

[ತೆರೆಯಲ್ಲಿ] ಆಃ! ಆಶ್ಚರ್ಯ ಆಶ್ಚರ್ಯ!

ಚಂಡ:—[ಆತುರದಿಂದ ಪ್ರವೇಶಿಸಿ] ಏನು? ಏನು? ಸೇವಕರೆ? ತಪಸ್ವಿಯು ಏನಾದನು?

ಸೇವಕರು:—ಒಡೆಯನೆ ಈ ಆಶ್ಚರ್ಯವನ್ನೇನೆಂದು ಹೇಳೋಣ! ಮರಳುವ ಎಣ್ಣೆಯಲ್ಲಿ ಈತನು ನಗಮೊಗದಿಂದ ವಿನೋದವಾಗಿ ಕುಳಿತಿರುವನು. ನಾವೆಷ್ಟು ಉರಿಯನ್ನು ಹೆಚ್ಚುಮಾಡಿದರೂ ಬೆಂಕಿಯು ತಾನಾಗಿಯೇ ಆರಿಹೋಗುತ್ತಲಿದೆ.

ಚಂಡ:—[ನೋಡಿ] ಆಹಾ! ಈ ಮಹಾನುಭಾವನ ಮಹಿಮೆಯು ಅತ್ಯದ್ಭುತವು! ಮಹಾಗುರುವೆ! ನನ್ನ ಅಪರಾಧವನ್ನು ಕ್ಷಮಿಸಬೇಕು.

ಸೇವಕರು:—ಒಡೆಯನೆ! ಈತನು ಮನುಷ್ಯನಲ್ಲ!

ಚಂಡ:—ನಾನೀಯದ್ಭುತವನ್ನು ಚಕ್ರವರ್ತಿಗೆ ತಿಳಿಸುವೆನು [ಎಂದು ಹೋಗುವನು]

[ಅನಂತರ ಸಪರಿವಾರನಾದ ಅಶೋಕನು ಪ್ರವೇಶಿಸುವನು]

ಚಂಡ:—ಮಹಾಸ್ವಾಮಿ! ಹೀಗೆ ದಯೆಮಾಡಬೇಕು!

ಅಶೋ:—ಚಂಡಗಿರಿಕ! ಎಲ್ಲಿ ಮಹಾನುಭಾವರಾದ ಆ ತಪಸ್ವಿಗಳು!

ಚಂಡ:—ಮಹಾಪ್ರಭು! ನೋಡೋಣವಾಗಲಿ!

ಅಶೋ:—ಆಹಾ! ಆಶ್ಚರ್ಯ ಆಶ್ಚರ್ಯ! [ಎಲ್ಲರೂ ಆಶ್ಚರ್ಯಪಡುವರು]

[ಅಶೋಕನು ಸಮೀಪಗತನಾಗಿ ಕೈಜೋಡಿಸಿ]

ಕಂ|| ವಂದಿಪೆನೈ ಮುನಿಮಂಡನ |
ವಂದಿಪೆನೈ ಜ್ಞಾನಸಿಂಧು! ಸಜ್ಜನಬಂಧೂ ||
ವಂದಿಪೆನಾರ್ಯಾಗ್ರಣಿಯೇ |
ವಂದಿಪೆನೈ ಧರ್ಮರೂಪ! ಅಪಗತಪಾಪಾ ||೨೭||

ಮಹಾತ್ಮರೆ! ಈ ಅಪರಾಧಿಯನ್ನು ಬೇಕಾದಹಾಗೆ ನಿಗ್ರಹಿಸಬೇಕು.

[ಸಾಷ್ಟಾಂಗನಮಸ್ಕಾರ ಮಾಡುವನು. ಎಲ್ಲರೂ ನಮಸ್ಕರಿಸುವರು]

ಸಮುದ್ರ:—ಸಾರ್ವಭೌಮನೆ! ಏಳು! ಈಗ ನೀನು ನಿರ್ದೋಷಿಯಾಗಿರುವೆ?

ಅಶೋ:—ಮಹಾತ್ಮರೆ! ತಾವು ಯಾರೆಂಬುದನ್ನು ತಿಳಿಸಿ ಅನುಗ್ರಹಿಸಬೇಕು.

ಸಮುದ್ರ:—ಚಕ್ರೇಶ್ವರ! ನಾನು ಬುದ್ಧದೇವನ ಧರ್ಮಪುತ್ರನು! ನನ್ನನ್ನು ಸಮುದ್ರಗುಪ್ತನೆಂದು ಕರೆಯುವರು. ಸಮಂತಭದ್ರಸ್ವಾಮಿಯು ಹೀಗೆಂದು ಭವಿಷ್ಯವನ್ನು ಸಾರಿರುವನು.

ಅಶೋ :—ಪೂಜ್ಯರೆ, ಅನಹಿತನಾಗಿರುವೆನು !

ಸಮುದ್ರ :—"ಮುಂದೆ ಪಾಟಲೀಪುತ್ರದಲ್ಲಿ ಅಶೋಕನೆಂಬ ಚಕ್ರವರ್ತಿಯುದಿಸಿ ದೇಶದೇಶಗಳಲ್ಲಿಯೂ ಪವಿತ್ರಧರ್ಮವನ್ನು ಹಬ್ಬಿಸುವನು" ಎಂದು. ಮಹಾರಾಜ! ಅಶೋಕಸಾರ್ವಭೌಮನು ನೀನೇ ? ಆದುದರಿಂದ- .

ಕಂ|| ದಯೆಯಂ ಪಸರಿಸು ; ಧರ್ಮಾ |
ಶ್ರಯನಾಗು ; ಮನೋಜ್ಞಮಾದ ಧರ್ಮಮನೆತ್ತಂ ||
ದಯೆಯಿಂ ಪರ್ಬಿಸು ; ಸತ್ಕೀ |
ರ್ತಿಯನಾರ್ಜಿಸು ; ಮೌರ್ಯವಂಶವಾರಿಧಿಚಂದ್ರಾ ||೨೮||

ಅಶೋ :—ಮಹಾತ್ಮರ ಅಪ್ಪಣೆಯಂತೆ ಆಚರಿಸುವೆನು.

ಸಮುದ್ರ :—ಸಾರ್ವಭೌಮನೆ ! ಪ್ರಭುತ್ವವು ಧರ್ಮರಕ್ಷಣಾರ್ಥವಾಗಿಯೇ ಪ್ರಾಪ್ತವಾಗುವುದು. ಅಂತಹುದನ್ನು ಸಾರ್ಥಕವಾಡದೆ ಸ್ವಸುಖದಲ್ಲಿ ನಿರತನಾಗುವವನೂ, ಪ್ರಜಾಪೀಡಕನೂ, ಪ್ರಜೆಗಳಿಂದ ಎತ್ತಿದ ಕರಗಳನ್ನು ಜೇತಕಾರ್ಯಗಳಿಗೆ ವಿನಿಯೋಗಿಸುವವನೂ, ಪ್ರಜೆಗಳಿಗೆ ಅಹಿತವಾದರೂ ಸ್ವೇಚ್ಛೆಯಾಗಿ ನಡೆಯುವವನೂ, ಪ್ರಭುವೆನ್ನಿಸಿಕೊಳ್ಳಲು ಅರ್ಹನಾಗುವುದಿಲ್ಲ ; ಅಂತಹವನು ಪತಿತನೆನಿಸಿ ಮಹಾನರಕಕ್ಕೆ ಭಾಜನನಾಗುವನು. ಇದನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡು ಅಧಿಕಾರವನ್ನು ಸಮರ್ಪಕವಾಗಿ ನಡೆಯಿಸು. ಶ್ರೀ ಬುದ್ಧದೇವನು ನಿನ್ನನ್ನು ಅನುಗ್ರಹಿಸುವನು.

ಅಶೋ :—ಪೂಜ್ಯರೆ! ನನ್ನ ದೋಷಗಳನ್ನು ತಿದ್ದಿಕೊಳ್ಳುವೆನು. [ಮಂತ್ರಿಯೊಡನೆ] ಎಲೈ ಮಂತ್ರಿಯೆ! ಮೊದಲು 'ನರಕ' ವೆಂಬ ಈ ವಧಾಗಾರವನ್ನು ಹಾಳುಮಾಡಿಸು ; ಇದರಿಂದ ನನ್ನ ಹೃದಯವು ಬಹಳ ನೊಂದಿರುವುದು.

ಮಂತ್ರಿ :—ಸಾರ್ವಭೌಮರ ಆಜ್ಞೆಯಂತೆ ನಡೆಯಿಸುವೆನು.

ಸಮುದ್ರ :—ಚಕ್ರವರ್ತಿಯೆ ! ನಿನಗೆ ಶ್ರೇಯೋಭಿವೃದ್ಧಿಯಾಗಲಿ !

[ಎಲ್ಲರೂ ಹೊರಡುವರು]

ಇದು ಎರಡನೆಯ ಅಂಕವು.

ತೃತೀಯಾಂಕ.

[ಸ್ಥವಿರ ಮಹಾವರುಣನು ಪ್ರವೇಶಿಸುವನು]

ಮಹಾವರುಣ :—ನಮೋಬುದ್ಧಾಯ! ನಮೋಬುದ್ಧಾಯ? ಅಕಟಾ! ಭಗವಂತನಾದ ಬುದ್ಧದೇವನ ಉಪದೇಶವಾಣಿಯು ಜಗತ್ತಿನಲ್ಲೆಲ್ಲಾ ಅನುಷ್ಠಾನಕ್ಕೆ ಬರುವುದೆಂದಿಗೊ?

ಕಂ|| ಮೊಗದೊಳ್ ನಸುನಗೆ ನುಡಿಯಾ |
ವಗಮಾಲಿಗಳೊಳ್ ಸಮಂತು ಶಾಂತರಸಂ ಮೇಣ್ ||
ಮಿಗೆ ಕಾರುಣ್ಯಂ ಹೃದಯದೊ |
ಳೊಗೆದಿಳೆಯೊಳ್ ದೊರೆವುದೆಂದೊ ನಿತ್ಯಾನಂದಂ ||೨೯||

[ಮೇಲೆ ನೋಡಿ] ಭಗವತೀ! ಭಾರತೀದೇವಿ! ನಿತ್ಯವಾದ ಸತ್ಯಧರ್ಮಕ್ಕೆ ನೀನು ಅಧಿಷ್ಠಾತ್ರಿಯಲ್ಲವೆ? ಆದರೂ ಆ ಗುಣಗಳು ಮರೆಯಲ್ಲಿ ಅಡಗಿರುವುದೇಕೆ? ಎಲ್ಲೆಲ್ಲಿಯೂ ಪ್ರಕಾಶವಾಗಲು ಅನುಗ್ರಹಿಸಲಾರೆಯಾ? [ಕಿವಿಗೊಟ್ಟು ಕೇಳಿ] ಏನು ಹೇಳುವೆ?

"ಸಂಸರ್ಗವಿಶೇಷದಿಂದ ನನ್ನ ಸಂತಾನವು ಮಾಲಿನ್ಯವನ್ನೊಂದಿರುವುದೆಂದು" ಹೇಳುವೆಯಾ? ಅಕ್ಕಟಾ! ನಿನ್ನ ದುಃಖಕ್ಕೆ ಪಾರವಿಲ್ಲ; ಚಿಂತಿಸಬೇಡ! ಬುದ್ಧದೇವನು ಮಂಗಳವನ್ನುಂಟುಮಾಡುವನು. [ಹೊರಟುಬರುತ್ತ] ಆಹಾ! ಇಲ್ಲಿ ಯಾರೋ ಪುಟ್ಟಬಾಲಕರು ಆಡುತ್ತಿರುವರು! ನಿಶ್ಚಿಂತರೂ ನಿರ್ಮಲಹೃದಯರೂ, ವಿನೋದೈಕಶೀಲರೂ ಆದ ಈ ಮಕ್ಕಳನ್ನು ಸ್ವಲ್ಪಹೊತ್ತು ನೋಡಿ ಆನಂದಗೊಳ್ಳುವೆನು. [ನಿಂತು ನೋಡುತ್ತಿರುವನು]

[ಅನಂತರ ಸುವೃತ್ತೆಯು ನ್ಯಗ್ರೋಧನನ್ನು ಆಡಿಸುತ್ತ ಪ್ರವೇಶಿಸುವಳು. ಚಂಡಾಲಬಾಲಕರೂ ಬರುವರು]

ಸುವೃತ್ತೆ :—ನ್ಯಗ್ರೋಧ! ನೀವೆಲ್ಲರೂ ಸೇರಿ ಇಲ್ಲಿ ಆಡುವಿರೋ?

ಕಂ|| ಎಳೆದಳಿರ್ಗಳ ಸೊಂಪಿಂ ಪೂ |
ಗಳ ಕಂಪಿಂ ಮಂಜುವಿಹಗಗಾನದಲಂಪಿಂ |
ಸುಳಿವೀಗಾಳಿಯ ತಣ್ಪಿಂ |
ದೆಸೆಯುರೆ ಮುದವಾಂತು ತೋಪಿಸಡೆ ಕುಣಿಕುಣಿಯಿಂ ||೩೦||

ನ್ಯಗ್ರೋಧ:—ಅಕ್ಕ! ನಾವಿಲ್ಲಿಯೋ ಆಡಿಕೊಳ್ಳುವೆವು. ನೀನೂ ಇಲ್ಲಿಯೇ ಇರು. [ಎಂದು ಜೊತೆಗಾರರನ್ನು ಕುರಿತು]

ಕಂ|| ಗೆಳೆಯರೆ ಸೆಂಡುಂ ಪಾರುಂ |
ಬಳೆ ಗಜ್ಜುಗ ಗೋಲಿ ಚಿಣ್ಣಿಕೋಲ್ ಮಳಲಾಟಂ ||
ಗಳನಾಡಿ ಪಾಡಿ ಕುಣಿಯುತು |
ಮೆಳಲತೆಯೊಳ್ ತೂಗಿ ಜೀಗಿ ಸಮ್ಮೋದಿಸುವಂ ||೩೧||

ಬಾಲಕರು:—ನ್ಯಗ್ರೋಧ! ಮೊದಲು ಯಾವ ಆಟವನ್ನಾಡೋಣ.

ನ್ಯಗ್ರೋಧ:—ಮಿತ್ರರೆ! ನಮ್ಮಮ್ಮನು ಅಕ್ಕಿಯನುಚ್ಚನ್ನೂ ಸ್ವಲ್ಪ ಜೊಳ್ಳನ್ನೂ ತಿನ್ನುವುದಕ್ಕೆ ಕೊಟ್ಟಿರುವಳು. ಈ ಪುಟ್ಟಪಕ್ಕಿಗಳಿಗೆ ಅಕ್ಕಿಯನುಚ್ಚನ್ನು ಕಂಡರೆ ತುಂಬ ಇಷ್ಟ! ಇವುಗಳಿಗೆ ಅದನ್ನು ಹಾಕಿ ವಿನೋದವನ್ನು ನೋಡೋಣ! ಆಮೇಲೆ ಬೇಕಾದ ಆಟವನ್ನು ಆಡೋಣ!

ಬಾಲಕರು:—ಮಿತ್ರನೆ! ಹಾಗೆಯೇ ಆಗಲಿ! [ಹಕ್ಕಿಗಳಿಗೆ ಎಲ್ಲರೂ ನುಚ್ಚನ್ನು ಚೆಲ್ಲುವರು]

ನ್ಯಗ್ರೋಧ:—ಮಿತ್ರರೆ! ನೋಡಿದಿರಾ? ಈ ಇರುವೆಗಳು ಎಷ್ಟು ಸಂಭ್ರಮದಿಂದ ಅಲ್ಲಲ್ಲಿ ಉಳಿದಿರುವ ಕಾಳನ್ನು ಕಚ್ಚಿಕೊಂಡು ಗೂಡಿಗೆ ಓಡುತ್ತಿವೆ? ಇವುಗಳ ಪರಸ್ಪರಮೈತ್ರಿಯನ್ನು ಬಣ್ಣಿಸಲಾದೀತೆ? ಈ ಹಕ್ಕಿಗಳು ಒಂದೊಂದು ಕಾಳನ್ನೇ ಕಚ್ಚಿಕೊಂಡು ಹೋಗಿ ಮರಿಗಳಿಗೆ ಗುಟುಕನ್ನು ಕೊಟ್ಟು ಮರಳಿ ಮರಳಿ ಬರುತ್ತಿರುವುವು. ಇದು ಎಷ್ಟು ವಿನೋದವಾಗಿರುವುದು!

ಬಾಲಕರು:—ನ್ಯಗ್ರೋಧ! ಈ ಪಾರಿವಾಳದ ಹಕ್ಕಿಗಳನ್ನು ನೋಡು! ಎಷ್ಟು ಮುದ್ದಾಗಿವೆ?

ನ್ಯಗ್ರೋಧ:—ಕುಸುಮಷಟ್ಪದಿ|| ಬಾರೊ ಬಾರೆಲೊ ಮುದ್ದು |
ಪಾರಿವಾಳದ ರಾಜ |
ಪಾರು ಗಗನಕೆ ಬೇಗ ನೀನೆನಿತ್ತು ||
ದೂರ ಪಾರುವೆ? ನೋಳ್ಪೆ |
ತೋರು ನಿನ್ನಯಲೀಲೆ |
[illegible] ||[illegible]||

ಒಬ್ಬ ಬಾಲಕ:—ಚರಿಸಿ ನೀಸಲ್ಲಲ್ಲಿ |
ಹರುಷದಿಂ ಕಾಳುಗಳ |
ನರಸಿ ಕಲ್ಗಳನಂತು ನುಂಗಿಬಿಡುವೆ ||
ಧರೆಯೊಳಗೆ ಬಹುಕಾಲ |
ಮಿರುತಿರುವೆ ಸುಖದಿಂದ |
ಸರಿಯಾರ ಕಾಣೆನೋ ಜಗದೆ ನಿನ್ನಾ ||೧೨||

ನ್ಯೊಬ್ಬ:—ಪಕ್ಷಿರಾಯನೆ! ನಿನ್ನ |
ಮಿಕ್ಕ ವಿಸಾರದ ಸೊಗಸಿ |
ಸಕ್ಕರೆಯನೇನೆಂಬೆ? ನೀಂ ಕೆದರಿಧ ||
ಪುಕ್ಕಗಳ ಸೇವರಿಸಿ |
ಸೊಕ್ಕಿನಿಂದನವರತ |
ವಕ್ಕಜವ ಬೀರುತಿಹೆ ನೋಳ್ಪ ಜನಕೆ ||೧೩||

ಬಾಲಕರು:—ಈ ಹಕ್ಕಿಗಳನ್ನು ಹಿಡಿದುಕೊಳ್ಳೋಣವೆ? ನಾವು ಯಾವಾಗಲೂ ಇವುಗಳೊಡನೆ ಆಡುತ್ತಿರಬಹುದು!

ನ್ಯಗ್ರೋಧ:—ಮಿತ್ರರೆ! ಸ್ವೇಚ್ಛೆಯಿಂದ ಹಾರಾಡಿ ಆನಂದಿಸುವ ಹಕ್ಕಿಗಳನ್ನು ಹಿಡಿದು ನಿರ್ಬಂಧಿಸಬಾರದು. ದೂರದಿಂದಲೇ ಬೇಕಾದಷ್ಟು ನೋಡಿ ಸಂತೋಷಿಸಬಹುದಲ್ಲ!

ಒಬ್ಬನು:—ಅಹುದು! ಅವು ಸ್ವತಂತ್ರವಾಗಿದ್ದಾಗ ಸಂಭ್ರಮದಿಂದ ಆಡುವಂತೆ ನಿರ್ಬಂಧದಲ್ಲಿದ್ದಾಗ ಆಡಲಾರವು.

ಮಹಾವರುಣ:—ಆಹಾ! ಈ ಮಕ್ಕಳ ವಿನೋದಕ್ರೀಡೆಯು ಬಹಳ ಆನಂದಕರವಾಗಿರುವುದು! [ನ್ಯಗ್ರೋಧನನ್ನು ನೋಡಿ] ಪರಮಾಶ್ಚರ್ಯಕರವಾದ ಅಂಗ ಲಕ್ಷಣಗಳುಳ್ಳ ಈ ಬಾಲಕನು ಯಾರಿರಬಹುದು? ಚಂಡಾಲರಲ್ಲಿ ಇಂತಹವರು ಇರುವುದುಂಟೆ? ಅಸಾಧಾರಣವಾದ ಪ್ರಾಣಿದಯೆಯೂ, ವಿನಯವಾಣಿಯೂ, ಸರಳಹೃದಯವೂ, ಭಗವಾನ್ ಬುದ್ಧದೇವನ ಅಂಶವೆಂದು ಸೂಚಿಸುತ್ತಲಿವೆ! ಇರಲಿ! ಅರ್ಹತ್ಪದವಿಗೆ ಅರ್ಹನಾಗುತ್ತಿರುವ ಈತನು ಯಾರೆಂಬುದನ್ನು ತಿಳಿಯುವೆನು [ಸಮೀಪಕ್ಕೆ ಹೋಗಿ]

ಎಲೈ ಬಾಲಕನೆ! ನೀನಾರು?

ನ್ಯಗ್ರೋಧ :—ಪೂಜ್ಯರೆ! ನಮಸ್ಕರಿಸುವೆನು; ನಾನು ನ್ಯಗ್ರೋಧನು.

ಮಹಾ :—ನ್ಯಗ್ರೋಧ! ನೀನು ಯಾರಮಗನು ?

ನ್ಯಗ್ರೋಧ :—ನಾನು ನಮ್ಮಮ್ಮನ ಮಗನು.

ಸುವೃತ್ತೆ :—ನ್ಯಗ್ರೋಧ! ಮೌರ್ಯಕುಲಾಲಂಕಾರನಾಗಿದ್ದ ಸುಷೀಮನ ಮಗನೆಂದು ಹೇಳಬಾರದೆ ?

ಮಹಾವರುಣ :—ಏನು! ಈ ಬಾಲಕನು ರಾಜಾಧಿರಾಜನಾದ ಬಿಂದುಸಾರನ ಪೌತ್ರನೆ ?

ಸುವೃತ್ತೆ :—ಕಂ|| ರಾಜೇಂದ್ರನೆನಿಸಿ ನಿರುಪಮ |
ತೇಜೋಯುತನಾಗಿ ಬಾಳ್ವಸುಕೃತಮುದಮುಮಾ ||
ಈಜಗದೊಳಳಿಯೆ ಪರಗೃಹ |
ಭೋಜನನುಂ ಪಾರುತಿರ್ಪನಾದಂ ಕುವರಂ ||೧೪||

[ನಿಟ್ಟುಸಿರುಬಿಡುತ್ತಾ] ವಿಧಿವಿಲಾಸವು ವಿಚಿತ್ರವಾದುದು.

ಮಹಾವರುಣ :—ಎಲೌ ಭದ್ರೆ! ಈ ಮಗು ಇಂತಹ ದುರ್ದಶೆಗೆ ಏಕೆ ಗುರಿಯಾದನು ?

ಸುವೃತ್ತೆ :—ಚಂಡಾಶೋಕನ ಭಯದಿಂದ ಆರ್ಯಳಾದ ಸುಷೀಮಪತ್ನಿ ಚಂದ್ರಮತೀದೇವಿಯು ಈ ಚಂಡಾಲವಾಟಿಯನ್ನಾಶ್ರಯಿಸಿ ಜೀವಿಸುತ್ತಿರುವಳು.

ಮಹಾ :—[ಪಶ್ಚಾತ್ತಾಪವನ್ನು ಸೂಚಿಸಿ] ಅಕ್ಕಟಾ! ದುರ್ವಿಧಿಯನ್ನು ಮೀರುವರಾರು? [ನ್ಯಗ್ರೋಧನನ್ನು ಆಲಿಂಗಿಸಿ] ನ್ಯಗ್ರೋಧ! ಹೊಟ್ಟೆಯ ಪಾಡನ್ನಾದರೂ ಬಿಟ್ಟು ಹಕ್ಕಿಗಳೊಡನೆ ಆಡುತ್ತಿರುವೆಯಲ್ಲ! ಇದೆಂತಹ ವಿನೋದ?

ನ್ಯಗ್ರೋಧ :—ಪೂಜ್ಯರೆ! ಇದಕ್ಕಿಂತಲೂ ವಿನೋದವಾವುದು? ಹಸಿವಾದಾಗ ಹಿಡಿಯನ್ನವೂ ಬೊಗಸೆ ನೀರೂ ಸಿಕ್ಕಿದರೆ ಹೊಟ್ಟೆಪಾಡು ಕಳೆಯಿತು.

ಮಹಾ :—[ಸ್ವಗತಂ] ಆಹಾ! ಈತನ ವೈರಾಗ್ಯವು ಅಸಾಧಾರಣವಾದುದು. [ಪ್ರ] ಮಗುವೆ? ಹುಟ್ಟಿತ್ತಲೇ ಈ ಸುಗುಣಗಳೆಲ್ಲವೂ ನಿನಗೆ ಹೇಗೆ ಬಂದುವು?

ನ್ಯಗ್ರೋಧ :—ಪೂಜ್ಯರೆ! ಕೇಳಬೇಕು.

ಕಂ|| ಸಲೆ ಸರ್ವ ಜೀವಿಗಳ ನಿ |
ಶ್ಚಲ ಮೋದಮೆ ಸತತವನುಪಮಾತ್ಮಾನಂದಂ ||
ಎಲೆ ಬಾಲ! ಕೇಳೆಸುತ್ತುಂ |
[illegible] ಸುಖಿ [illegible] ||೧೫||

ಮತ್ತು—ಸ್ಮಿತ ಮೃದು ವಚನಂ ಸಲೆ ಸಂ |
ತತ ಜೀವದಯಾಪರತ್ವಮೆತ್ತಂ ನೇಹಂ ||
ಅತಿಸೂಕ್ಷ್ಮಧರ್ಮಮಿದೆ ದಲ್ |
ಹಿತಕಾರಣಮೆಂದು ತಿಳಿದೆನಾರ್ಯೆಯ ನುಡಿಯಿಂ ||೩೭||

ಮಹಾ:—ಆಹಾ! ಈ ಮಗುವಿಗೆ ಇಂತಹ ಶಿಕ್ಷಣವನ್ನು ದಯೆಪಾಲಿಸಿದ ಮಾತೆಯು ದೇವಮಾತೆಯೇ ಸರಿ!

[ಪ್ರಕಾಶಂ] ನ್ಯಗ್ರೋಧ! ನನ್ನೊಡನೆ ಬರುವೆಯಾ? ಬುದ್ಧಧರ್ಮವನ್ನು ಉಪದೇಶಮಾಡುವೆನು.

ನ್ಯಗ್ರೋಧ:—ಪೂಜ್ಯರೆ! ನಮ್ಮಮ್ಮನು ಕಳುಹಿಸಿದರೆ ಬರುವೆನು.

ಮಹಾ:—ಇರಲಿ! ನಿಮ್ಮ ತಾಯಿಯನ್ನು ನಾನು ಒಡಂಬಡಿಸುವೆನು; ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗು.

ನ್ಯಗ್ರೋಧ:—ಪೂಜ್ಯರೆ! ನನ್ನೊಡನೆ ದಯಮಾಡಬೇಕು ಎಂದು ಕರೆದುಕೊಂಡು ಹೋಗುವನು ಎಲ್ಲರೂ ಹೋಗುವರು;

[ಅನಂತರ ಭಿಕ್ಷುವಾದ ನ್ಯಗ್ರೋಧನು ಕೆಲವುಮಂದಿ ಭಿಕ್ಷುಗಳೊಡನೆ ಪ್ರವೇಶಿಸಿ]

ಕಂ|| ನಿರ್ವಾಣಸಾಧನಂ ಸಕ |
ಲೋರ್ವೀ ಕಲ್ಯಾಣಕಾರಣಂ ಭವತರಣಂ ||
ದುರ್ವಾರ ದುಃಖಹರಣಂ |
ಸರ್ವಾರ್ಥನಿದಾನಮಲ್ತೆ ಗೌತಮಚರಣಂ ||೩೮||

ಎಲ್ಲರೂ:—ನಮೋಬುದ್ಧಾಯ! ನಮಸ್ಸಮಂತಭದ್ರಾಯ!!

ನ್ಯಗ್ರೋಧ:—ಭಿಕ್ಷುಗಳೆ! ಬುದ್ಧದೇವನ ಚರಣಸ್ಪರ್ಶದಿಂದ ಪವಿತ್ರವಾದ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸುತ್ತ ಎಲ್ಲೆಲ್ಲಿಯೂ ನಿರ್ವಾಣಮಹಿಮೆಯನ್ನು ಸಾರುತ್ತ ಬಂದೆವು. ನಿರ್ಮಲವಾದ ಗಂಗಾಶೋಣಾ ನದಿಗಳ ಸಂಗಮದಲ್ಲಿ ಬಹು ವೈಭವದಿಂದ ವಿರಾಜಿಸುವ ಆ ಪುರವಾವುದು?

ಮಾಲಿನೀ|| ಸುರುಚಿರಮಣಿಕೂಟಂ ರಮ್ಯಹರ್ಮ್ಯೋತ್ಕವಾಟಂ |
ನಿರುಪಮ ನವಕೋಟಾಟ್ಟಾಲಕಂ ಭೂಲಲಾಟಂ ||
ಸುರಭವನ ವಿಲಾಸಂ ನುದನಾಳಿ ಪ್ರಕಾಶಂ |
ಧರಣಿಯೊಳು ಪೆರೆ ಚಿತ್ತಂಗೊಳ್ವ ಮೆತ್ತಂ ಪವಿತ್ರಂ ||೩೯||

ಭಿಕ್ಷುಗಳು :—ನ್ಯಗ್ರೋಧಾಚಾರ್ಯ! ಬುದ್ಧದೇವನು ಶಿಷ್ಯನಾದ ಆನಂದನೊಡನೆ ಸಂಚರಿಸುವಾಗ ಅನೇಕ ದೇವತೆಗಳನ್ನು ನೋಡಿ ಆನಂದಿಸಿದ ಪವಿತ್ರವಾದ ಈ ನಗರವು ಪಾಟಲೀಪುತ್ರವೆಂಬುದು! ಇದು ಮಗಧರಾಜ್ಯಕ್ಕೆ ಶಿರೋಭೂಷಣವೆನಿಸಿರುವುದು. ನೋಡು.

ಕಂ|| ಕಮಲಾನರ್ತನರಂಗಂ |
ಕಮನೀಯಗುಣಾಂತರಂಗಸಜ್ಜನಸಂಗಂ ||
ಸುಮನೋದ್ಭಕ್ತಿತರಂಗಂ |
ಪ್ರಮದಾಸದ್ಧರ್ಮ ರಮ್ಯ ವಿಭವೋತ್ತುಂಗಂ ||೩೯||

ಮೌರ್ಯಕುಲೋದ್ಭವನಾದ ಅಶೋಕನು ಇದನ್ನು ಪಾಲಿಸುತ್ತಿರುವನು.

ನ್ಯಗ್ರೋಧ :—ಮನೋಹರವಾದ ಉದ್ಯಾನವನಗಳ ನವಕುಸುಮಗಂಧದಿಂದ ಸೊಗಯಿಸುವ ಈ ಪುರಕ್ಕೆ ಪಾಟಲೀಪುತ್ರವೆಂಬ ನಾಮವು ಒಪ್ಪುವುದು. ಒಳ್ಳೆಯದು, ಈ ನಗರವನ್ನು ಪ್ರವೇಶಿಸುವ.

ಭಿಕ್ಷುಗಳು :—ಹಾಗೆಯೇ ಆಗಲಿ [ಎಲ್ಲರೂ ನಗರವನ್ನು ಪ್ರವೇಶಿಸುವರು]

[ಅನಂತರ ಅಶೋಕನು ಆಸ್ಥಾನದಲ್ಲಿ ಸಾಮಾಜಿಕರೊಡನೆ ಪ್ರವೇಶಿಸುವನು]

ಬಲ್ಲಾತಕ :—ಮಹಾಪ್ರಭು! ತಮ್ಮ ತಂದೆಯವರಾದ ಬಿಂದುಸಾರ ಮಹಾರಾಜರವರು ಸ್ವರ್ಗಸ್ಥರಾಗಿ ನಾಲ್ಕು ವರ್ಷಗಳಾದುವು. ತಾವಿನ್ನೂ ಶಾಸ್ತ್ರೋಕ್ತವಾಗಿ ಪಟ್ಟಾಭಿಷಿಕ್ತರಾಗಲಿಲ್ಲ; ರಾಜ್ಯವೆಲ್ಲವೂ ಸಮಾಧಾನಸ್ಥಿತಿಗೆ ಬಂದಿರುವುದು! ಅಭಿಷೇಕಯತ್ನವು ನಡೆಯಬಹುದಷ್ಟೆ?

ರಾಧಾಗುಪ್ತ :—ಮಹಾರಾಜ! ತಮ್ಮ ಅಧಿಕಾರವು ಅಷ್ಟದಿಕ್ಕುಗಳಲ್ಲಿಯೂ ನಿರರ್ಗಳವಾಗಿ ನಡೆಯುತ್ತಿರುವುದು. ತಮ್ಮ ವಂಶಕ್ರಮಾಗತವಾದ ಮಯೂರಾಂಕಿತ ಸಿಂಹಾಸನದಲ್ಲಿ ತಾವು ಅಭಿಷಿಕ್ತರಾಗಬೇಕು. ಸುಕುಮಾರನಾದ ಮಹೇಂದ್ರನು ಯುವರಾಜಪದವಿಯನ್ನು ಅಲಂಕರಿಸಬೇಕು.

ಅಶೋ :—ಮಂತ್ರಿಗಳೆ! ನಿಮ್ಮ ಅಭಿಮತದಂತೆ ಯಥಾವಿಧಿಯಾಗಿ ಸಿಂಹಾಸನಾರೋಹಣವನ್ನು ಮಾಡುವೆನು. ಮಹೇಂದ್ರನಿಗಿಂತಲೂ ಸಹೋದರನಾದ ತಿಷ್ಯನಲ್ಲಿ ನನಗೆ ಪ್ರೀತಿ ಹೆಚ್ಚಾಗಿರುವುದು. ಆದುದರಿಂದ ತಿಷ್ಯನೇ ಯುವರಾಜನಾಗಬೇಕು.

ಮಂತ್ರಿಗಳು :—ಆಹಾ! ದೇವರ ಸಹೋದರವಾತ್ಸಲ್ಯವು ಅಪರಿಮಿತವಾದುದು

ಅಶೋ :—ಅಮಾತ್ಯ ! ರಾಧಾಗುಪ್ತ ! ಪುರೋಹಿತರಾದ ಭಾಸುದತ್ತರ ಅನುಮತಿಯಂತೆ ಪಟ್ಟಾಭಿಷೇಕಕ್ಕೆ ತಕ್ಕ ಸಂಭಾರಗಳನ್ನು ಸಜ್ಜುಗೊಳಿಸಿ ಒಂದು ಸುಮುಹೂರ್ತವನ್ನು ನಿಷ್ಕರ್ಷೆಮಾಡತಕ್ಕದು.

ರಾಧಾ :—ಅಪ್ಪಣೆಯಂತೆ [ಎಂದು ಹೊರಡುವನು]

[ತೆರೆಯಲ್ಲಿ “ನಿರ್ವಾಣಸಾಧನಂ” ಇತ್ಯಾದಿಯಾದ ಹಾಡು ಕೇಳುವುದು]

ಅಶೋ :—[ಮುಂದೆ ನೋಡಿ] ಆಹಾ ! ಅಪೂರ್ವತೇಜಸ್ವಿಯಾದ ಈ ಬಾಲ ಸಂನ್ಯಾಸಿ ಯಾರೋ ? ಎಲೈ ಮಧುಗುಪ್ತ ! ಅರಮನೆಯಮುಂದೆ ಹೋಗುತ್ತಿರುವ ಆ ಬಾಲಭಿಕ್ಷುವನ್ನು ಕರೆದುಕೊಂಡು ಬಾ !

ದೌವಾ :—ಅಪ್ಪಣೆ [ಎಂದು ಹೋಗಿ ನ್ಯಗ್ರೋಧನೊಡನೆ ಪ್ರವೇಶಿಸುವನು]

ಅಶೋ :—[ನೋಡಿ ಪರಮಾಶ್ಚರ್ಯದಿಂದ] ಈ ಮನೋಹರಾಕೃತಿಯನ್ನು ನೋಡುತ್ತಲೆ ಆನಂದರಸಪ್ರವಾಹವು ಮೇರೆ ಮೀರಿ ನನ್ನಮೇಲೆ ಪ್ರವಹಿಸುತ್ತಿರುವುದಲ್ಲ !

ವೃ॥ ಇದು ವೈರಾಗ್ಯ ನಿದಾನಮೋ ? ವಿಪುಲಧರ್ಮಾಸಾರಸರ್ವಸ್ವಮೋ ? |
ಇದು ಸುಜ್ಞಾನ ವಿಲಾಸಮೋ ? ಪರತರಾನಂದೈಕವಾರಾಶಿಯೋ ? ||
ಇದು ತೇಜಃಪರಿಪುಂಜಮೋ ? ಪ್ರವಿಲಸನ್ನಿರ್ವಾಣಸಂಭಾಗ್ಯಮೋ ? |
ಇದು ದೀವ್ಯದ್ವರ ಸತ್ವಮೂರ್ತಿಯೊ ? ಮಹೀಕಲ್ಯಾಣಚಿದ್ರೂಪಮೋ ? ||

[ಎಲ್ಲರೂ ಆಶ್ಚರ್ಯಪಡುವರು]

ನ್ಯಗ್ರೋಧ :—ಸಮಸ್ತಮಂಗಳಭದ್ರಾಯ ! ಧರ್ಮಸ್ವರೂಪನಾದ ಮಹಾರಾಜನು ವಿಜಯಿಸಲಿ !

ಅಶೋ :—ಗುರುಚರಣಾರವಿಂದಗಳಲ್ಲಿ ವಂದನೆಗಳು [ಭಕ್ತಿಯಿಂದ ನಮಸ್ಕರಿಸುವನು ; ಉಳಿದವರೂ ನಮಸ್ಕರಿಸುವರು]

ನ್ಯಗ್ರೋಧ :—ಕಲ್ಯಾಣಮಸ್ತು ; ಕಲ್ಯಾಣಮಸ್ತು !

ಅಶೋ :—ಭಿಕ್ಷುಗಳೆ ! ತಮಗೆ ಇಷ್ಟಬಂದ ಆಸನದಲ್ಲಿ ಕುಳ್ಳಿರಬಹುದು !

ನ್ಯಗ್ರೋಧ :—ಈ ಸಭೆಯಲ್ಲಿ ಭಿಕ್ಷುಗಳಾದವರಿಗೆ ತಕ್ಕ ಪೀಠವೇ ನಿರ್ಮಿತವಾಗಿಲ್ಲ.

[ಎಂದು ಸಿಂಹಾಸನದ ಕಡೆ ಸಾರುವನು]

ಅಶೋ : —[ಪರಮಾನಂದದಿಂದ ಎತ್ತಿಕೊಂಡು ಆಲಿಂಗಿಸಿ ಸಿಂಹಾಸನದಲ್ಲಿ ಕುಳ್ಳಿರಿಸಿ] ಮಹಾಗುರು! ಈ ಬಾಲ್ಯವಯಸ್ಸಿನಲ್ಲಿ ಹೇಗೆ ಇಂತಹ ವೈರಾಗ್ಯ ಸಿದ್ಧಿಯಾಯಿತೊ?

ನ್ಯಗ್ರೋಧ:—ಸಾರ್ವಭೌಮ! ವೈರಾಗ್ಯಕ್ಕೆ ಕಾರಣವು ವಯಸ್ಸಲ್ಲ; ಮನಸ್ಸು.

ಅಶೋ :—ಪೂಜ್ಯ! ಮನೋನಿಗ್ರಹವು ಸಹಜಚಪಲರಾದ ಬಾಲಕರಿಗೆ ಹೇಗೆ ಸಾಧ್ಯವೊ?

ನ್ಯಗ್ರೋ :—ಮಹಾರಾಜ! ಬುದ್ಧದೇವನ ಅನುಗ್ರಹದಿಂದ ಲಭಿಸದಿರುವುದಾವುದು?

ಅಶೋ :—ಭಿಕ್ಷುವೆ! ಶಾಶ್ವತಸುಖಕ್ಕೆ ಭಗವಂತನಾದ ಬುದ್ಧದೇವನು ಯಾವ ತತ್ವವನ್ನು ಉಪದೇಶಿಸುವನು?

ನ್ಯಗ್ರೋ :—ಮಹಾರಾಜನೆ! ಕೇಳು!

ಕಂ|| ಕ್ಷಿತಿಯೊಳ್ ಪ್ರಮತ್ತನಾದಂ |
ಮೃತನೇ ದಿಟವಪ್ರಮತ್ತನಮೃತನೆನಿಪ್ಪಂ |
ನುತ ಗುರು ಚರಣಾನುಗ್ರಹ |
ಹಿತೋಪದೇಶಂ ಪ್ರಮಾದವಂ ತೊಲಗಿಸುಗುಂ ||೪೧||

ಅಶೋ :—ಗುರುವೆ! ಪ್ರಮಾದದಿಂದ ಮನುಷ್ಯನು ಬಾಧಿತನಾಗುವುದು ಹೇಗೆ?

ನ್ಯಗ್ರೋ :—ಚಕ್ರೇಶ್ವರ!

ವೃ|| ಪುದಿದದುರಾಶೆದುಃಖಮನೆ ಸಾರ್ಚುಗುಮುರ್ಚುಗುಮಾಂತಸೂಯೆದಲ್ |
ಹೃದಯಮನಂತು ಕೋಪಮದೆಯಂ ಸಲೆ ಚುರ್ಚುಗುಮಗ್ನಿಯಂತೆವೊಲ್ |
ಸದಮಲಶಾಂತಿಯಂ ಜಗಗೆ ದೂರಮನಾಗಿಪುದೀರ್ಷ್ಯೆ ಲೋಭಮಾ |
ಸ್ಪದಮಸುಖಕ್ಕೆ ಬೇಸೆಯೊಡರಿಪ್ಪುದು ದುರ್ಮದಮೇನನೆಂಬೆನೋ? ||೪೨||

ಅಶೋ :—ಮಹಾಗುರು! ದುಃಖವನ್ನು ದೂರಮಾಡಿ ಆನಂದವನ್ನು ಸಂಪಾದಿಸುವ ಉಪಾಯವಾವುದು?

ನ್ಯಗ್ರೋ : —ನಿರಂತರವೂ ಸಂಘಸೇವೆಗಾಗಿ, ಸ್ವಾರ್ಥವನ್ನು ಪರಿತ್ಯಜಿಸಿ, ಆತ್ಮಸಮರ್ಪಣೆಮಾಡುವುದೇ ನಿತ್ಯವಾದ ಆನಂದಮಾರ್ಗವು?

ಅಶೋ :—ಗುರುವೆ! ತಮ್ಮ ಉಪದೇಶವಾಣಿಯು ನನ್ನ ಹೃದಯವನ್ನು ಉತ್ತೇಜನಗೊಳಿಸುತ್ತಿದೆ. ಲೋಕಸೇವಾತತ್ವವನ್ನು ನಿರೂಪಿಸಬೇಕು.

ನ್ಯಗ್ರೋ :—ಪ್ರಭು ! ಲೋಕಸೇವಾತತ್ತ್ವವು ದಯಾಮೂಲವಾದುದು ; ಭಗವಂತನಾದ ಶಾಕ್ಯಸಿಂಹನು ಪ್ರಪಂಚದ ಕಷ್ಟವನ್ನು ನಿರ್ಮೂಲಮಾಡಿ ಶಾಶ್ವತವಾದ ಆನಂದವನ್ನು ನೆಲೆಗೊಳಿಸಲು ಸ್ವಸುಖವನ್ನೂ ತೃಣಕ್ಕೆಣೆಮಾಡಿ ಚಿರತಪೋನಿಷ್ಠೆಯಿಂದ ಲಬ್ಧವಾದ ದಿವ್ಯಾಮೃತವನ್ನು ಉತ್ಕೃಷ್ಟನಿಕೃಷ್ಟರೆನ್ನದೆ, ಪಂಡಿತಪಾಮರರೆನ್ನದೆ, ದೊಡ್ಡವರು ಚಿಕ್ಕವರೆನ್ನದೆ, ಒಂದೇ ಸಮನಾಗಿ ಮನೆಮನೆಗೂ, ಬೀರಿ ಅನುಗ್ರಹಿಸಿದನಲ್ಲವೆ ? ಈ ತತ್ತ್ವವನ್ನು ಅತ್ಯಾದರದಿಂದ ಅನುಷ್ಠಿಸಿದವರೆಲ್ಲರೂ ಪುನೀತರಾಗುವುದರಲ್ಲಿ ಸಂದೇಹವೇನು ?

ಅಶೋ :—ದೇಶಿಕೇಶ್ವರ ! ತಮ್ಮ ಚರಣವನ್ನು ಆಶ್ರಯಿಸಿರುವೆನು ; ಬೌದ್ಧಧರ್ಮದಲ್ಲಿ ನನಗೆ ಕ್ಷಣಕ್ಷಣಕ್ಕೂ ಆಸಕ್ತಿ ಹೆಚ್ಚಾಗುತ್ತಿರುವುದು ? ನನ್ನನ್ನು ಅನುಗ್ರಹಿಸಬೇಕು.

ನ್ಯಗ್ರೋ :—ಸಾರ್ವಭೌಮ ! ಮಗಧಚಕ್ರವರ್ತಿಯಾದ ನಿನಗೀ ಧರ್ಮಾನುರಾಗವು ತಕ್ಕುದು ! ಈ ಮಗಧವು ಭಗವಂತನಾದ ಬುದ್ಧದೇವನಿಂದ ಮೊದಲು ಅನುಗ್ರಹವನ್ನು ಪಡೆಯಿತು ! ಈ ದೇಶದಲ್ಲಿ ಹರಿವ ನೈರಂಜನಾ ನದಿಯ ತೀರದಲ್ಲಿದ್ದ ಬೋಧಿವೃಕ್ಷದ ಬುಡದಲ್ಲಿಯೇ ಗೌತಮನು ಬುದ್ಧತ್ವವನ್ನು ಅರಿತುದು ! ನಿನ್ನ ರಾಜ್ಯದಲ್ಲಿರುವ ಕುಕ್ಕುಟಪಾದ ಪರ್ವತದ ಮೇಲಿದ್ದು ಅನೇಕವೇಳೆ ಶಾಕ್ಯಮುನಿಯು ತನ್ನ ದಿವ್ಯೋಪದೇಶವನ್ನು ದಾನಮಾಡಿರುವನು. ನಿನ್ನ ಆಳಿಕೆಗೆ ಸೇರಿದ ರಾಜಗೃಹಪುರದಲ್ಲಿ ಬಿಂಬಸಾರನು ಬುದ್ಧಸ್ವಾಮಿಯಿಂದಲೇ ದೀಕ್ಷೆಯನ್ನು ಪಡೆದು ಧನ್ಯನಾದನು. ಮಗಧದಲ್ಲಿ, ಈಗಲೂ ಬುದ್ಧಗಯೆ, ಕುಕ್ಕುಟಪಾದ, ರಾಜಗೃಹ, ಕುಶಾಗಾರಪುರ, ನಾಲಂದ ಇವು ಪವಿತ್ರತೀರ್ಥಗಳೆನಿಸಿ ಪ್ರಸಿದ್ಧವಾಗಿರುವುವು. ಆದುದರಿಂದ ಮಗಧನಿವಾಸಿಗಳು ಈ ಮಹಾ ಕ್ಷೇತ್ರಗಳ ಸಂಸರ್ಗದಿಂದ ಧನ್ಯರು!

ಅಶೋ :—ಆಚಾರ್ಯವರ್ಯ ! ಜ್ಞಾನವೈಭವದ ಭಾಂಡಾಗಾರದಂತಿರುವ ತಮ್ಮ ಸುಮಧುರ ಕಂಠದಿಂದ ಹೊರಟ ದಿವ್ಯೋಪದೇಶಾಮೃತವೂ, ಭಗವಂತನಾದ ಬುದ್ಧದೇವನ ಚಾರಿತ್ರವೂ ನನ್ನನ್ನು ಧನ್ಯನನ್ನಾಗಿ ಮಾಡಿದುವು.

ನ್ಯಗ್ರೋ :—ಪ್ರಭುವರ ! ಧರ್ಮಜಿಜ್ಞಾಸೆಯಲ್ಲಿ ಪರಮಾದರವುಳ್ಳ ನೀನು ಧನ್ಯನು. ನಿನ್ನಿಂದ ಸದ್ಧರ್ಮವು ಪ್ರಪಂಚದಲ್ಲೆಲ್ಲಾ ವ್ಯಾಪಿಸಿ ಶಾಂತಿಯನ್ನು

ನೆಲೆಗೊಳಿಸುವುದೆಂದು ನಂಬುವೆನು. ಅಷ್ಟಾಂಗಿಕಮಾರ್ಗದ* ಮತ್ತು ಸತ್ಯ ಚತುಷ್ಟಯದ† ಮಹಿಮೆಯನ್ನು ಸಾವಧಾನವಾಗಿ ತಿಳಿದು ಜ್ಞಾನಿಯಾಗುವೆ! [ತೆರೆಯಲ್ಲಿ]

ಕಂ|| ಬಿಸುಪುಳಿದಾ ಚಂಡಕರಂ |
ಪೊಸಗೈರಿಕ ವಸನವಾಂತು ಸಾಮ್ಯತೆಯಿಂದಂ |
ಜಿಸುತುಂ ವರಹಂಸನೆನಲ್ |
ಪೆಸರಾಂತಂ ಸಾಧುವರುಣಸಂಗದಿನೊಲವಿಂ ||೪೩||

ಅಶೋ:—[ಕೇಳಿ] ಗುರುವೆ! ಸಂಧ್ಯಾಕಾಲವಾಯಿತು; ಸಾವಕಾಶವಾಗಿ ಧರ್ಮರಹಸ್ಯವನ್ನು ವಿಸ್ತರಿಸಬೇಕು! ಇಂದು ವಿಶ್ರಾಂತಿಯನ್ನು ಪಡೆಯೋಣವಾಗಲಿ!

ನ್ಯಗ್ರೋ:—ಮಹಾರಾಜ! ಹಾಗೆಯೇ ಆಗಲಿ [ಎಲ್ಲರೂ ಹೊರಡುವರು].

ಇದು ತೃತಿಯಾಂಕವು.

ಚತುರ್ಥಾಂಕವು.

[ಪುರಪಾಲಕರು ಭೀತರಾಗಿ ಓಡಿಬರುವರು].

ಪುರಪಾಲಕ:—ಅಯ್ಯೋ! ಅಯ್ಯೋ! ಮುಂದೇನುಗತಿ? ನಮ್ಮ ಕಳಿಂಗ ರಾಜ್ಯಕ್ಕೆ ಏನೋ ವಿಪತ್ತು ಬಂದಹಾಗಿದೆ. ಸಮುದ್ರದಂತೆ ಅಪಾರವಾದ ಯಾವುದೋ ಒಂದು ಸೈನ್ಯವು ನಮ್ಮ ಪಟ್ಟಣದಕಡೆ ಸಾಗಿ ಬರುತ್ತಿರುವುದಲ್ಲ!

ಕಂ|| ತೇರ್ಗಳದೇಂ ಪೇರಾನೆಯ |
ವರ್ಗಮದೇಂ ತುರಗವೃಂದಮೇಂ ಪಟುಭಟರೇಂ |
ಭೋರ್ಗರೆವ ದುಂದುಭಿಗಳೇ |
ಸಾರ್ಗಂ ಬಹು ಭೀತಿ ಜನಕವಮುಮಾ ಸೈನ್ಯಂ ||೪೫||

---

* ಸಮ್ಯಗ್ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಗ್ವಾಕ್, ಸಮ್ಯಕ್ಕರ್ಮಾಂತ, ಸಮ್ಯಗಾಜೀವ, ಸಮ್ಯಗ್ವ್ಯಾಯಾಮ, ಸಮ್ಯಕ್ ಸ್ಮೃತಿ, ಮತ್ತು ಸಮಾಧಿ.

† ದುಃಖ, ದುಃಖದ ಉತ್ಪತ್ತಿ, ದುಃಖಧ್ವಂಸ, ದುಃಖಧ್ವಂಸದ ಉಪಾಯ.

ಅಬ್ಬಬ್ಬಾ! ಕೆಂಧೂಳು ಆಕಾಶವನ್ನು ವ್ಯಾಪಿಸುತ್ತಿದೆ; ಶಸ್ತ್ರಾಸ್ತ್ರಗಳ ಹೊಳಪು ಕಣ್ಣನ್ನು ಚುಚ್ಚುತ್ತಿದೆ; ಈ ವಿಷಯವನ್ನು ನಮ್ಮ ಶಿಬಿರನಾಯಕನಿಗೆ ಅರಿಕೆಮಾಡುವ ಬನ್ನಿರಿ [ಎಂದು ಹೊರಟು ಶಿಬಿರನಾಯಕನೊಡನೆ ಪ್ರವೇಶಿಸಿ] ಶಿಬಿರಾಧ್ಯಕ್ಷನೆ! ಕಾಪಾಡು, ಕಾಪಾಡು [ಎಂದು ಪಾದದಮೇಲೆ ಬೀಳುವರು].

ಶಿಬಿರನಾಯಕ :—ಏನೈಯ! ಅದು ?

ಪುರಪಾ :—ಸ್ವಾಮಿ! ಏನು ಹೇಳೋಣ? [ಎಂದು ಗಡಗಡ ನಡುಗುತ್ತ] ಅಪಾರವಾದ ಸೈನ್ಯವು ಬರುತ್ತಿದೆ. ಇನ್ನು ನಮ್ಮ ಪಟ್ಟಣವು ಉಳಿಯುವ ಹಾಗಿಲ್ಲ!

ಶಿಬಿರನಾ :—ಎಲೈ, ನೀವು ಭಯಪಡಬೇಡಿರಿ; ಮಗಧ ಚಕ್ರವರ್ತಿಯಾದ ಅಶೋಕನು ರಾಜ್ಯ ಲೋಭದಿಂದ ಸೈನ್ಯ ಸಮೇತನಾಗಿ ಬರುತ್ತಿರುವನು; ಇದನ್ನು ಮೊದಲೇ ತಿಳಿದಿದ್ದ ನಮ್ಮ ರಾಜನು ಸೈನ್ಯವನ್ನು ಸಜ್ಜುಗೊಳಿಸಿ ಕಾದಿರುವನು. ನೀವು ನಿಮ್ಮ ಕೆಲಸಕ್ಕೆ ಹೊಕಡಿರಿ!

ಪುರಪಾಲರು :—ಅಪ್ಪಣೆ [ಎಂದು ಹೊರಡುವರು].

ಶಿಬಿರನಾಯಕ :—ಅಕಟಾ! ಇಂತಹ ಮಹಾಯುದ್ಧ ಪ್ರಸಂಗಗಳು ಏಕೆ ಒದಗುವುವೋ? ರಾಜರುಗಳೇನೋ ರಣೋತ್ಸಾಹಿಗಳಾಗಿಯೇ ಇರುವರು. ಪರಿಣಾಮದಲ್ಲಿಯಾದರೋ ವಿಜೇತವಿಜಿತರಿಬ್ಬರಿಗೂ ಹಾನಿಯು ತಪ್ಪಲಾರದು. ಉಭಯಪಕ್ಷಗಳಲ್ಲಿಯೂ ವೀರರಾದವರು ರಣದೇವತೆಗೆ ಬಲಿಯಾಗುವುದರಿಂದ ದೇಶದ ರಕ್ಷಣೆಗೇ ದಿಕ್ಕಿಲ್ಲದೆ ಹೋಗುವುದು. ಪ್ರಜೆಗಳ ಹಿತಸಾಧನಕ್ಕಾಗಿ ವಿನಿಯೋಗಿಸಬೇಕಾದ ಬೊಕ್ಕಸದ ದ್ರವ್ಯವು ಯುದ್ಧಸಂಭಾರಕ್ಕಾಗಿ ವೆಚ್ಚವಾಗಿ ಪ್ರಜೆಗಳಿಗೆ ಕಷ್ಟವುಂಟಾಗುವುದು. ವಾಣಿಜ್ಯ, ವ್ಯವಸಾಯಾದಿಗಳಿಗೆ ಸೌಕರ್ಯಗಳು ಕಡಿಮೆಯಾಗಲು ದೇಶಕ್ಕೆ ಬಡತನವುಂಟಾಗುವುದು; ಕುಶಲವಿದ್ಯೆಗಳು ಹಾಳಾಗುವುವು; ರಾಜ್ಯದ ಭಂಡಾರವು ಬರಿದಾಗಿ ದೇಶವು ಸಾಲಕ್ಕೆ ಸಿಕ್ಕಿ ನರಳಬೇಕಾವುಗುವುದು; ಇದರಿಂದ ಪ್ರಜೆಗಳು ಕೊಡಬೇಕಾದ ತೆರಿಗೆಗಳು ಹೆಚ್ಚಾಗುವುವು. ಪ್ರಭುಗಳಿಗೂ, ಪ್ರಜೆಗಳಿಗೂ ವೈಮನಸ್ಯವುಂಟಾಗುವುದು: ಹೇಗೂ ರಾಜ್ಯಕ್ಕೆ ಕ್ಷೋಭೆ, [ಚಿಂತಿಸಿ] ಹುಂ! ಇರಲಿ ನಮ್ಮ ಮಹಾರಾಜನಿಗೆ ಸೈನ್ಯಾಗಮನ ವೃತ್ತಾಂತವನ್ನು ವಿಜ್ಞಾಪಿಸುವೆನು [ಹೊರಟು ಹೋಗುವನು].

[ಅನಂತರ ರಣಾಂಗಣದ ಪಟಗೃಹದಲ್ಲಿ ಅಶೋಕನೂ ರಾಧಾಗುಪ್ತನೂ ಪ್ರವೇಶಿಸುವರು].

ಅಶೋ ;—ಅಮಾತ್ಯರಾಧಾಗುಪ್ತ !

ಕಂ|| ರಣಭೀಮನಾ ಕಳಿಂಗಂ |
ಮಣಿವನೆ? ತಾಂ ನಮಗೆ ರಾಜ್ಯಲೋಭದಿನವನಂ |
ಕೆಣಕಿದೆವಲೆ? ಭಾವಿಸೆ ನ |
ಮ್ಮಣಿಕೆಯದೇಂ ಸಿದ್ಧಿಸುವುದೊ ಕಳವಳವಾಂತೆಂ ||೪೭||

ಬಹು ದೀರ್ಘವಾದ ಈ ಯುದ್ಧ ಪ್ರಯತ್ನದಲ್ಲಿ ನನ್ನ ಮನದಿಂದ ಜಯಾಭಿಲಾಷೆಯು ದೂರವಾಗುತ್ತಿರುವುದು.

ರಾಧಾ :—ಮಹಾಸ್ವಾಮಿಯವರು ಹೀಗೆ ವಿಮನಸ್ಕರಾಗಬಹುದೆ? ತಮ್ಮ ಅಪರಿಮಿತವಾದ ಪ್ರತಾಪಜ್ವಾಲೆಯು ದಿಗಂತಗಳನ್ನು ವ್ಯಾಪಿಸಿ ಕಳವಳಗೊಳಿಸುತ್ತಿರುವುದೆಂದರೆ ಅತಿಶಯೋಕ್ತಿಯಾಗಲಾರದು ? ತಮ್ಮ ಸೈನ್ಯದ ವೀರರು ಸಾಮಾನ್ಯರಲ್ಲ !

ವೃ|| ಕಡಲೇಳಂ ಕುಡಿವರ್ ; ಮಹಾದ್ರಿ ಕುಲಮಂ ಕಿಳ್ತೆತ್ತುವರ್ ; ಸೊರ್ಕಿನಿಂ |
ಪಡೆ ಭೂಮೀತಳಕಿಟ್ಟಪರ್ ಕರಮೆ ಚಂದ್ರಾದಿತ್ಯ ಬಿಂಬಂಗಳಂ || ಮೃಡನಂ
ತಾಂಗುವರುರ್ಕಿನಿಂದೆ ; ಸಿಡಿಲಂ ಮೇಣ್ ನುಂಗುವರ್ ಪೊಂಗುವರ್ |
ಬಿಡದಾರ್ದಾಹವಮಲ್ಲರಪ್ಪ ಕಲಿಗಳ್ಗೇಂ ಶಾತ್ರವರ್ ಲೆಕ್ಕಮೇ ||೪೭||

ಅಶೋ :—ರಾಧಾಗುಪ್ತ! ರಣಾಂಗಣದಿಂದ ವಾರ್ತೆಯೇನಾದರೂ ಬಂದಿರುವುದೇನು ?

ರಾಧಾ :—ಮಹಾಪ್ರಭು ಉಭಯಪಕ್ಷದ ವೀರರೂ ಆವೇಶದಿಂದ ಕಾದುತ್ತಿರುವರೆಂದೂ, ಸೈನ್ಯದಲ್ಲಿ ರೋಗೋಪದ್ರವಗಳು ಹರಡದಿದ್ದರೆ ಈವರೆಗೇ ವಿಜಯವು ತಮ್ಮ ಕೈಸೇರುವಂತಿದ್ದಿತೆಂದೂ, ಸೇನಾಪತಿಯಾದ ಚಂಡಬಾಹುವು ತಿಳಿಸಿರುವನು.

ಅಶೋ :—ಇರಲಿ! ಯುದ್ಧರಂಗದ ವಿಷಯಗಳನ್ನು ಪ್ರತ್ಯಕ್ಷವಾಗಿ ನೋಡಿ ತಿಳಿಯುವ ಬಾ !

[ಎಂದಿಬ್ಬರೂ ಯುದ್ಧಭೂಮಿಯನ್ನು ಪ್ರವೇಶಿಸುವರು]

[ತೆರೆಯಲ್ಲಿ ಮಹಾ ಕಳಕಳವಾಗುವುದು]

ರಾಧಾ :—ಮಹಾಸ್ವಾಮಿ! ಚಿತ್ತವಿಸಬೇಕು; ನಮ್ಮ ಸೇನಾವೀರರ ವಿಜಯ ಲಕ್ಷ್ಮಿಯು ತಮ್ಮ ಕೈಸೇರಿರುವಳೆಂಬುದನ್ನು ಉತ್ಸಾಹಧ್ವನಿಯು ಸೂಚಿಸುವುದು. [ಮುಂದೆ ನೋಡಿ] ಇದೋ ಸೇನಾಪತಿಯಾದ ಚಂಡಬಾಹು!

ಚಂಡಬಾಹು :—[ಹಸನ್ಮುಖನಾಗಿ ಪ್ರವೇಶಿಸಿ] ಸಾರ್ವಭೌಮರು ವಿಜಯಿಸಲಿ! ಮಹಾನದೀಗೋದಾವರಿಗಳ ನಡುವಣ ಫಲವತ್ತಾದ ಕಳಿಂಗರಾಜ್ಯವು ತಮ್ಮ ಪಾದಕ್ಕೆ ಅಧೀನವಾಯಿತು.

ಅಶೋ :—ಸೇನಾನಿಯೆ! ನಿನ್ನ ವಿಜಯದ ವೃತ್ತಾಂತವನ್ನು ವಿಶದಪಡಿಸು.

ಚಂಡಬಾಹು :—ಮಹಾಪ್ರಭು! ಕೇಳಬೇಕು.

ವೃ|| ಮುತ್ತುತ್ತುಂರಿಪುದುರ್ಗಮಂ, ಪ್ರಬಲಸೇನಾನೀಕಮುಂದರ್ಪದಿಂ ||
ದೆತ್ತಂ ಕತ್ತರಿಸುತ್ತು ಮೊತ್ತಿನಡೆದೆಂ; ಮುಂದೊತ್ತಿಬಂದರ್ಕಳಂ |
ಮತ್ತಂ ಸುತ್ತಿಕರಂ ಕರುತ್ತುತರಿದೆಂ; ದೂಳ್ಗೈದೆನಾ ಕೋಂಟೆಯುಂ |
ಚಿತ್ತಂಗೊಳ್ವಿನ ಮಿಾಮಹಾವಿಜಯಮಂ. ತಂದೆಂ ನರೇಂದ್ರಾಗಣೀ ||೪೮||

ಆ ದುಷ್ಟನಾದ ಕಳಿಂಗನು ತಲೆ ತಪ್ಪಿಸಿಕೊಂಡು ಎಲ್ಲಿಯೋ ಓಡಿಹೋದನು. ಇನ್ನು ಅವನು ಬದುಕಿದ್ದರೂ ಸತ್ತಂತೆಯೇ ಸರಿ!

[ತೆರೆಯಲ್ಲಿ]

ಕಂ|| ಹಾ ಹಾ! ನಿಷ್ಠುರ ಹೃದಯಾ |
ಹಾ ಹಾ! ನಿರ್ದಯ! ಮದಾತ್ಮ! ಹಾ! ದುರ್ಗಾಮಾ |
ಹಾ ಹಾ! ಚಂಡಾಶೋಕಾ |
ಹಾ ಹಾ! ನಿನಗಾಯ್ತೆ ಮೋದಮೆಮ್ಮಳಲಿಂದಂ ||೪೯||

ಅಶೋ :—[ಕೇಳಿ] ಆಹಾ! ಅದಾರು, ನಮ್ಮನ್ನು ನಿಂದಿಸುತ್ತಾ ರೋದಿಸುತ್ತಿರುವರು?

ಚಂಡ :—ಮಹಾಪ್ರಭು! ವಿಜಯೋತ್ಸಾಹದಿಂದ ನಮ್ಮ ಸೈನಿಕರು ಪುರವನ್ನು ಸೂರೆಮಾಡುತ್ತಿರುವರು; ಇದನ್ನು ಸಹಿಸಲಾರದೆ ಪಟ್ಟಣಿಗರು ಹೀಗೆ ಗೋಳಾಡುತ್ತಿರುವರು!

ಅಶೋ :—ಅಕಟಕಟಾ! ಈ ರೋದನವು ನನ್ನನ್ನು ವಿಷಾದಗೊಳಿಸುತ್ತಿರುವುದು! ಚಂಡಬಾಹು! ನೀನು ನಮ್ಮ ಸೈನಿಕರ ದುರ್ವರ್ತನವನ್ನು ನಿಲ್ಲಿಸಿ ಪಟ್ಟಣಿಗರನ್ನು ಸಮಾಧಾನಗೊಳಿಸು!

ಚಂಡ : — ಮಹಾರಾಜರವರ ದಯಾಗುಣವು ಶ್ಲಾಘ್ಯವಾದುದು.

[ಹೊರಡುವನು]

ಅಶೋ : — ಅಮಾತ್ಯ ರಾಧಾಗುಪ್ತ! ಈ ಸಮರಾಂಗಣವನ್ನು ನೋಡಿದೆಯಾ?

ವೃ|| ಅಕಟಾ ! ರಕ್ತದಪೂರ್ಣಸಲ್ ಹೃದಯಮಂ ಸೀರಾಗಿಸುತ್ತಿರ್ಪುದೇ |
ಅಕಟಾ ! ಮಾಂಸದಖಂಡಮೆನ್ನ ಮನಮಂ ತಾಂ ಖಂಡಮಂಗೈವುದೇ |
ಅಕಟಾ ! ಈಪೆಣದೊಟ್ಟಿಲೆನ್ನ ಅಸುವಂ ನಿರ್ಜೀವಮಂ ಮಾಳ್ಪುದೇ |
ಅಕಟಾ ! ಜೀನೆಯಿನೀನರಲ್ವರಳಲೇ ನನ್ನಂಗಮಂ ಚುರ್ಚುಗುಂ ||೫೦||

ರಾಧಾ : — ಮಹಾಪ್ರಭು! ವಿಷಾದಕ್ಕೆ ಕಾರಣವೇನು? ಭರತಖಂಡವೆಲ್ಲವೂ ಈಗ ತಮ್ಮ ಏಕಚ್ಛತ್ರಾಧಿಪತ್ಯಕ್ಕೆ ಒಳಪಟ್ಟುದಾಯಿತು.

ಕಂ|| ಪರಿಯಿಸಿ ರಕ್ತದ ಪೊನಲಂ |
ಮರೆಯಿಸಿ ಮೇಣ್ ಶತ್ರುಲಕ್ಷ್ಮಿಯಂ ಸಂಗರದೊಳ್ |
ಮೆರೆಯಿಸಿ ನಿಜ ಭುಜಕೀರ್ತಿಯ |
ಸುರೆ ಪಡೆದೀ ವಿಜಯಮೆ ಮಗೆ ಹಬ್ಬ ಮೆನಿಸದಂ ||೫೧||

ಅಶೋ : — ಅಕಟಕಟಾ ! ಎಂತಹ ಹಬ್ಬ ?

ಕಂ|| ಹಬ್ಬಂ ನಾಯ್ ನರಿಗಳ್ಗರೆ |
ಹಬ್ಬಂ ಗೃಧ್ರಕ್ಕೆ ಕಾಕಘೂಕಾವಳಿಗಂ |
ಹಬ್ಬಂ ಪಿಶಾಚ ಸಮಿತಿಗೆ |
ಹಬ್ಬಂ ನಮಗಾಗೆ ನರಪಿಶಾಚರೆವಲ್ತೇ ||೫೨||

ರಾಧಾ : — ಆಹಾ ! ಸಾರ್ವಭೌಮನ ಹೃದಯವು ಈಗಲೀಗ ದಯೆಯಿಂದ ದ್ರವಿಸತೊಡಗಿತು ! ಪ್ರಭು ! ಕ್ಷತ್ರಿಯೋಚಿತವಾದ ದಿಗ್ವಿಜಯವು ರಕ್ತಪಾತವಿಲ್ಲದೆ ಸಾಧ್ಯವಾಗಲಾರದಲ್ಲವೆ ?

ಅಶೋ : — ಅಕಟಕಟಾ ಮಂತ್ರಿಯೆ ! ಇಂತಹ ದಿಗ್ವಿಜಯದಿಂದ ಫಲವೇನು ? ಮಕ್ಕಳನ್ನು ಕಳೆದುಕೊಂಡು ಎಷ್ಟೊಂದು ಮಂದಿ ಪರಿತಪಿಸುವರು ? ! ಎಷ್ಟೊಂದು ಮಂದಿ ಅಭಾಗಿನಿಯರು ಪತಿಗಳನ್ನಗಲಿ ನಿರಂತರ ದುಃಖಕ್ಕೆ ಗುರಿಯಾದರು ? ಮಾತಾಪಿತೃವಿಯೋಗದಿಂದ ಮತ್ತೆಷ್ಟು ಮಂದಿ ಮಕ್ಕಳು ಅನಾಥರಾಗಿರುವರೋ? ಅಯ್ಯೋ! ಅಯ್ಯೋ! ಈ ವಿಜಯವು

ನನ್ನ ಆತ್ಮಕ್ಕೆ ಎಂದಿಗಾದರೂ ಶಾಂತಿಯನ್ನು ಕೊಡುವುದೆ? ಜೀವಹಿಂಸೆಯಿಂದ ಸಂಪಾದಿಸಿದ ಚಕ್ರವರ್ತಿ ಪದವಿಯು ನಿಜವಾಗಿ ನನಗೆ ಸುಖವನ್ನುಂಟುಮಾಡುವುದೆ? ಮಕ್ಕಳಂತೆ ಆದರಿಸಬೇಕಾದ ಪ್ರಜೆಗಳನ್ನು ಗೋಳಾಡಿಸಿದ ನಾನು ಪಾಪಿಯಲ್ಲವೆ? ಹಾ! ಹಾ!

[ಎಂದು ಮೂರ್ಛಾಕ್ರಾಂತನಾಗುವನು]

ರಾಧಾ:—ಪ್ರಭು! ಸಂತೈಸಿಕೊಳ್ಳಬೇಕು. ಸಂತೈಸಿಕೊಳ್ಳಬೇಕು.

ಅಶೋ:—ಕಂ|| ಆಪನ್ನರ್ ಕಡುದುಗುಡದೆ |

ಶಾಪಂ ಗುಡದೆಂತು ಮಾಣ್ಬರಕಟಾ? ನನ್ನಂ |
ಏಪರಿ ಸೈರಿಸುವೆಂ! ಸಂ |
ತಾಪವನಿಂ ಬಾಳ್ವೆನೆಂತು ಪಾಪಿಯೆನಕಟಾ ||೫೩||

[ಆಕಾಶವನ್ನು ನೋಡಿ] ಧರ್ಮಬಂಧುಗಳೆ! ಭ್ರಾತೃಗಳೇ! ಮಿತ್ರರೆ! ನೀವೆಲ್ಲಿರುವಿರಿ? ಅಪರಾಧಿಯಾದ ನನ್ನನ್ನು ಕ್ಷಮಿಸುವಿರಾ! ಎಂದೂ ಕ್ಷಮಿಸಬೇಡಿರಿ! ಅಯ್ಯೊ ನಾನು ಯಾರಿಗೆ ಬಂಧು? ಪಾಪಕ್ಕೆ ಬಂಧುವಲ್ಲವೆ? [ನಿಟ್ಟುಸಿರು ಬಿಡುತ್ತ] ಭಗವತಿಯಾದ ಭೂದೇವಿ! ನಿರ್ಭಾಗ್ಯನಾದ ನನ್ನನ್ನು ಹೇಗೆ ಧರಿಸಿರುವೆ? ಅಯ್ಯೋ ದುರಾತ್ಮನಾದ ನನ್ನಿಂದ ಪವಿತ್ರವಾದ ಕಾಲವೂ ದುಷ್ಕಾಲವೆನಿಸಿತು. [ನಿಟ್ಟುಸಿರುಬಿಡುವನು].

ರಾಧಾ:—ಮಹಾಪ್ರಭು! ಪಶ್ಚಾತ್ತಾಪದಿಂದ ತಮ್ಮ ಹೃದಯವು ಪವಿತ್ರವಾಯಿತು!

ಅಶೋ:—ಅಕ್ಕಟಾ! ಸ್ವಾರ್ಥಪಿಶಾಚಗ್ರಸ್ತನಾದ ನಾನು ಭಗವಂತನಾದ ಬುದ್ಧದೇವನ ಉಪದೇಶವಾಣಿಯನ್ನು ಸ್ಮರಿಸಿಮೈತ್ರೀ ಧರ್ಮವನ್ನು ಪಾಲಿಸದೇ ಹೋದೆನಲ್ಲ! ಧರ್ಮದ್ರೋಹಿಯಾದೆನಲ್ಲಾ!

ಕಂ|| ಪೆರರಳಲೊಳ್ ಪರಿತಾಪವ |

ನುರೆತೋರ್ಪಾಶುದ್ಧ ಧರ್ಮವಂ ಬಗೆಯದೆ ನಾಂ |
ನರರಂ ಸಂಹರಿಸಿದೆನೇ |
ತೆರದೊಳ್ ಚಂಡಾಲನಾದೆನೇವೆಂ ಮಿತ್ರಾ ||೫೪||

ರಾಧಾ :—ಪ್ರಭು! ಈ ಪಶ್ಚಾತ್ತಾಪವೇ ನಿಮ್ಮನ್ನು ಉದ್ಧರಿಸಲು ಸಹಕಾರಿಯಾಗಿರುವುದು ; ತಾವು ಚಿಂತಿಸಬೇಕಾದುದಿಲ್ಲ.

ಅಶೊ :—ಅಮಾತ್ಯ ! ನಿಜ ! ನಿಜ ! ಈ ಶುಷ್ಕದುಃಖದಿಂದೇನು. ಪ್ರಯೋಜನ? [ನಿಟ್ಟುಸಿರುಬಿಡುತ್ತ] ಇದೊ ! ಶಸ್ತ್ರವನ್ನು ಬಿಸುಟೆನು ! ಇನ್ನೆಂದಿಗೂ ಯುದ್ಧವನ್ನು ಮಾಡೆನು. ಪ್ರೇಮದ ಜಯವೇ ಜಯವು ! ಇಂದಿನಿಂದ ಜಗತ್ತಿನ ಪ್ರೇಮವನ್ನು ಸಂಪಾದಿಸಲು ಪ್ರಯತ್ನಿಸುವೆನು.

ರಾಧಾ :—ಸಾರ್ವಭೌಮರ ಸಂಕಲ್ಪವೂ, ಪ್ರತಿಜ್ಞೆಯೂ, ಬಹು ಶ್ರೇಷ್ಠವಾದವು.

ಅಶೋ :—ಮಂತ್ರಿಯೆ ! ಕಳಿಂಗರಾಜ್ಯದ ಪ್ರಜೆಗಳನ್ನು ಪಾಲಿಸಲು ತಕ್ಕ ಅಧಿಕಾರಿಗಳನ್ನು ನಿಯಮಿಸಿ ಸುವ್ಯವಸ್ಥೆಯನ್ನು ಮಾಡು ; ನಾನಾದರೋ ನನ್ನನ್ನೀ ಪಾಪದಿಂದ ವಿಮುಕ್ತನನ್ನು ಮಾಡುವ ಮಹಾತ್ಮರಾರಾದರೂ ಇದ್ದರೆ ಅವರನ್ನು ಆಶ್ರಯಿಸಿ ಧನ್ಯನಾಗುವೆನು.

ರಾಧಾ :—ಸಾರ್ವಭೌಮರ ಇಷ್ಟವಿದ್ದಂತಾಗಲಿ ! [ಹೊರಟುಹೋಗುವನು]

[ಅಶೋಕನು ದುಃಖದಿಂದ ಒಂದು ಅರಣ್ಯವನ್ನು ಪ್ರವೇಶಿಸುವನು]

ಅಶೋಕ :—ಅಕಟಾ !

ಕಂ|| ಗುರುಬಂಧು ದ್ರೋಹಿಯ ಮೇಣ್ |
ನರಘಾತಕ ನಿರ್ದಯಾತ್ಮನಂ, ರಾಕ್ಷಸನಂ ||
ದುರಿತಕ್ಕೊಡನಾಡಿಯ ನೀ |
ತಿರೆಯೊಳ್ ನೆರೆಕರುಣದಿಂದೆ ಪೊರೆವದಾರರೋ ? ||೩೫||

[ಪ್ರತಿಧ್ವನಿಯಿಂದ || ಗುರುಬಂಧು ದ್ರೋಹಿಯ || ಇತ್ಯಾದಿ ಉದ್ಘೋಷಿತವಾಗುವುದು]

ಅಶೋ :—[ಕೇಳಿ ಆಹಾ ಇದಾರು ? ಹೀಗೆ ಪ್ರತ್ಯುತ್ತರವನ್ನು ಕೊಡುತ್ತಿರುವರು ? ಎಲೈ ವನದೇವತೆಗಳೇ ! ಪಂಚಭೂತಗಳೇ ! ನನ್ನನ್ನಾರೂ ಉದ್ಧರಿಸುವುದಿಲ್ಲವೆ ?

ತೆಕೆಯಲ್ಲಿ :—ಇಲ್ಲವೇ ? [ಪ್ರತಿಧ್ವನಿ]

ಅಶೋ :—ಉಂಟಾದರೆ ದಯೆಯಿಟ್ಟು ತೋರಿ ಸಹಾಯಮಾಡಿ !

ತೆರೆಯಲ್ಲಿ :—ಸಹಾಯಮಾಡಿ ! [ಪ್ರತಿಧ್ವನಿ]

ಅಶೋ :—ಆಹಾ! ಈ ನುಡಿಯಿಂದ ವನದೇವತೆಗಳು ನನ್ನಲ್ಲಿ ಅನುತಾಪವನ್ನು ವ್ಯಕ್ತಪಡಿಸುತ್ತಿರುವರು. ಅಯ್ಯೋ! ಯಾವ ಮಹಾತ್ಮರೂ ನನಗೆ ಲಭ್ಯವಾಗಲಿಲ್ಲವಲ್ಲ! ಎಲ್ಲಿಹೋಗಲಿ! [ಚಿಂತಿಸುತ್ತಾ] ಹಾ! ಬಾಲಭಿಕ್ಷು! ನ್ಯಗ್ರೋಧ! ನೀನಾದರೂ ಸಂದರ್ಶನವನ್ನು ಕೊಟ್ಟು ನನ್ನ ಹೃದಯದ ತಾಪವನ್ನು ಆರಿಸಲಾರೆಯಾ? ನನ್ನ ಪಾಪಕೃತ್ಯಗಳು ಭೀಷಣಾಕಾರದಿಂದ ನನ್ನಿದಿರಿಗೆ ಬಂದು ನನ್ನನ್ನು ಪೀಡಿಸುತ್ತಿವೆ! ಹಾ! ಗುರುವೆ! ಎಲ್ಲಿರುವೆ? [ಎಂದು ನೆಲಕ್ಕೆ ಬಿದ್ದು ಮೂರ್ಛಾಕ್ರಾಂತನಾಗುವನು]

ನ್ಯಗ್ರೋಧ :—[ಅಶೋಕನನ್ನು ನೋಡಿ] ಆಹಾ! ಇದೇನು? ಭರತಖಂಡದ ಸಾರ್ವಭೌಮನು ಇಂತಹ ಕ್ಲೇಶಕ್ಕೆ ಗುರಿಯಾಗಿರುವನು! [ಸಮೀಪಕ್ಕೆ ಹೋಗಿ] ಚಕ್ರವರ್ತಿಯೆ! ಏಳು ಏಳು! [ಎಬ್ಬಿಸುವನು]

ಅಶೋ :—[ಎದ್ದು ಕುಳಿತು] ಅಕ್ಕಟಾ! ಮಧುರವಾದ ಅಮೃತವಾಣಿಯಿಂದ ನನ್ನನ್ನು ಉಪಚರಿಸಿದವರಾರು? ಅಧಃಪತಿತನಾಗಿದ್ದವನನ್ನು ಮೇಲಕ್ಕೆತ್ತಿದವರಾರು? ಇದೇನು? ನಾನು ಸ್ವಪ್ನವನ್ನು ಅನುಭವಿಸುತ್ತಿರುವೆನೋ? ಈ ಚಂಡಾಲನಿಗೆ ಶುಭಸ್ವಪ್ನವೆಲ್ಲಿಬಂದೀತು? ದಾರುಣವಾದ ದುಷ್ಕೃತ್ಯಗಳು ಘೋರವಾಗಿ ನನ್ನನ್ನು ಹಿಂಸೆಗೊಳಿಸುವ ದುಸ್ಸ್ವಪ್ನಗಳನ್ನೇ ನಿತ್ಯವೂ ಕಾಣುವೆನು! ಇಂದಿನ ಸ್ಥಿತಿಯು ಪರಿವರ್ತನವಾದಂತಿರುವುದಲ್ಲ!

ನ್ಯಗ್ರೋಧ :—ಸಾರ್ವಭೌಮನೆ! ಇದು ಸ್ವಪ್ನವಲ್ಲ! ಏಳು ಏಳು!! ಏಕೆ ಹೀಗೆ ಉನ್ಮತ್ತನಾದಂತಿರುವೆ?

ಅಶೋ :—[ನೋಡಿ] ಹಾ! ನ್ಯಗ್ರೋಧಶ್ರವಣ! ನೀನೆಯೋ ನನ್ನ ದಗ್ಧಹೃದಯವನ್ನು ಅಮೃತಾಸಾರದಿಂದ ತಣ್ಪಿಸಿದವನು? ಮಹಾನುಭಾವ ನಿನ್ನ ಚರಣವನ್ನು ಆಶ್ರಯಿಸಿದೆನು. ಪತಿತನಾದ ನನ್ನನ್ನು ಉದ್ಧರಿಸು! ಪಾಪಿಯಾದ ನಾನು ಪುನೀತನಾಗುವ ಮಾರ್ಗವಾವುದಾದರೂ ಇದ್ದರೆ ಅನುಗ್ರಹಿಸು [ಎಂದು ಕಾಲನ್ನು ಹಿಡಿಯುವನು]

ನ್ಯಗ್ರೋಧ :—ಸಾರ್ವಭೌಮನೆ! ಚಿಂತಿಸಬೇಡ! ಬೌದ್ಧಧರ್ಮವು ಎಂತಹ ಪಾಪಿಗಳನ್ನೂ, ದುಃಖಿಗಳನ್ನೂ ಉದ್ಧರಿಸಬಲ್ಲುದು.

ಅಶೋ :—ಮಹಾಗುರುವೆ! ನನ್ನ ಪಾಪಕೃತ್ಯಗಳು ಸಾಮಾನ್ಯವಾದುವಲ್ಲ

ಕಂ|| ಕೊಂದೆಂ ಭ್ರಾತೃಗಳಂ ಮೇಣ್ |
ಕೊಂದೆಂ ನಾಂ ಬಂಧುವರ್ಗವಂ ಪ್ರಜೆಗಳುಮಂ ||
ತಂದೆಯೆ! ಎನ್ನೀ ದುಷ್ಕೃತ|
ವೃಂದಕವಿಂ ಧರೆಯೊಳುಂಟೆ ಪ್ರಾಯಶ್ಚಿತ್ತಂ ? ||೫೬||

ನ್ಯಗ್ರೋಧ :—ಮಹಾರಾಜ ! ಭಗವಂತನಾದ ಬುದ್ಧದೇವನು ಜನ್ಮಗ್ರಹಣಮಾಡಿದುದೇ ಪಾಪಲೇಪವನ್ನು ನಿರ್ಮೂಲಿಸುವುದಕ್ಕೆ ! ನೀನೀವ್ಯಸನವನ್ನು ಬಿಡು ! ಪಶ್ಚಾತ್ತಾಪದಿಂದ ನಿನ್ನ ಹೃದಯವು ಪ್ರಾಯಶ್ಚಿತ್ತವನ್ನು ಪಡೆದು ಪವಿತ್ರವಾಗಿರುವುದು. ನೀನು ಬೌದ್ಧಧರ್ಮದ* ಉಪಾಸಕನಾಗಿ ದೀಕ್ಷೆಯನ್ನವಲಂಬಿಸಿ ಸಂಘ ಸೇವೆಯಿಂದ ಕೃತಾರ್ಥನಾಗು.

ಅಶೋ :—ಮಹಾಗುರುವೆ ! ಅನುಗ್ರಹಿಸಲ್ಪಟ್ಟೆನು. ನೀನೇ ನನಗೆ ಧರ್ಮದೀಕ್ಷಾಚಾರ್ಯನಾಗಬೇಕೆಂದು ಪ್ರಾರ್ಥಿಸುವೆನು.

ನ್ಯಗ್ರೋ :—ಚಕ್ರೇಶ್ವರ! :— ಧರ್ಮಗುರುವಾದ ಉಪಗುಪ್ತಾಚಾರ್ಯರನ್ನು ಆಶ್ರಯಿಸಿ ಕೃತ ಕೃತ್ಯನಾಗು ! ಆತನು ಮಧುರಾಕ್ಷೇತ್ರದಲ್ಲಿ ವಾಸವಾಗಿರುವನು. ಸ್ಥವಿರ ಸನವಾಸನ ಶಿಷ್ಯನಾದ ಆತನ ಮಹಿಮೆಯನ್ನು ವರ್ಣಿಸಲಳವಲ್ಲ !

ಅಶೋ :—ಪೂಜ್ಯ ! ಆ ಮಹಾನುಭಾವನ ಪವಿತ್ರ ಮಹಿಮೆಯನ್ನು ಕೇಳಲಪೇಕ್ಷಿಸುವೆನು.

ನ್ಯಗ್ರೋ :—ಆ ಮಹಾನುಭಾವನು ಬಹು ಚಿಕ್ಕ ವಯಸ್ಸಿನಲ್ಲಿಯೇ ಧರ್ಮಶ್ರದ್ಧೆಯಿಂದ ಗುರುವಾದ ಸನವಾಸ ಮಹಾಮುನಿಯನ್ನು ಆಶ್ರಯಿಸಿ, ಆತನ ಅಪ್ಪಣೆಯಂತೆ ಮನದಲ್ಲಿ ಸದ್ಭಾವವೊದಗಿದಾಗ ಬಿಳಿಯ ಹರಳನ್ನೂ ದುರ್ಭಾವವೊದಗಿದಾಗ ಕರಿಯ ಹರಳನ್ನೂ ಬೇರೆ ಬೇರೆ ಪಾತ್ರೆಗಳಲ್ಲಿ ಹಾಕುತ್ತ, ಒಂದು ವಾರದೊಳಗಾಗಿ ಚಿತ್ತವು ಶುದ್ಧಿಗೊಂಡಿರುವುದನ್ನು ಬಿಳಿಯ ಹರಳಿನ ಪಾತ್ರೆಯಿಂದ ನಿಷ್ಕರ್ಷಿಸಿಕೊಂಡು, ಗುರ್ವನುಗ್ರಹಕ್ಕೆ ಪಾತ್ರನಾಗಿ ಧರ್ಮ ದೀಕ್ಷೆಯನ್ನು ಪಡೆದು ಸ್ವಲ್ಪ ದಿವಸಗಳಲ್ಲಿಯೇ † ಶ್ರೋತಾಪತ್ತಿ ಫಲವನ್ನು ಹೊಂದಿದನು.

---

* ಬೌದ್ಧ ಧರ್ಮಾವಲಂಬಿಯಾದ ಗೃಹಸ್ಥನು.

† ಯಾವ ಅವಸ್ಥೆಗೆ ಬಂದಲು ಮನುಷ್ಯನಿಗೆ ಏಳು ಜನ್ಮಗಳಾದ ಬಳಿಕ ನಿರ್ವಾಣವು ದೊರೆಯುವುದೋ ಆ ಅವಸ್ಥೆ.

ಅಶೋ :— ಆಹಾ! ಈ ಚಿತ್ತ ಶೋಧನ ಕ್ರಮವು ಅಮೋಘವಾದುದು.

ನ್ಯಗ್ರೋಧ:— ಒಂದುವೇಳೆ ಉಪಗುಪ್ತನ ತಾರುಣ್ಯ ಭರದ ಸೌಂದರ್ಯದಿಂದ ಮೋಹಿತಳಾದ ಒಬ್ಬ ವೇಶ್ಯೆಯು ಆತನ ಸಮಾಗಮವನ್ನು ಬಯಸಿದಳು; ಪರಿಶುದ್ಧಮಾನಸನಾದ ಆ ಮಹಾತ್ಮನು ಆಕೆಯನ್ನು ತಿರಸ್ಕರಿಸಿದನು; ಅದೇ ವೇಶ್ಯೆಯೇ ಮತ್ತೊಂದು ವೇಳೆ ಧನಾಶೆಯಿಂದ ತನ್ನ ಮನೆಗೆ ಬಂದ ವಿಟನೊಬ್ಬನನ್ನು ಕೊಂದ ತಪ್ಪಿಗೆ ಅವಳಿಗೆ ರಾಜನಿಂದ ನಾಸಾಕರ್ಣಚ್ಛೇದ ಶಿಕ್ಷೆಯು ವಿಧಿಸಲ್ಪಟ್ಟಿತು; ಆದರಂತೆ ಕಿವಿ ಮೂಗುಗಳನ್ನು ಕಳೆದುಕೊಂಡು ಅವಳು ಗೋಳಾಡುತ್ತಿದಾಗ ದಯಾಳುವಾದ ಉಪಗುಪ್ತಸ್ವಾಮಿಯು ಆಕೆಗೆ ಸದುಪದೇಶದಿಂದ ಜ್ಞಾನೋದಯವನ್ನುಂಟುಮಾಡಲು ಆಕೆಯು ಪರಿಶುದ್ಧಳಾಗಿ ಮುಕ್ತಿಮಾರ್ಗವನ್ನವಲಂಬಿಸಿದಳು.

ಅಶೋ :— ಆಹಾ! ಆ ಮಹಾನುಭಾವನು ಎಂತಹ ದಯಾಶಾಲಿಯು!

ಮಹಾರಾಜ:— ಆ ಧರ್ಮಗುರುವಾದ ಉಪಗುಪ್ತಾಚಾರ್ಯನನ್ನು ನಿನ್ನ ರಾಜಧಾನಿಗೆ ಕರೆತಂದು ಧರ್ಮ ರಹಸ್ಯವನ್ನು ತಿಳಿ! ಆತನ ಪರಮಾನುಗ್ರಹದಿಂದ ನಿನ್ನೀ ಕ್ಲೇಶವು ದೂರವಾಗುವುದು.

ಅಶೋ :— ಪೂಜ್ಯನ ಅಪ್ಪಣೆಯಂತೆ ನಾನೇ ಮಧುರೆಗೆ ಹೋಗಿ ಆ ಗುರುವರ್ಯನನ್ನು ಕರೆದುಕೊಂಡುಬಂದು ಸತ್ಸಮಾಗಮದ ಫಲವನ್ನು ಅನುಭವಿಸುವೆನು.

ನ್ಯಗ್ರೋ :— ಒಳ್ಳೆಯದು; ನಿನಗೆ ಮಂಗಳವಾಗಲಿ! ನಾನು ಹೊರಡುವೆನು. [ಹೊರಡುವನು]

ಅಶೋ :— ಆಹಾ! ಆ ಮಹಾಗುರುಚರಣವನ್ನು ಯಾವಾಗ ಕಾಣುವೆನೆಂಬ ಆತುರವು ನನಗೆ ಅತಿಶಯವಾಗಿರುವುದು. [ಹೊರಟುಬರುತ್ತಾ] ಇದೊ! ಪರಮಪವಿತ್ರವಾದ ಗಂಗಾನದಿ! ಇಲ್ಲಿ ನೌಕಾರೋಹಣವನ್ನು ಮಾಡಿ ಮಧುರೆಗೆ ಹೋಗುವೆನು.

ಕಂ॥ ಗಂಗೇ! ಭಕ್ತಿತರಂಗೇ!
ಮಂಗಳ ಕರಸಾಧು ಸಂಗವಿಭವೋತ್ತುಂಗೇ।
ಹಿಂಗದೆ ಗುರುಸೇವಾಸುಖ।
ಸಂಗವ ನೆನಗಿತ್ತುಸಲಹು ಮಣಿವೆಂ ತಾಯೇ ॥೫೭॥

[ತೆರೆಯಲ್ಲಿ] :— ಜಯ ಜಯ ಉಪಗುಪ್ತಾಚಾರ್ಯ!

ಅಶೋ :—[ಕೇಳಿ ಸಂಭ್ರಮದಿಂದ] ಆಹಾ! ಆ ಮಹಾತ್ಮರು ತಾವಾಗಿಯೇ ಇತ್ತಕಡೆ ದಯೆಮಾಡುವಂತಿದೆ.

ಕಂ|| ಎಳಸಿದ ಪರಮಾರ್ಥವಿದೀ |
ಗಳಿ ಸುಲಭದೆ ಕೈಗೆ ಬಂದುದೇಂ ಸುಕೃತಿಯೊನಾಂ |
ಇಳೆಯೊಳ್ ಭಗವದನುಗ್ರಹ |
ಮೊಳವಟ್ಟುದನಾಕುಳಂ ದಲೆನ್ನೊಳ್ ಬಗೆಯಲ್ ||೪೭||

[ಅನಂತರ ಉಪಗುಪ್ತನು ಶಿಷ್ಯನೊಡನೆ ನೌಕಾರೂಢನಾಗಿ ಪ್ರವೇಶಿಸುವನು]

ಅಶೋ :—ಮಹಾಗುರುವೆ! ನಿನ್ನ ದರ್ಶನದಿಂದ ಕೃತಾರ್ಥನಾದೆನು [ಎಂದು ಭಕ್ತಿಯಿಂದ ಉಪಗುಪ್ತನನ್ನು ನೌಕೆಯಿಂದ ಇಳಿಸಿಕೊಳ್ಳುವನು]

ಕಂ|| ಇದು ಭಕ್ತ ಕಲ್ಪಪಾದಪ |
ವಿದು ಸುಜ್ಞಾನ ಪ್ರದೀಪಮಪ ಗತಪಾಪಂ |
ಇದು ಧರ್ಮಕಲಾಪಂ ಮೇ |
ಣಿದು ನಿತ್ಯಾನಂದ ರೂಪಮಿದು ಗತತಾಪಂ ||೪೮||

ಗುರುಚರಣಾನುಗ್ರಹ ಕಾಂಕ್ಷಿಯಾದ ಅಶೋಕನು ನಮಸ್ಕರಿಸುವನು [ನಮಸ್ಕರಿಸುವನು]

ಉಪಗುಪ್ತ :—ವಿಜಯೀಭವ! ಅಶೋಕ ಸಾರ್ವಭೌಮ! ಧರ್ಮರಕ್ಷಣೆಗಾಗಿ ರಾಜಾಧಿರಾಜನಾದ ನಿನ್ನ ಸಹಾಯವನ್ನಪೇಕ್ಷಿಸಿ ಬಂದುದಾಯಿತು!

ಅಶೋ :—ಮಹಾತ್ಮರೆ! ಅನುಗೃಹೀತನಾದೆನು ; ಚರಣಸಂದರ್ಶನಾರ್ಥಿಯಾಗಿ ಈ ದಾಸನು ಹೊರಟಿದ್ದನು.

ಉಪಗುಪ್ತ :—ಮಹಾರಾಜನೆ! ಬುದ್ಧದೇವನು ನಿನಗೆ ಕಲ್ಯಾಣವನ್ನುಂಟು ಮಾಡುವನು ; ನಿನ್ನಿಂದಾಗಬೇಕಾದ ಕಾರ್ಯಗಳು ಅನೇಕವಾಗಿರುವುವು. ನಡೆ! ಹೋಗೋಣ!

ಅಶೋ :—ಪೂಜ್ಯರ ಆಜ್ಞೆಯಂತೆ ನಡೆಸಲು ಸಿದ್ಧನಾಗಿರುವೆನು. ಹೀಗೆ ದಯೆ ಮಾಡಬೇಕು. [ಕರೆದುಕೊಂಡು ಹೋಗುವನು]

[ಅನಂತರ ಡಂಗುರದವನು ಪ್ರವೇಶಿಸಿ]

ಡಂಗುರ:—ಅಯ್ಯಾ! ಇಲ್ಲಿಕೇಳಿರಿ! ಕಳಿಂಗ ವಿಜಯದಲ್ಲಾದ ಪ್ರಾಣಿ ಸಂಹಾರದಿಂದ ಮನಸ್ಸಂತಾಪವನ್ನು ಹೊಂದಿದ ನಮ್ಮ ಚಕ್ರವರ್ತಿಯು ಪರಿಶುದ್ಧವಾದ ಧರ್ಮದೀಕ್ಷೆಯನ್ನು ಅಂಗೀಕರಿಸಿ ರಾಜ್ಯದಲ್ಲೆಲ್ಲಾ ಮೈತ್ರೀಧರ್ಮವನ್ನು ಪಾಲಿಸಲು ಸಂಕಲ್ಪಿಸಿರುವನು; ಮತ್ತು ಗುರುಗಳ ಅನುಮತಿಯಂತೆ ಬುದ್ಧದೇವನ ಉಪದೇಶ ಸಂಖ್ಯಾನುಗುಣವಾಗಿ ಎಂಭತ್ತುನಾಲ್ಕು ಸಾವಿರ ವಿಹಾರಗಳನ್ನೂ, ಸ್ತೂಪಗಳನ್ನು ಕಟ್ಟಿಸಿ ಬುದ್ಧಸಂಘಕ್ಕೆ ಸಮರ್ಪಿಸಿರುವನು. ಅಲ್ಲಲ್ಲಿ ವಾಪೀ ಕೂಪ ತಟಾಕಾರಾಮಗಳನ್ನು ನಿರ್ಮಿಸಿ ಧರ್ಮಸೇವೆಯನ್ನು ಮಾಡುತ್ತಿರುವನು. ಈ ವಿಹಾರಗಳು ಪ್ರತಿಷ್ಠಿತವಾದ ಸಂತೋಷಕ್ಕಾಗಿ ತನ್ನ ರಾಜ್ಯದಲ್ಲೆಲ್ಲಾ ಮಹಾದೀಪಾವಲೀ ಮಹೋತ್ಸವವನ್ನು ವೈಭವದಿಂದ ನಡಿಯಿಸಬೇಕೆಂದು ಆಜ್ಞೆಮಾಡಿರುವನು; ಆದುದರಿಂದ ಎಲ್ಲರೂ ತಮ್ಮ ತಮ್ಮ ಮನೆಗಳನ್ನೂ, ಬೀದಿಗಳನ್ನೂ, ಚಪ್ಪರ ತೋರಣ ಬಾಳೆಗಂಬಗಳಿಂದಲೂ, ವಿವಿಧ ಪುಷ್ಪಗಳಿಂದಲೂ ಮನೋಜ್ಞವಾಗಿ ಅಲಂಕರಿಸಿ ಉತ್ಸವವನ್ನಾಚರಿಸಬೇಕು; ಸಾಧುಗಳಿಗೆ ದಾನಧರ್ಮಗಳನ್ನೂ ಯಥೇಷ್ಟವಾಗಿ ಮಾಡಿ ಕೃತಾರ್ಥರಾಗಬೇಕು. [ಎಂದು ಸಾರುತ್ತಾ ಹೋಗುವನು].

[ಅ ನ ೦ ತ ರ ಅಶೋಕಾರಾಮದಲ್ಲಿ ಬೋಧಿವೃಕ್ಷದಕೆಳಗೆ ಬುದ್ಧನ ವಿಗ್ರಹ; ದೀಪೋತ್ಸವ; ಸಪರಿವಾರನಾದ ಅಶೋಕನು ಭಿಕ್ಷುಗಳೊಡನೆ ಪ್ರವೇಶಿಸುವನು]

ಎಲ್ಲರೂ:—[ಸ್ತೋತ್ರಮಾಡುವರು]

ಕಂ|| ಜಯ ಜಯ! ಶಾಂತರ ಸಾರ್ಣವ!
ಜಯ ಜಯ! ಕಾರುಣ್ಯ ವಿಭವ ಜಯಜಯ! ದೇವಾ |
ಜಯ ಜಯ! ಶೋಷಿತ ದುರ್ಭವ |
ಜಯ ಜಯ! ವರಶಾಕ್ಯಸಿಂಹ ಹೃತಜಗದಂಹಾ ||೬೦||

ಉಪೇಂದ್ರವಜ್ರವೃತ್ತ || ನಮೋ ನಮೋ ನಿತ್ಯನಿರಂಜನಾಯ |
ನಮೋ ನಮ ಸ್ಸಾಧು ಶುಭಂಕರಾಯ ||
ನಮೋ ನಮ ಸ್ಸತ್ಯಸನಾತ ನಾಯ |
ನಮೋ ನಮಸ್ತೇ! ವಿಜಿತೇಂದ್ರಿಯಾಯ ||೬೧||

ವಸಂತತಿಲಕವೃತ್ತ || ಬುದ್ಧಾಯ, ಭಕ್ತ ಭವ ಬಂಧನಮೋಚನಾಯ |
ಸಿದ್ಧಾರ್ಥಕಾಯ ಗುರು ಪುಂಗವ ಗೌತಮಾಯ |
ಶುದ್ಧಾಯ ಚೈತ್ಯನಿಲಯಾಯ, ತಥಾಗತಾಯ |
ಬುದ್ಧಾಧರಾಯ ಸುಗತಾಯ ನಮೋ ನಮಸ್ತೇ ||೩೨||

ಉಪಗುಪ್ತ :—ಮಹಾರಾಜ ! ಧರ್ಮಸೇವೆಗೆ ಬದ್ಧದೀಕ್ಷನಾಗಿರುವುದರಿಂದ ನಿನಗೆ ಧರ್ಮಾಶೋಕನೆಂಬ ನಾಮವೂ, ಈ ಮಂಗಳೋತ್ಸವದಿಂದ ನೀನು ಲೋಕಕ್ಕೆ ಪ್ರಿಯದರ್ಶಿಯಾದುದರಿಂದ 'ಪ್ರಿಯದರ್ಶಿ'ಯೆಂಬ ಅನ್ವರ್ಥನಾಮವೂ, ಲೋಕದಲ್ಲಿ ವಿಖ್ಯಾತವಾಗಲಿ !

ಎಲ್ಲರೂ :—ತಥಾಸ್ತು !!!

ಅಶೋ :—[ಸಂತೋಷದಿಂದ]

ಕಂ|| ಪರಿಶುದ್ಧ ಧರ್ಮದೀಕ್ಷೆಯು |
ಧರಿಸುತೆ ನಾಂ ಧನ್ಯನಾದೆ ನಿನ್ನೀ ಮಹಿಯೊಳ್ |
ಪರಮ ತಥಾಗತ ಗುರುವರ |
ಚರಣಾನುಗ್ರಹದೆ ವೀತಕಲ್ಮಷನಾದೆಂ ||೩೩||

ಭಿಕ್ಷುಗಳು :—ಭಾರತ ಚಕ್ರಾಧೀಶ್ವರನಾದ ಅಶೋಕ ಸಾರ್ವಭೌಮನು ಬೌದ್ಧ ಧರ್ಮವನ್ನು ಗ್ರಹಿಸಿದುದರಿಂದ ಈ ಧರ್ಮಕ್ಕೆ ಅಮೂಲ್ಯವಾದ ಆಶ್ರಯವು ದೊರೆಯಿತು !

ಉಪಗುಪ್ತ :—ಪ್ರಿಯದರ್ಶಿ ಮಹಾರಾಜ ! ಬುದ್ಧದೇವನ ಅನುಗ್ರಹದಿಂದ ನಿನಗೆ ದಿವ್ಯ ದೃಷ್ಟಿಯು ಲಭಿಸುವುದು : ಭರತಖಂಡದ ಎಲ್ಲಾ ಭಾಗದಲ್ಲಿಯೂ ನೀನು ಪ್ರತಿಷ್ಠಿಸಿದ ಎಂಭತ್ತು ನಾಲ್ಕು ಸಾವಿರ ಆರಾಮಗಳಲ್ಲಿಯೂ, ದೀಪೋತ್ಸವವು ನಡೆಯುವುದನ್ನೂ, ಬುದ್ಧನ ದಿವ್ಯ ಮೂರ್ತಿಯನ್ನೂ ಕಣ್ಣಾರ ನೋಡಿ ಆನಂದಿಸು !

ಅಶೋ :—[ದಿವ್ಯ ದೃಷ್ಟಿಯನ್ನು ಅಭಿನಯಿಸಿ] ಆಹಾ ! ಮಹಾತ್ಮರ ಅನುಗ್ರಹವು ಅಮೋಘವು !

ಕಂ|| ಕಂಡೆಂ ಕಂಡೆಂ ಭಾರತ |
ಮಂಡಲದೊಳ್ ಮೆರೆವ ದಿವ್ಯ ದೀಪೋತ್ಸವಮಂ ||
ಕಂಡೆಂ ಕರುಣಾ ನಿಧಿಯಂ |
ಮುಂದಿತ ಸರ್ವಜ್ಞ ಮೂರ್ತಿಯಂ ತಣಿಯೆ ಮನಂ ||೩೪||

ಒಂದೇವೇಳೆ ಶಾಂತಿರಸ ಪ್ರವಾಹವು ಜಂಬೂದ್ವೀಪದಲ್ಲೆಲ್ಲಾ ಮೇರೆದಪ್ಪಿ ಪ್ರವಹಿಸುವುದನ್ನು ಕಣ್ಣಾರ ಕಂಡುದಾಯಿತು! [ಆನಂದದಿಂದ ಭಿಕ್ಷುಸಂಘವನ್ನು ಕುರಿತು] ಪೂಜ್ಯರೆ! ಬುದ್ಧದೇವನ ಪರಮ ಪ್ರೀತಿಗೆ ಯಾವ ಶ್ರೇಷ್ಠವಾದ ದಾನವು ಉಕ್ತವಾಗಿರುವುದೊ?

ಉಪಗುಪ್ತ :—ಮಹಾರಾಜ! ನಿನ್ನಂತಹ ದಾನಶೀಲರು ಬುದ್ಧದೇವನ ಕಾಲದಲ್ಲಿ ಹುಟ್ಟಿಯೇ ಇರಲಿಲ್ಲ; ಆದುದರಿಂದ ಅದನ್ನು ನಿಷ್ಕರ್ಷೆಯಾಗಿ ಹೇಳುವುದು ಸಾಧ್ಯವಲ್ಲ; ಆದರೂ ಸಂಘದ ಸೇವೆಗೆ ಮಕ್ಕಳನ್ನು ಸಮರ್ಪಿಸುವುದೇ ಶ್ರೇಷ್ಠವಾದ ದಾನವೆಂದು ದೊಡ್ಡವರು ಹೇಳುವರು.

ಅಶೋ :—[ಸಂತೋಷದಿಂದ] ಹಾಗೆಯೇ! ಎಲ್ಲಿ? ನನ್ನ ಮಕ್ಕಳಾದ ಮಹೇಂದ್ರನೂ, ಸಂಘಮಿತ್ರೆಯೂ.

ಮಕ್ಕಳಿಬ್ಬರೂ :—[ಎದ್ದು ನಿಂತು] ತಂದೆಯೇ! ಇದೋ ಇಲ್ಲಿಯೇ ಇರುವೆವು. [ಎಂದು ಸಮೀಪಿಸುವರು]

ಅಶೋ :—ಕಂ|| ಮಕ್ಕಳಿ! ನಿಮ್ಮಂ ನಲೆನಾ |
ನಕ್ಕರೆಯಿಂ ಸಂಘಸೇವೆಗರ್ಪಿಸೆ ನೀಗಳ್ ||
ತಕ್ಕುದು ದಾನಂ ಪರಮಾ |
ರ್ಥಕ್ಕನೆ ಗುರುವೃಂದಮಾಂತೆನವರಾಣತಿಯಂ ||೬೫||

ಮಕ್ಕಳಿಬ್ಬರೂ :—ತಂದೆಯೆ! ನಮ್ಮ ಜನ್ಮವು ಸಾರ್ಥಕವಾಯಿತು; ಸಂತೋಷದಿಂದ ನಮ್ಮನ್ನು ಸಂಘಕ್ಕೆ ಅರ್ಪಿಸಬಹುದು.

ಅಶೋ :—[ಆನಂದ ಬಾಷ್ಪಗಳನ್ನು ಸುರಿಸುತ್ತ]
ಕಂ|| ಇದು ಬುದ್ಧಾರ್ಪಿತಮಕ್ಕೆಮ |
ಇದು ಗುರುವರ ಪಾದಪಂಕಜಾರ್ಪಿತಮಕ್ಕೆ ||
ಇದು ಲೋಕಸೇವೆಗರ್ಪಿತ |
ಮಿದು ಸಾರ್ಥಕಮಕ್ಕೆ । ದಾನಮೆನತೀದಾನಂ ||೬೬||

[ಗದ್ಗದ ಕಂಠನಾಗಿ] ಗುರುವೃಂದವೆ! ಪುತ್ರರತ್ನಗಳನ್ನು ಧಾರೆಯೆರೆದಿರುವೆನು.

ಭಿಕ್ಷುಗಳು :—ಧನ್ಯ! ಧನ್ಯ! ಧರ್ಮಾಶೋಕ! ವಂಶೋದ್ಧಾರಕರಾದ ಮಕ್ಕಳನ್ನು ಸ್ವಾರ್ಥತ್ಯಾಗದಿಂದ ಹೀಗೆ ಸಮರ್ಪಿಸಿದ ನಿನ್ನ ಸಮರಾರು?

ತಿಷ್ಯ :—ಆರ್ಯನೆ! ನನಗೂ ಅನುಜ್ಞೆಯನ್ನು ಕೊಡು! ಭಿಕ್ಷುಧರ್ಮದಿಂದ ಲೋಕಸೇವೆಯನ್ನು ಮಾಡಿ ಕೃತಾರ್ಥನಾಗುವೆನು.

ಅಶೋ :—[ಸಂತೋಷಿಸಿ] ಯುವರಾಜನೆ! ನಿನ್ನ ಇಷ್ಟದಂತಾಗಲಿ

ಕಂ|| ಹರ್ಷಾಬ್ಧಿಯೊಳೀಸಿದೆನಾ |
ಕರ್ಷಿಸಿದೆಂ ಕರಮೆ ಸೊಗದ ಸಾಮ್ರಾಜ್ಯವ ನಾಂ |
ವರ್ಷಿಸಿತಮೃತಂ ಭಾರತ |
ವರ್ಷದೊಳೆಲ್ಲೆಡೆಯುಮೆನ್ನ ಪುಣ್ಯಮದೆಂತೋ ||೬೭||

[ಅನಂತರ ಎಲ್ಲರೂ ಹೋಗುವರು]

ಇದು ಚತುರ್ಥಾಂಕವು.

ಪಂಚಮಾಂಕಂ.

[ಅಶೋಕನು ಆಸ್ಥಾನದಲ್ಲಿ ಮಂತ್ರಿಗಳೊಡನೆ ಪ್ರವೇಶಿಸುವನು].

ಅಶೋಕ :—ಮಂತ್ರಿಯೆ! ಉಜ್ಜಯಿನಿ ತಕ್ಷಶಿಲೆ, ಸುವರ್ಣಗಿರಿ, ತೋಸಾಲಿ ಪ್ರಾಂತಗಳ ಪ್ರತಿನಿಧಿಗಳು ಸುಸೂತ್ರವಾಗಿ ಪ್ರಜಾರಕ್ಷಣೆಯನ್ನು ಮಾಡುತ್ತಿರುವರೆ? ಅಧಿಕಾರಿಗಳು ತಮ್ಮ ತಮ್ಮ ಸ್ವಾತಂತ್ರ್ಯಗಳನ್ನು ಸಂಯಾಗಿ ವಿನಿಯೋಗಿಸಿ ಧರ್ಮದಿಂದ ನಡೆದುಕೊಳ್ಳುತ್ತಿರುವರೆ? ಪ್ರಜೆಗಳು ಎಲ್ಲಾ ಭಾಗದಲ್ಲಿಯೂ ತಕ್ಕ ಅನುಕೂಲ್ಯಗಳನ್ನು ಪಡೆದು ಆನಂದಬಿಂದಿರುವರೆ? ವ್ಯವಸಾಯವ್ಯಾಪಾರಕುಶಲವೃತ್ತಿಗಳು ಅಭಿವೃದ್ಧಿಸ್ಥಿತಿಯಲ್ಲಿರುವುವೆ? ಪರದೇಶದವರಿಗೆ ಆತಿಥ್ಯವು ನಿರಾಕ್ಷೇಪವಾಗಿ ನಡೆಯುತ್ತಿರುವುದಷ್ಟೆ? ಚಿಕಿತ್ಸಾಲಯಗಳೂ, ವಿದ್ಯಾಶಾಲೆಗಳೂ ಸಮರ್ಪಕವಾಗಿ ತಮ್ಮ ಕೆಲಸಗಳನ್ನು ಮಾಡುತ್ತಿರುವುವೆ? ಔಷಧಕ್ಕೆ ತಕ್ಕ ಗಿಡಮೂಲಿಕೆಗಳು ಎಲ್ಲಾ ಸಮಯಗಳಿಗೂ ಅನುಕೂಲಿಸುವಂತೆ ಅಲ್ಲಲ್ಲಿ ಬೆಳೆಯಿಸಲ್ಪಟ್ಟಿರುವುವೆ? ಪ್ರಜೆಗಳು ಧರ್ಮಪರರಾಗಿ ಕಲ್ಯಾಣಪರಂಪರೆಯನ್ನು ಅನುಭವಿಸುತ್ತಿರುವರೆ?

ಮಂತ್ರಿ :—ಮಹಾಪ್ರಭು! ಸರ್ವಪ್ರಕಾರದಿಂದಲೂ, ಪ್ರಜೆಗಳ ಕಲ್ಯಾಣವನ್ನೇ ಬಯಸುತ್ತಿರುವ ತಮ್ಮ ರಾಜ್ಯಭಾರದಲ್ಲಿ ಧರ್ಮವೆಂಬುದು ನಿರಂತರವಾಗಿ ನೆಲಸಿರುವುದು. ರಾಜೂಕರೂ ಪ್ರಾದೇಶಿಕರೂ ಪ್ರಭುಗಳವರಿಂದ ಸಂಪೂರ್ಣಸ್ವಾತಂತ್ರ್ಯವನ್ನು ಪಡೆದು ಪ್ರಜಾರಕ್ಷಣತತ್ಪರರಾಗಿರುವರು. ಧರ್ಮಾನುಷ್ಠಾನತತ್ಪರರು ನಿರುಪಾಧಿಕವಾಗಿ ಧರ್ಮವ ಪ್ರಸರಂತೆ

ಯತ್ನಿಸುತ್ತಿರುವರು. ಯುದ್ಧವಿಭಾಗಪಟ್ಟವು ಸುನಿಯಂತ್ರಿತವಾಗಿ ದೇಶವನ್ನು ರಕ್ಷಿಸಲು ಸಿದ್ಧವಾಗಿರುವುದು. ವಾಣಿಜ್ಯಶಿಲ್ಪಗಳು ತಕ್ಕ ಪ್ರೋತ್ಸಾಹದಿಂದ ಅಭಿವೃದ್ಧಿಗೊಳ್ಳುತ್ತಿರುವುವು. ಪರದೇಶದವರ ಆತಿಥ್ಯದಲ್ಲಿಯೂ ಸತ್ಕಾರದಲ್ಲಿಯೂ ಯಾವ ಬಗೆಯ ಲೋಪವೂ ಇರುವುದಿಲ್ಲ. ಅಮ್ಯವಾದ ರಾಜಮಾರ್ಗಗಳೂ, ಅವುಗಳ ಪಕ್ಕಗಳಲ್ಲಿ ಅಲ್ಲಲ್ಲಿ ಕೆರೆಬಾವಿಗಳೂ, ಶೋಭಾಯಮಾನವಾಗಿರುವುವು. ವ್ಯವಸಾಯಾನುಕೂಲ್ಯಗಳು ಸರ್ವೋತ್ತಮವಾಗಿ ಸ್ವಾಮಿಯವರಿಂದ ಒದಗಿಸಲ್ಪಟ್ಟಿರುವಾಗ ಕೊರತೆಯೆಲ್ಲಿರುವುದು ? ತಮ್ಮ ಅಮೋಘವಾದ ಭೂತದಯೆಯ ಫಲವನ್ನು ಚಿಕಿತ್ಸಾಲಯಗಳಲ್ಲಿ ಸಮಸ್ತ ಪ್ರಾಣಿಗಳೂ ಸಮವಾಗಿ ಅನುಭವಿಸುತ್ತಿವೆ. ಪ್ರಜೆಗಳು ಬೆಳೆದ ಧಾನ್ಯದ ಆರರಲ್ಲೊಂದುಭಾಗವನ್ನು ತಪ್ಪದೆ ಕರವಾಗಿ ಸಮರ್ಪಿಸುತ್ತಿರುವರು; ಮತ್ತು ಸಮಯನಿರೀಕ್ಷಣೆಯಿಲ್ಲದೆ ತಮ್ಮ ಕುಂದುಕೊರತೆಗಳನ್ನು ನಿರ್ಭಯವಾಗಿ ನಿವೇದಿಸಲು ಸ್ವಾತಂತ್ರ್ಯವನ್ನು ಪಡೆದಿರುವರು. ಪ್ರತಿವೇದಕರು ಗುಪ್ತವಿಚಾರಗಳನ್ನು ಜಾಗರೂಕರಾಗಿ ಅರಿತು ಬಂದು ಬಿನ್ನವಿಸುತ್ತಿರುವರು. ವ್ಯಾಪಾರಿಗಳು ಧರ್ಮದಿಂದ ಕ್ರಯವಿಕ್ರಯಗಳನ್ನು ನಡೆಯಿಸುತ್ತಿರುವರು: ಪ್ರಜೆಗಳೆಲ್ಲರೂ ಪರಸ್ಪರ ಸಹೋದರಭಾವದಿಂದ ಸುಖವಾಗಿರುವರು ; ಪ್ರಭು ! ಭರತಖಂಡವು ಎಲ್ಲಾ ವಿಷಯದಲ್ಲಿಯೂ ಅಭ್ಯುದಯವನ್ನು ಹೊಂದಿರುವುದು.

ಅಶೋ :—ಮಂತ್ರಿಯೆ ! ಬಹು ಸಂತೋಷ ! ಪ್ರಜೆಗಳ ಆನಂದವೇ ನನ್ನ ಆನಂದವು !

ಮಂತ್ರಿ :—ಮಹಾಸ್ವಾಮಿಯವರ ಔದಾರ್ಯವನ್ನು ವರ್ಣಿಸಲಳವಲ್ಲ !

ಅಶೋ :—ಮಂತ್ರಿಯೆ! ಎಲ್ಲಾ ಕಡೆಯಲ್ಲಿಯೂ ಧರ್ಮಾಭಿವೃದ್ಧಿಯಾಗಿ ಆನಂದರಸ ಪ್ರವಾಹವು ಮೇರೆ ಮೀರಿ ಪ್ರವಹಿಸುತ್ತಿದ್ದರೂ ನನ್ನ ಸಹೋದರನಾದ ವೀತಶೋಕನ ನಡತೆಯು ನೇರ್ಪಡಲಿಲ್ಲವಲ್ಲಾ !

ಕಂ|| ತೆಗಳ್ವಂ ಧರ್ಮಮನಾಭಿ |
ಕ್ಷುಗಳಂ ದೂಷಿಪನನಾರತಂ ದುರ್ಮದದಿಂ |
ಬಗೆಯಂ ಗುರುಹಿರಿಯರನೀ |
ಯಗುಣನ ಬಗೆಧರ್ಮಮಾರ್ಗಕೆಂತೈದುವುದೋ ||೬೮||

ಮಂತ್ರಿ :— ತಾವು ಚಿಂತಿಸಬೇಕಾದುದಿಲ್ಲ ; ಯಾವುದಾದರೊಂದು ಯುಕ್ತಿಯನ್ನು ಮಾಡಿ ಆತನನ್ನು ಸನ್ಮಾರ್ಗಕ್ಕೆಳೆಯುವ ! ತಾವು ನನ್ನ ಅನುಸಂಧಾನಕ್ಕೆ ತಕ್ಕಂತೆ ಸಹಾಯಕರಾಗಿರಬೇಕು.

ಅಶೋ :— ಮಂತ್ರಿಯೆ ! ಹೇಗಾದರೂ ಆತನು ಸನ್ಮಾರ್ಗಯಾದರೆ ಸರಿ !

ಮಂತ್ರಿ : ಆಗಲಿ ! ಪ್ರಯತ್ನ ಮಾಡುವೆನು.

[ಎಂದು ಹೊರಟು ವೀತಶೋಕನ ಬಳಿಗೆ ಹೋಗಿ]

ಮಂತ್ರಿ :— ರಾಜಪುತ್ರ ! ಇದೇನನ್ಯಾಯವು ? ನಿನ್ನನ್ನು ನೋಡಿದರೆ ನನಗೆ ಮರುಕವುಂಟಾಗುವುದಲ್ಲ.

ವೀತ :— ಆರ್ಯರಾಧಾಗುಪ್ತ ! ಅದೇನು ಹೇಳು ! ನಿನಗೆ ನನ್ನಲ್ಲಿ ಸಂಪೂರ್ಣ ವಿಶ್ವಾಸವಿರುವುದೆಂದು ಬಲ್ಲೆನು !

ಮಂತ್ರಿ :— ನೀನು ನನ್ನ ವಿಷಯದಲ್ಲಿ ನಂಬಿಕೊಂಡಿರುವಂತೆ ನಿನ್ನನ್ನು ಸರಿಯಾದ ಸ್ಥಿತಿಗೆ ತಂದರಲ್ಲವೆ ನಾನು ಕೃತಕೃತ್ಯನು !

ವೀತ :— ಮಂತ್ರಿಯೆ ! ನನ್ನ ಸ್ಥಿತಿಯೇನಾಗಿರುವುದು ? ನೀನು ಯಾವ ವಿಷಯದಲ್ಲಿ ನನಗಾಗಿ ಚಿಂತಿಸುವೆ ?

ಮಂತ್ರಿ :— ರಾಜಪುತ್ರ ! ನಿಮ್ಮಣ್ಣನು ಅಟ್ಟಹಾಸದಿಂದ ಭಾರತಚಕ್ರವರ್ತಿಯೆನಿಕೊಂಡಿರುವುದೇನು ? ನೀನು ಉದರಪೂರಣಮಾತ್ರದಿಂದ ಸಂತೃಪ್ತನಾಗಿ ಅರಮನೆಯಲ್ಲಿರುವುದೇನು ? ಪ್ರಾಪ್ತವಯಸ್ಕನೂ ಗುಣಾಢ್ಯನೂ ಆದ ನಿನಗೆ ಉಚಿತವಾದ ಒಂದು ಅಧಿಕಾರವನ್ನಾದರೂ ಆತನು ವಹಿಸಿ ಗೌರವಿಸದಿರುವುದೂ, ಈಯಪಮಾನವನ್ನು ನೀನು ಸಹಿಸಿಕೊಂಡಿರುವುದೂ ಆಶ್ಚರ್ಯ !

ವೀತ :— ರಾಧಾಗುಪ್ತ ! ನನ್ನ ಮನಸ್ಸಿನಲ್ಲಿ ಉಂಟಾಗಿರುವ ಭಾವವೇ ನಿನ್ನಲ್ಲಿಯೂ ತಲೆದೋರಿರುವುದು ! ನಮ್ಮ ಅಣ್ಣನಾದರೋ ನನ್ನಲ್ಲಿ ಯಾವಾಗಲೂ ಅವಿಶ್ವಾಸವನ್ನೇ ತೋರ್ಪಡಿಸುತ್ತಿರುವನು !

ಮಂತ್ರಿ :— ಇರಲಿ ! ಆತನಾದರೂ ಸಾರ್ವಭೌಮಪದವನ್ನು ಹೇಗೆ ಪಡೆದನು ? ನಮ್ಮ ಸಹಾಯದಿಂದಲೇ- ಅಲ್ಲವೆ ? ಅಂತಹ ಮಂತ್ರಿಗಳನ್ನೇ ಆತನು ಗೌರವಿಸದಿದ್ದ ಮೇಲೆ ಆತನನ್ನು ಯಾರು ಪ್ರೀತಿಸುವರು ?

ವೀತ :— ಮಂತ್ರಿಗಳ [illegible] ದಿ !

ಕಂ|| ನಿಗ್ರಹಿಪೆಂ ದುರುಳನನಾ |
ಸಗ್ರಜನೆಂದೆಣಿಸಿ ಮಣಿಯೆನಿನ್ನಲೆ ಸಚಿವಾ ||
ನಿಗ್ರಹದೊಳ್ ಪ್ರತಿಭಟಿಸಿ ಕ |
ರಾಗ್ರದಖಡ್ಗಕ್ಕೆ ಬಲಿಯನೀವೆಂ ನಿನಗಂ ||೧೯||

ಮಂತ್ರಿ :—ಭಾಪು! ಭಾಪು! ಇಂತಹ ಶೌರ್ಯವು ನಿನ್ನಲ್ಲಿರುವಾಗ ಸುಮ್ಮನಿರಬಾರದು! ಬಾ! ರಾಜಚಿಹ್ನೆಗಳನ್ನು ಧರಿಸಿ ಸಿಂಹಾಸನವನ್ನು ಹತ್ತು. ನಿನಗೆ ನಾವೆಲ್ಲರೂ ಸಹಾಯಕರಾಗಿರುವೆವು.

ವೀತ :—ಮಂತ್ರಿಯೆ! ನಿನ್ನ ಉಪಕಾರಕ್ಕೆ ಬಹು ಕೃತಜ್ಞನಾಗಿರುವೆನು.

[ಎಂದು ಮಂತ್ರಿಯೊಡನೆ ಹೊರಡುವನು]

(ಅನಂತರ ರಾಜಚಿಹ್ನಾಂಕಿತನಾದ ವೀತಶೋಕನು ಸಿಂಹಾಸನದಲ್ಲಿ ಕುಳಿತಿರುವನು—ಮಂತ್ರಿಗಳು ಓಲೈಸುತ್ತಿರುವರು)

ಅಶೋಕ :—(ಖಡ್ಗಹಸ್ತನಾಗಿ ಕೋಪವನ್ನು ಅಭಿನಯಿಸುತ್ತ ಪ್ರವೇಶಿಸಿ)

ಕಂ|| ಎಲೆಲೋ ದುರ್ಮದ! ನಿನಗೀ |
ವಿಲಸಿತನೃಪಚಿಹ್ನಮೆಂತು ಸಲ್ಲುಗುಮೊ? ದುರುಳಾ |
ಕುಲಘಾತಕನೇ ನಿನ್ನು |
ಜ್ವಲಸಾಹಸವೆಂತುಟೀಗಳದನಾಂ ನೋಳ್ಪೆಂ ||೨೦||

[ಮಂತ್ರಿಗಳು ಭಯವನ್ನು ನಟಿಸುತ್ತ ಓಡುವರು]

ವೀತಶೋ :—[ಭಯದಿಂದ ನಡುಗುತ್ತ] ಮಂತ್ರಿಗಳೇ! ಮಂತ್ರಿಗಳೇ! (ಸುತ್ತಲೂ ನೋಡಿ] ಅಯ್ಯೋ! ಮುಂದೇನುಗತಿ? ಯಾರೂ ಇಲ್ಲವಲ್ಲ!

ಅಶೋ :—ಎಲೋ ದುಷ್ಟನೆ! ನೀನು ಸಾಮ್ರಾಜ್ಯಸುಖವನ್ನು ಇಂದಿನಿಂದ ಏಳುದಿನಗಳು ಅನುಭವಿಸುವುದಕ್ಕೆ ಅನುಮತಿಯನ್ನಿತ್ತಿರುವೆನು. ಅನಂತರ ನಿನ್ನ ಶಿರಸ್ಸು ಈ ಖಡ್ಗದಿಂದ ನೆಲಕ್ಕುರುಳುವುದು! ಅಷ್ಟರೊಳಗಾಗಿ ನಿನ್ನ ಬಯಕೆಯೇನಿರುವುದೋ ಅದೆಲ್ಲವನ್ನೂ ಪೂರೈಸಿಕೋ! ಮೂರ್ಖನೆ! [ಹೊರಡುವನು]

ವೀತಶೋ :—ಅಕಟಕಟಾ! ಮಂತ್ರಿಗಳ ಸಹಾಯವನ್ನು ನಂಬಿಕೊಂಡು ಚಕ್ರವರ್ತಿಯ ಕೋಪಕ್ಕೆ ಪಾತ್ರನಾದೆನಲ್ಲ! ಕ್ರೂರಪ್ರತಿಜ್ಞನಾದ ಅಣ್ಣನು ಇನ್ನು ಒಂದು ವಾರಕ್ಕೆ ಸರಿಯಾಗಿ ನನ್ನ ತಲೆಯನ್ನು ತೆಗೆದುಬಿಡುವನು!

ಅಯ್ಯೋ! ಏನುಮಾಡಲಿ? ಮೃತ್ಯುಮುಖದಲ್ಲಿರುವ ನನಗೆ ರಾಜ್ಯವೈಭವ ದಿಂದೇನು? [ಚಿಂತಿಸಿ] ನನ್ನನ್ನುದ್ಧರಿಸುವವರಾರು?

ಕಂ|| ನಶ್ವರಮೆನಿಸುವ ಸುಖದೊಳ್ |
ವಿಶ್ವಾಸಮನೊಂದೆ ಫಲಮದೇನೀಮಹಿಯೊಳ್
ಶಾಶ್ವತಮೆನಿಸುವ ಮೋಕ್ಷಮ |
ನೈಶ್ವರ್ಯಂಬಿಡಿವ ಪಥಮನರಿಯಲ್ವೇಳ್ಕುಂ ||೭೧||

ಇರಲಿ! ಯಾರಾದರೊಬ್ಬ ಮಹಾನೀಯರನ್ನು ಆಶ್ರಯಿಸಿ ಕೃತಾರ್ಥನಾಗುವೆನು

[ಎಂದು ಹೊರಡುವನು].

[ಅನಂತರ ಅಶೋಕನು ಮಂತ್ರಿಯೊಡನೆ ಪ್ರವೇಶಿಸಿ]

ಅಶೋ:— ಮಂತ್ರಿಯೆ! ವೀತಶೋಕನು ಈಗ ಹೇಗಿರುವನು?

ಮಂತ್ರಿ:—ಮಹಾಪ್ರಭು! ತಮ್ಮ ಕ್ರೂರವಾದ ಆಜ್ಞೆಯಿಂದ ಹೇಗೂ ತನಗೆ ಮರಣವೆಂದು ನಿಶ್ಚಯಿಸಿ ವೈರಾಗ್ಯದಿಂದ ಮಹಾತ್ಮರಾದ ಸ್ಥವಿರಯಶ ರನ್ನು ಆಶ್ರಯಿಸಿ ಧರ್ಮದೀಕ್ಷೆಯನ್ನು ಪಡೆದಿರುವನು.

ಅಶೋ:— ಭಾಪು! ಭಾಪು! ಸಚಿವಶಿರೋಮಣಿ! ನಿನ್ನ ಯುಕ್ತಿಗೆ ಸಂತೋ ಷಿಸಿದೆನು. ಬಾ! ಆತನ ಧರ್ಮಪರತೆಯನ್ನು ನೋಡಿ ಸಂತೋಷಿಸುವ!

[ಇಬ್ಬರೂ ವೀತಶೋಕನಿದ್ದೆಡೆಗೆ ಹೋಗುವರು]

[ವೀತಶೋಕನು ತನ್ನ ಗುರುಗಳ ಬಳಿಯಲ್ಲಿ ಭಕ್ತಿಯಿಂದ ಧರ್ಮವಿಚಾರವನ್ನು ಮಾಡುತ್ತಿರುವನು].

ಸ್ಥವಿರಯಶ:—ವತ್ಸ! ವೀತಶೋಕ! ಕೇಳು!

ಕಂ|| ಪರಿಶುದ್ಧಸಮಾಚರಣಂ |
ಪರತತ್ವಾಲೋಕಮಮಲ ಸತ್ಯಮತಂಮೇಣ್
ಪರತರಸೌಹಾರ್ದಂ ಸ
ದ್ಗುರುಪದಸದ್ಭಕ್ತಿ! ಧರ್ಮಲಕ್ಷಣಮಿವುಗಳ್ ||೭೨||

ವೀತಶೊ:—ಗುರುಗಳೆ! ಶಾಂತಿಯ ಮಹಿಮೆಯೆಂತಹುದು?

ಸ್ಥವಿರ:—ರಾಜಪುತ್ರ!

ವೃ|| ಶಾಂತಿಯನುಳ್ಳವಂ ಪರಮತತ್ವವನೆಲ್ಲೆಡೆಯಲ್ಲಿ ಕಾಣ್ಬನಾ |
ಶಾಂತಿಯುತಂ ನಿಜಾಗುರು ಪದಾಬ್ಜದ ನಲ್ಮೆಯನಾಂತಪಂವಲಂ |

ಶಾಂತಿಗುಣಾಢ್ಯನುತ್ತಮ ಪದಾರ್ಥ್ಯನನಿಷ್ಪನಮಂ ನಿರಂತರಂ ।
ಶಾಂತಿಯೆ ದೀಕ್ಷೆಯಾಪರಮ ಶಾಂತಿಯೆ ಭಿಕ್ಷೆ ನೃಪಾಲಪುಂಗವಾ ||೭೩||

ವೀತಶೋ|| ಆಹಾ! ಮಹಾಗುರುವುಹಿಮೆಯು ಅಸಾಧಾರಣವು!

ಕಂ|| ತೊಲಗಿಸಿ ದುಶ್ಚಿಂತೆಯನಿಂ ।
ದೊಲವಿಂ ಪರಮಾರ್ಥತತ್ವದಾಲೋಕನದಿಂ ।
ಸಲೆ ಸೊಗವೊಂದುವ ಸುಖಿನಿ ।
ರ್ಮಲಮಾರ್ಗಂದೋರಿ ಪೊರೆದಿರೀ ಪಾಮರನಂ ||೭೪||

ಸ್ಥವಿರ:—ವತ್ಸ! ನಿರ್ಮಲವಾದ ಜ್ಞಾನದಿಂದ ನಿನ್ನ ಚಿತ್ತವು ಪರಿಶುದ್ಧವಾಗಿರುವುದು.

ವೀತಶೋ:—ಗುರುಗಳೆ! ಚಕ್ರವರ್ತಿಯ ಆಜ್ಞೆಯ ಅವಧಿಯು ಇಂದಿಗೆ ಪೂರೈಸಿರುವುದು; ಮರಣದಿಂದ ನನಗೆ ಲೇಶವೂ ಭಯವಾಗದು; ಕೈವಲ್ಯಸುಖವನ್ನು ನಿರೀಕ್ಷಿಸುತ್ತಿರುವೆನು.

[ಮುಂದೆ ನೋಡಿ ಅದೊ ಚಕ್ರೇಶ್ವರನು ಇತ್ತಕಡೆಯೇ ಬರುತ್ತಿರುವನು.
ಈ ಸಮಯದಲ್ಲಿ ತಾವು ಇಲ್ಲಿರಬಾರದು.

ಸ್ಥವಿರ:—ವತ್ಸ! ವಿಷಾದವು ನಿನ್ನನ್ನು ಬಾಧಿಸುವುದಿಲ್ಲವಷ್ಟೆ? ಬುದ್ಧನು ನಿನ್ನನ್ನನುಗ್ರಹಿಸಲಿ! ನಾವು ಹೊರಡುವೆವು. [ಹೊರಟುಹೋಗುವನು].

[ಅಶೋಕನು ಮಂತ್ರಿಯೊಡನೆ ಪ್ರವೇಶಿಸಿ]..

ಅಶೋ:—ವೀತಶೋಕನು ಏನುಮಾಡುತ್ತಿರುವನು?

ವೀತಶೋ:—ಚಕ್ರವರ್ತಿಯ ಖಡ್ಗವನ್ನು ಸಂತೋಷದಿಂದ ಇದಿರುನೋಡುತ್ತಿರುವನು!

ಅಶೋ:—ದೊರೆತನದ ಸುಖವು ಸಾಕೆ?

ವೀತಶೋ:—ಚಕ್ರೇಶ್ವರನೆ! ನಿರಂತರ ದುಃಖಕಾರಣವಾದ ನಿನ್ನ ಪ್ರಭುತ್ವವು ನಿನಗೇ ಇರಲಿ!

ಅಶೋ:—ಸಹೋದರ! ನಿನಗೆ ಇಷ್ಟು ಬೇಗನೆ ವೈರಾಗ್ಯವು ಹೇಗೆ ಸಿದ್ಧಿಸಿತು.

ವೀತಶೋ:—ಪ್ರಿಯಭ್ರಾತೃವೆ! ಈ ವಿಷಯದಲ್ಲಿ ನೀನೇ ನನಗೆ ಪರಮ ಗುರುವಾಗಿರುವೆ! ತಾವಕಾಶವೇಕೆ? ಎಲ್ಲಿ! ನಿನ್ನ ಖಡ್ಗಕ್ಕೆ ಕೈಯನ್ನು ಹಾಕು!

ಅಶೋ :—[ತನ್ನಲ್ಲಿ] ಆಹಾ ! ಈತನ ಶಾಂತತೆಯು ಅಸಾಧಾರಣವಾದುದು. [ಪ್ರಕಾಶಂ] ಪ್ರಿಯಸಹೋದರ ! ಧರ್ಮವನ್ನು ಹಬ್ಬಿಸುವ ರಾಜದಂಡವು ತಲೆಗಡಿಯುವುದಕ್ಕೆ ಎಂದಿಗೂ ಸಲ್ಲುವುದಿಲ್ಲ ! ನನ್ನನ್ನು ಕ್ಷಮಿಸು !

ವೀತಶೋ :—ಪರಮಗುರುವೆ ! ನನ್ನನ್ನು ಸನ್ಮಾರ್ಗಕ್ಕೆ ತರಲು ಪ್ರಯೋಗಿಸಿದ ನಿನ್ನ ಚಾತುರ್ಯವನ್ನು ಅಭಿನಂದಿಸುವೆನು. ಭಿಕ್ಷುವ್ರತವನ್ನು ಅವಲಂಬಿಸಲು ನನಗೆ ದಯೆಯಿಟ್ಟು ಅನುಜ್ಞೆಯನ್ನು ಕೊಡು !

ಅಶೋ :—ವೀತಶೋಕ! ಕ್ಲೇಶಕಾರಿಯಾದ ಭಿಕ್ಷುಧರ್ಮವನ್ನವಲಂಬಿಸಲು ಸುಕುಮಾರನಾದ ನಿನಗೆ ಹೇಗೆ ಅನುಮತಿಯನ್ನು ಕೊಡಲಿ ?

ವೀತ :—ಅಣ್ಣ! ಉದರಭರಣದಿಂದ ಈ ಭಾರವಾದ ಒಡಲನ್ನು ಪೋಷಿಸುವುದಕ್ಕಿಂತ ಸಂಘಸೇವೆಯಿಂದ ಜೀವಿತವನ್ನು ಸಾರ್ಥಕಗೊಳಿಸುವುದು ಮೇಲಾದುದೆಂದು ತಿಳಿದಿರುವೆನು : ನನ್ನ ಅಭಿಮತವನ್ನು ಧರ್ಮಾತ್ಮನಾದ ನೀನು ಪೋಷಿಸಬೇಕು !

ಅಶೋ :—ಆಹಾ ! ಏನು ಮಾಡಲಿ ? [ಚಿಂತಿಸಿ] ಅನುಜ ! ಅರಮನೆಯಲ್ಲಿಯೇ ನಿನಗೊಂದು ಶಾಂತಿನಿಲಯವನ್ನು ಕಲ್ಪಿಸಿಕೊಡುವೆನು ; ನಿನ್ನಿಷ್ಟದಂತೆ ಭಿಕ್ಷುಧರ್ಮದಿಂದ ಅಲ್ಲಿ ವಾಸಮಾಡಿಕೊಂಡಿರಬಹುದು.

ವೀತ :—ಅಣ್ಣ! ಭಿಕ್ಷುಸಂಪ್ರದಾಯದ ನಿಯಮಗಳು ನನಗೆಂದಿಗೂ ಕಷ್ಟವಾಗವು. ನನ್ನ ಜೀವಮಾನವನ್ನು ಧರ್ಮಪ್ರಚಾರದಲ್ಲಿ ಕಳೆಯಬೇಕೆಂದು ಆಸಕ್ತಿಯಿರುವುದರಿಂದ ಮನಬಂದೆಡೆಯಲ್ಲಿ ಸಂಚರಿಸಿಕೊಂಡಿರಲು ನೀನು ಸ್ವಲ್ಪವೂ ಮರುಗಬಾರದು.

ಅಶೋ :—ಸಹೋದರ ! ನಿನ್ನ ಧರ್ಮವನ್ನು ನಿರೋಧಿಸಲಾರೆನು , ನಿನ್ನ ಇಷ್ಟದಂತೆ ಆಚರಿಸು : ಬಾ ! ಈ ಒಂದು ದಿನವಾದರೂ ಸಹೋದರಪ್ರೇಮದಿಂದ ಒಡನಿದ್ದು ಆನಂದಿಸುವ !

ವೀತಶೋ :—ಅಣ್ಣನ ಇಷ್ಟವಿದ್ದಂತಾಗಲಿ [ಇಬ್ಬರೂ ಹೊರಟರು]

[ಅನಂತರ ಅಶೋಕನು ಆಸ್ಥಾನದಲ್ಲಿ ಪ್ರವೇಶಿಸುವನು].

ಪ್ರತೀಹಾರ :—[ಪ್ರವೇಶಿಸಿ] ಸಾರ್ವಭೌಮನು ವಿಜಯಿಸಲಿ ! ಪೌಂಡ್ರವರ್ಧನ ಚೈತ್ಯಾಲಯದ ಧರ್ಮದರ್ಶಿಯು ಸಮಯವನ್ನು ನಿರೀಕ್ಷಿಸುತ್ತಿರುವನು.

ಅಶೋ :—ಅವರನ್ನು ಕರೆದುಕೊಂಡು ಬಾ !

ಪ್ರತೀ :—ಅಪ್ಪಣೆ [ಎಂದು ಹೋಗಿ ಕರೆದುಕೊಂಡು ಬರುವನು]
ಧರ್ಮದರ್ಶಿ :—ಮಹಾಪ್ರಭು ವಿಜಯಿಸಲಿ !
ಅಶೋ :—ಪೂಜ್ಯರೆ ! ನಮಸ್ಕರಿಸುವೆನು ; ತಾವು ಬಹು ಕಳವಳಗೊಂಡಿರುವಂತೆ ತೋರುವುದಲ್ಲ !
ಧರ್ಮ :—ಧರ್ಮಾತ್ಮನಾದ ಪ್ರಭುವೆ ! ಏನು ಹೇಳಲಿ ? ನಮ್ಮ ಚೈತ್ಯಾಲಯದ ಬುದ್ಧದೇವನ ವಿಗ್ರಹವನ್ನು ನಿಗ್ರಂಥಿಯೊಬ್ಬನು ಒಡೆದುಹಾಕಿ ಓಡಿಹೋಗಿರುವನು !
ಅಶೋ :—[ಕೋಪದಿಂದ]

ಕಂ|| ಅವನಾವಂ ಪೂಜಾರ್ಹಮೆನಿ |
ಪ್ಪವಸ್ತುವಂ ಮುರಿದು ಮನಕೆದುಗುಡವೆಸಗಿದಂ ||
ಅವನಿಯೊಳೆಲ್ಲಿರ್ದೊಡಮಾ |
ಅವಿನೀತನಕೊಂದು ಶಿರವನಾಂ ತರಿಸದಿರೆಂ ||೭೪||

ಮಂತ್ರಿಯೆ ! ಆ ನೀಚನ ಶಿರಸ್ಸನ್ನು ತಂದೊಪ್ಪಿಸಿದವರಿಗೆ ಲಕ್ಷ ವರಹಗಳ ಬಹುಮಾನವನ್ನು ಕೊಡುವೆನೆಂದು ಪ್ರಸಿದ್ಧಿಪಡಿಸು !
ಮಂತ್ರಿ :—ಮಹಾಪ್ರಭು ! ಚೆನ್ನಾಗಿ ಆಲೋಚಿಸಿ ಆಜ್ಞಾಪಿಸೋಣವಾಗಲಿ !
ಅಶೋ :—ಮಂತ್ರಿಯೆ ! ಇನ್ನಾವ ಅಪಕಾರವನ್ನು ಮಾಡಿದ್ದರೂ ಕ್ಷಮಿಸುತ್ತಿದ್ದೆನು ! ಭಗವಂತನ ವಿಗ್ರಹವನ್ನು ಒಡೆದು ಧರ್ಮಕ್ಕೆ ಅಪಮಾನವನ್ನು ಮಾಡಿದ ಆ ನೀಚನನ್ನು ಕ್ಷಮಿಸಲಾರೆನು. ನನ್ನ ಆಜ್ಞೆಯನ್ನು ಲೇಶವೂ ವಿಲಂಬಿಸದೆ ನೆರವೇರಿಸು.
ಮಂತ್ರಿ :—ಅಪ್ಪಣೆಯಂತೆ [ಎಂದು ಹೊರಡುವರು].

[ಅನಂತರ ಭಿಕ್ಷುವಾದ ವೀತಶೋಕನು ಪ್ರವೇಶಿಸಿ].

ವೀತ :—ನಮೋ ಬುದ್ಧಾಯ ! ನಮೋ ಬುದ್ಧಾಯ ! ಆಃ ! ಆನಂದವು ಅನುಭವವೇದ್ಯವಾದುದು.

ಕಂ|| ಆನಂದಂ ಜ್ಞಾನವಶಂ |
ಜ್ಞಾನಂ ತಾಂ ಬ್ರಹ್ಮಚರ್ಯಮೂಲಂ ಲೋಕ |
ಕ್ಕೀನಿರುಪಮ ಭಾಗ್ಯವನಿ |
ತ್ತ್ಯಾ ನಿರ್ಮಲಮೂರ್ತಿ ಬುದ್ಧಸಂಘಗೆ ಮಣಿವೆಂ ||೭೫||

ಸೂರ್ಯದೇವನು ಅಸ್ತಾಂಬುಧಿಗಿಳಿಯುತ್ತಿರುವನು ! ಸಮೀಪದಲ್ಲಿ ಕಾಣುವ ಹಳ್ಳಿಯಲ್ಲಿ ಈ ರಾತ್ರಿಯನ್ನು ಕಳೆದು ನಾಳೆಯ ಪ್ರಾತಃಕಾಲದಲ್ಲಿ ಮುಂದಕ್ಕೆ ಹೊರಡುವೆನು. [ಹೊರಡುವನು].

[ಅನಂತರ ಒಬ್ಬ ಗೌಳಿಗನು ತನ್ನ ಮನೆಯಲ್ಲಿ ಹೆಂಡತಿಯೊಡನೆ ಪ್ರವೇಶಿಸಿ]

ಗೌಳಿಗ:—ಎಲೇ ! ಏನುಮಾಡಿದರೂ ನಮ್ಮ ಬಡತನವು ಹಿಂಗದಲ್ಲ !

ಹೆಂಡತಿ:—ಅಯ್ಯೋ ! ಬಡತನವು ಹೇಗೆ ಹಿಂಗುವುದು ? ಹುಲಿಗಳ ಹಾಗೆ ಇಷ್ಟೊಂದು ಮಂದಿ ಮಕ್ಕಳು ! ಉಣ್ಣಬೇಡವೆ ? ಉಡಬೇಡವೆ ?

ಗೌಳಿಗ:—ಹಾಳುಮಕ್ಕಳು ! ಸುಮ್ಮನೆ ಹಿಂದೆ ಮುಂದೆ ಕಿತ್ತುಕೊಂಡು ತಿನ್ನುತ್ತವೆ. ನಮ್ಮ ಪಾಪಕರ್ಮದ ಫಲವೇ ಹೀಗೆ ಪೀಡಿಸುವುದು ! ಮಕ್ಕಳಿಲ್ಲದೆ "ಗೋಳೋ" ಎಂದಳುವ ಪುಣ್ಯಾತ್ಮರಿಗೆ ಕೊಡಬಾರದೆ.

ಹೆಂಡತಿ:—ಸುಮ್ಮನೆ ಮಕ್ಕಳನ್ನು ನೋಡಿ ಏಕೆ ಬೇಸರಪಡುವಿರಿ ? ಯಾರ ಯಾರ ಅದೃಷ್ಟವು ಹೇಗಿರುವುದೋ ? .

ಗೌಳಿಗ:—ಅದೃಷ್ಟಫಲವನ್ನು ಕಂಡಹಾಗೆಯೇ ಇರುವುದು ! ನಾವೆಷ್ಟು ಕಷ್ಟಪಟ್ಟರೂ ಆ ದಿನದ ವೆಚ್ಚಕ್ಕೆ ಸಿಕ್ಕುವುದೇ ಕಷ್ಟ ! ಒಪ್ಪವಾಗಿ ಒಂದು ಮನೆ ಬಾಗಿಲು, ಹೊಲಗದ್ದೆ, ಮಾಡಿಕೊಂಡು ಸುಖವಾಗಿರುವುದೆಂದೋ ?

ಹೆಂಡತಿ;—ಪುಣ್ಯವಂತರ ಹಾಗೆ ಹಬ್ಬಹಾಡಿಯಗಳಲ್ಲಿ ಒಡವೆವಸ್ತುಸೀರೆಗುಪ್ಪಸಗಳಿಂದ ನಾವು ಸಂತೋಷಪಡುವೆವೆ ? [ತೆರೆಯಲ್ಲಿ].

ಅಯ್ಯಾ, ಪಾಂಡ್ರವರ್ಧನವೆಂಬ ಗ್ರಾಮದಲ್ಲಿ ಮಾತ್ಸರ್ಯವುಳ್ಳ ಒಬ್ಬ ಸನ್ಯಾಸಿಯು ಬುದ್ಧದೇವನ ವಿಗ್ರಹವನ್ನು ಒಡೆದು ಎಲ್ಲಿಗೋ ತಪ್ಪಿಸಿಕೊಂಡು ಓಡಿಹೋಗಿರುವನು. ಅವನನ್ನು ಹಿಡಿದು ಕೊಂದು ತಲೆಯನ್ನು ತಂದೊಪ್ಪಿಸಿದವರಿಗೆ ನಮ್ಮ ಚಕ್ರವರ್ತಿಯು ಒಂದುಲಕ್ಷ ವರಹಗಳನ್ನು ಬಹುಮಾನವಾಗಿ ಕೊಡುವನು ; ಇಷ್ಟವುಳ್ಳವರು ಪ್ರಯತ್ನಿಸಬಹುದು.

ಗೌಳಿಗ:—[ಕೇಳಿ] ಎಲೆ ಕೇಳಿದೆಯೇನೆ ? ಇದು ಒಳ್ಳೆಯ ಸಮಯ ! ಪ್ರಯತ್ನಿಸಿ ನೋಡುವೆನು. ನಮ್ಮ ಅದೃಷ್ಟವು ಹೇಗಿರುವುದೋ !

ಹೆಂಡತಿ:—ಒಳ್ಳೆಯದು ಹೋಗಿಬನ್ನಿರಿ !

ಗೌಳಿಗ:—[ಹೊರಟು ಮುಂದೆ ನೋಡಿ ಹೆಂಡತಿಯೊಡನೆ ಮೆಲ್ಲಗೆ]

ಎಲೇ! ಇದೊ ನೋಡು ಯಾರೋ ಇತ್ತಲಾಗಿಯೇ ಬರುತ್ತಿರುವಂತಿದೆ; ಆ ಸನ್ಯಾಸಿಯೆ ಇರಬಹುದೆ?

[ಅಷ್ಟರಲ್ಲಿ ವೀತಶೋಕನು ಪ್ರವೇಶಿಸಿ]

ವೀತ:—ಅಯ್ಯಾ! ಗೃಹಸ್ಥನೆ! ಸ್ವಲ್ಪ ಸ್ಥಳಕೊಡುವೆಯಾ? ಈ ರಾತ್ರಿ ಇಲ್ಲಿದ್ದು ನಾಳೆ ಮುಂದೆ ಪ್ರಯಾಣಮಾಡುವೆವು.

ಗೌಳಿಗ:—ದಯೆಮಾಡಿ ಸ್ವಾಮಿ! ತಮ್ಮ ಮನೆ! ತಮ್ಮ ಬಾಗಿಲು! ನನ್ನ ಗುರುವೆ! ನನ್ನ ದೇವರೆ! ನನ್ನ ಮನೆ ಪವಿತ್ರವಾಯಿತು; ನನ್ನ ದಾರಿದ್ರ್ಯವು ಹರಿಯಿತು; ಈ ಮಣೆಯ ಮೇಲೆ ಕುಳಿತುಕೊಳ್ಳಬೇಕು ಸ್ವಾಮಿ.

ವೀತ:—[ಕುಳಿತುಕೊಳ್ಳುವನು].

ಗೌಳಿಗ:—ಎಲೇ ಈ ಮಹಾನುಭಾವರು ತಾವಾಗಿಯೇ ದಯೆಮಾಡಿಸಿದರು! ಇವರ ಕಾಲುತೊಳೆದು ಪೂಜೆಮಾಡು!

ಹೆಂಡತಿ:—[ಪೂಜಿಸಿ ನಮಸ್ಕರಿಸಿ] ಮಹಾಸ್ವಾಮಿ! ನಮ್ಮನ್ನುದ್ಧಾರಮಾಡು! ನಮ್ಮ ಬಡತನವನ್ನು ದೂರಮಾಡು! ನಮ್ಮ ಮಕ್ಕಳುಮರಿಗಳನ್ನು ಕಾಪಾಡು! [ಇಬ್ಬರೂ ನಮಸ್ಕರಿಸುವರು].

ವೀತ:—ಬುದ್ಧದೇವನ ಅನುಗ್ರಹವು ನಿಮಗೆ ಲಭಿಸಲಿ!

ಗೌಳಿಗ:—ಸ್ವಾಮಿ! ತಮ್ಮ ಸ್ಥಳವು ಯಾವುದು?

ವೀತಶೋ:—ಭಿಕ್ಷುಗಳಾದ ನಮಗೆ ಒಂದು ಸ್ಥಳವೇ? ಸಿಕ್ಕಿದೆಡೆಯಲ್ಲಿ ಸಂಚರಿಸುತ್ತ ದಿನಗಳನ್ನು ನೂಕುವೆವು.

ಗೌಳಗ:—ಸ್ವಾಮಿ! ತಮಗೇನು ಬೇಕು? ಸ್ವಲ್ಪ ಹಾಲುಹಣ್ಣುಗಳನ್ನು ತಂದುಕೊಡಲೆ!

ವೀತಶೋ:—ಅಯ್ಯಾ! ಏನೂ ಬೇಡ. ನಿನ್ನ ಉಪಚಾರದಿಂದಲೇ ಸಂತೋಷವಾಯಿತು: ಮಲಗುವುದಕ್ಕೆ ಸ್ವಲ್ಪ ಸ್ಥಳವಾದರೆ ಸಾಕು.

ಗೌಳಿಗ:—ಸ್ವಾಮಿ! ಈ ಕೋಣೆಯಲ್ಲಿ ಬಿತ್ತದ ಚಾಪೆಯನ್ನು ಹಾಸಿರುವೆನು; ಸ್ಥಳವು ಪರಿಶುದ್ಧವಾಗಿರುವುದು: ತಾವು ವಿಶ್ರಮಿಸಿಕೊಳ್ಳಬಹುದು.

ವೀತ:—ಅಯ್ಯಾ! ಬಹು ಸಂತೋಷ! [ಎಂದು ಹೋಗಿ ಮಲಗುವನು].

ಗೌಳಗ:—[ಹೊರಕ್ಕೆ ಬಂದು ಹೆಂಡತಿಯೊಡನೆ ಮೆಲ್ಲಗೆ]

ಎಲೇ! ನೀನು ಜಾಗರೂಕಳಾಗಿ ಸನ್ಯಾಸಿಗೆ ಚೆನ್ನಾಗಿ ನಿದ್ದೆ ಹತ್ತಿರುವುದನ್ನು ನೋಡಿ ಬಂದು ನನಗೆ ತಿಳಿಸು! ನಾನು ಆಯುಧವನ್ನು ಮಸೆದು ಸಿದ್ಧವಾಗಿರುವೆನು!

ಹೆಂಡತಿ:— ಹಾಗೆಯೇ ಆಗಲಿ! [ಎಂದು ನೋಡಿ ಬಂದು ಮೆಲ್ಲಗೆ] ಸನ್ಯಾಸಿಗೆ ನಿದ್ದೆ ಬಲವಾಗಿ ಹತ್ತಿರುವುದು.

ಗೊಳಿಗ:—[ಮೆಲ್ಲಗೆ] ತಾಳು ತಾಳು! ಬಂದೆ ಬಂದೆ! [ಎಂದು ಆಯುಧಪಾಣಿಯಾಗಿ ಒಳಕ್ಕೆ ಪ್ರವೇಶಿಸಿ] ಸ್ವಾಮಿ! ಚೆನ್ನಾಗಿ ನಿದ್ದೆ ಹೋಗು; ದೀರ್ಘನಿದ್ರೆಹೋಗು. [ಎಂದು ಕತ್ತಿಯಿಂದ ಶಿರವನ್ನು ಖಂಡಿಸುವನು].

ಹೆಂಡತಿ:—ಅಯ್ಯೋ! ಪಾಪ! ಈತನು ಅಪುದೋ ಅಲ್ಲವೊ?

ಗೊಳಿಗ:—ನಾನೀತಲೆಯನ್ನು ಬೆಳಿಗ್ಗೆ ರಾಜನಿಗೆ ತೋರಿಸಿ ಬಹುಮಾನವನ್ನು ಪಡೆಯುವೆನು [ಎಂದು ಹೋಗುವನು].

[ಅನಂತರ ಅಶೋಕನು ಆ ಸ್ಥಾನದಲ್ಲಿ ಪ್ರವೇಶಿಸುವನು].

ಪ್ರತೀಹಾರ:—[ಪ್ರವೇಶಿಸಿ] ಸಾರ್ವಭೌಮನು ವಿಜಯಿಸಲಿ! ಸ್ವಾಮಿಯವರಿಂದ ಬಹುಮಾನವನ್ನು ಪಡೆಯಲು ಗೊಳಿಗನೊಬ್ಬನು ಸಮಯವನ್ನು ನಿರೀಕ್ಷಿಸುತ್ತಿರುವನು.

ಅಶೋ:—ಅವನನ್ನು ಒಳಕ್ಕೆ ಬಿಡು!

ಪ್ರತೀಹಾರ:—[ಕರೆದುಕೊಂಡು ಬರುವನು].

ಗೊಳಿಗ:—ಮಹಾಪ್ರಭು ಪಾದಗಳಲ್ಲಿ ವಂದನೆಗಳು! ಬುದ್ಧದೇವನ ವಿಗ್ರಹವನ್ನು ಒಡೆದ ಪಾಪಿಯನ್ನು ಸಂಹರಿಸಿದೆನು; ಇದೋ ಶಿರಸ್ಸು! [ಎಂದು ಮುಂದಿಟ್ಟು] ಮಹಾಸ್ವಾಮಿ! ಬಹುಮಾನವನ್ನು ಕೊಡಿಸಬೇಕು. ತಮ್ಮ ಪ್ರೀತಿಯನ್ನು ಸಂಪಾದಿಸಲು ಬಹು ಕಷ್ಟಪಟ್ಟು ತಮ್ಮ ಆಜ್ಞೆಯನ್ನು ನೆರವೇರಿಸಿರುವೆನು.

ಅಶೋ:—[ಶಿರಸ್ಸನ್ನು ನೋಡಿ ಗಾಬರಿಯಿಂದ] ಅಯ್ಯೋ! ಕೆಟ್ಟೆನು! ಕೆಟ್ಟೆನು! ಅಕಟಕಟಾ! ನನ್ನ ಸಹೋದರನಾದ ವೀತಶೋಕನ ಶಿರಸ್ಸು! ಹಾ! [ಎಂದು ನೆಲಕ್ಕೆ ಬೀಳುವನು].

ಮಂತ್ರಿ:—[ಗಾಬರಿಯಿಂದ ನೋಡಿ] ಅಯ್ಯೋ! ಪ್ರಮಾದ! ಪ್ರಮಾದ! ಇದು ವೀತಶೋಕನ ಶಿರಸ್ಸೇ ಸರಿ! ಎಲೋ ಪಾಪಿಯೆ! ಈ ಸನ್ಯಾಸಿಯನ್ನೇಕೆ ಕೊಂದೆ?

ಗಳಿಗ :—[ಗಡಗಡನೆ ನಡುಗುತ್ತ] ಸ್ವಾಮಿ ಕಾಪಾಡಬೇಕು ! ಕಾಪಾಡಬೇಕು ! [ಎಂದು ಪಾದದಲ್ಲಿ ಬೀಳುವನು].

ಅಶೋ :—[ದುಃಖದಿಂದ ಕಣ್ಣೀರನ್ನು ಸುರಿಸುತ್ತ] ಮಂತ್ರಿಯೆ! ಇವನನ್ನು ಕಳುಹಿಸಿಬಿಡು ! [ಮಂತ್ರಿಯ ಸನ್ನೆಯಿಂದ ಗಳಿಗನು ಹೊರಟುಹೋಗುವನು].

ಅಶೋ: —[ತಲೆಯನ್ನು ಅಪ್ಪಿಕೊಂಡು]

ಕಂ: ಹಾ ಹಾ ! ಮತ್ಪ್ರಿಯಸೋದರ !
ಹಾ ಹಾ ! ವೈರಾಗ್ಯಸಾರ! ಸದ್ಗುಣ ಹಾರಾ ! |
ಹಾ ಹಾ ! ನೀತಿವಿಚಾರಾ !
ಹಾ ಹಾ ! ನನ್ನಾಜ್ಞೆ ನಿನ್ನನಳಿದುದೆ ? ಅಕಟಾ ! ||೭೭||

ಅಯ್ಯೋ :—ನಿರ್ಭಾಗ್ಯನಾದ ಅಶೋಕ! ಘಾತುಕನಾದ ನಿನಗೆ ಇನ್ನು ಸಹೋದರನೆಲ್ಲಿ? ಹಾಹಾ ! ತಮ್ಮ! ರಾಜ್ಯವೈಭವವನ್ನು ತೃಣಕ್ಕೆಣೆಮಾಡಿ ಭಿಕ್ಷುವಾಗಿದ್ದರೂ ನನ್ನಿಂದ ದುರ್ಮರಣವನ್ನು ಅನುಭವಿಸಿದೆಯಾ! ಅಯ್ಯೋ ! ಅಯ್ಯೋ !

[ಎಂದು ತಲೆಯನ್ನು ಕುಟ್ಟಿಕೊಳ್ಳುವನು]

ವೃ|| ಸಿರಿಯೇಕೆ ? ರಾಜ್ಯಮೆನಗೇತಕೆ ? ಸೌಖ್ಯವೇಕೆ !
ನರರಾಕ್ಷಸಂಗೆನಗೆ ಧರ್ಮದ ತತ್ವವೇಕೆ ? !
ಗುರುವೇಕೆ ? ಬಂಧುಜನವೇತಕೆ? ಮಿತ್ರರೇಕೆ ? !
ಧರೆಯೊಳ್ ಕಠೋರನೆನಿಪೆನ್ನಯ ಬಾಳ್ವೆಯೇಕೆ ||೭೮||

ಹಾಹಾ ! [ಮೂರ್ಛಾಕ್ರಾಂತನಾಗುವನು].

ಮಂತ್ರಿ :—ಮಹಾಪ್ರಭು ! ಚೇತರಿಸಿಕೊಳ್ಳಬೇಕು ; ಪ್ರಮಾದದಿಂದ ನಡೆದುದಕ್ಕೆ ಚಿಂತಿಸಿ ಫಲವಿಲ್ಲ.

ಅಶೋ :—ಅಯ್ಯೋ ! ನನ್ನ ಆಜ್ಞೆಗೆ ಧಿಕ್ಕಾರವಿರಲಿ.

ಕಂ|| ಎನ್ನ ದುರಾಚಾರದ ಫಲ |
ಮಂ ನೆರೆ ಕಣ್ಣೆದಿರೊಳಿಟ್ಟ ನಕಟಾ ! ವಿಧಿತಾಂ |
ಎನ್ನಯ ಧರ್ಮದ ಲೋಪದ |
ಬನ್ನದ ಪಿಂತೆನ್ನ ಮನೆಳೆ ಬರಿಸಿದನಕಟಾ | ||೭೯||

ಅಯ್ಯೋ ! ಪ್ರಾಣಿಹಿಂಸೆಯೇ ದೂಷ್ಯವೆಂದು ಬುದ್ಧನ ಮತವಿರುವಾಗ ಅಲ್ಪಾಪರಾಧಕ್ಕಾಗಿ ಸಾಧು ಪುರುಷನ ಶಿರಚ್ಛೇದನವನ್ನು ವಿಧಿಸಿದ ನಾನೆಂತಹ ಧರ್ಮಬಾಹಿರನು ! ಅವಿವೇಕಿಯು !! ಬುದ್ಧನ ಭಕ್ತರಿಗೆ ಕೋಪತಾಪಗಳುಂಟೆ? ಸುಡುಸುಡು ! ಈ ಧರ್ಮಮಾಲಿನ್ಯವನ್ನು !! [ಅಳುವನು].

[ಅನಂತರ ಉಪಗುಪ್ತಾಚಾರ್ಯನು ಪ್ರವೇಶಿಸುವನು].

ಉಪಗುಪ್ತ :—ಕಂ|| ಸೈರಿಸು ಸೈರಿಸು ! ಭೂಪಾ !
ದಾರುಣ ಕೋಪಾಗ್ನಿಯಿಂದೆ ಧಗ್ಧನೆನಿಸಿದಯ್ ||
ಧೀರನೆ ! ಸಾರಾಸಾರವಿ |
ಚಾರದಿನಿನ್ನಾದೊಡಂ ಪ್ರವರ್ತಿಪುದಿಳೆಯೊಳ್ ||೮೦||

ಅಶೋ :—ಗುರುವೆ ! ನನ್ನನ್ನು ಉದ್ಧರಿಸು ಉದ್ಧರಿಸು !

[ಎಂದು ಪಾದದ ಮೇಲೆ ಬೀಳುವನು].

ಉಪಗುಪ್ತ :—ಸಾರ್ವಭೌಮನೆ ! ಚಿಂತಿಸಿ ಫಲವಿಲ್ಲ ; ಇನ್ನೀ ರಾಜ್ಯದಲ್ಲಿ ಯಾವ ಕಾರಣದಿಂದಲೂ ಮರಣದಂಡನೆಯನ್ನು ನಿಲ್ಲಿಸಿಬಿಡು.

ಅಶೋ :—ಮಹನೀಯರ ಅಪ್ಪಣೆಯಂತೆ ಆಚರಿಸುವೆನು; ನನ್ನೀ ದಗ್ಧವಾದ ಹೃದಯಕ್ಕೆ ಶಾಂತಿಯು ಹೇಗುಂಟಾಗುವುದೊ ?

ಉಪಗುಪ್ತ :—ಮಹಾರಾಜನೆ ! ತೀರ್ಥಾಟನೆಯಿಂದ ನಿನ್ನೀ ದುಃಖವು ಶಮನವಾಗುವುದು.

ಅಶೋ :—ಪೂಜ್ಯರೇ ! ಪವಿತ್ರಕ್ಷೇತ್ರಗಳಿಗೆ ನನ್ನನ್ನು ಕರೆದುಕೊಂಡು ಹೋಗೋಣವಾಗಲಿ !

ಉಪಗುಪ್ತ :—ಮಹಾರಾಜ ! ಭಗವಂತನಾದ ಬುದ್ಧದೇವನು ಜನ್ಮವೆತ್ತಿದ ಲುಂಬಿನೀ ಉದ್ಯಾನವೂ, ಧರ್ಮೋಪದೇಶದಿಂದ ಅನೇಕರನ್ನು ಧನ್ಯರನ್ನು ಮಾಡಿದ ಶ್ರಾವಸ್ತಿ ನಗರವೂ, ಧರ್ಮಪ್ರಚಾರಕ್ಕಾಗಿ ಭಿಕ್ಷುಗಳನ್ನು ದಿಕ್ಕುದಿಕ್ಕಿಗೆ ಕಳುಹಿಸಿದ ಸಾರನಾಥವೂ, ಆ ಮಹಾನುಭಾವನು ಮಹಾಪರಿನಿರ್ವಾಣವನ್ನು ಹೊಂದಿದ ಕುಶನಗರವೂ, ಆತನ ಅಸ್ಥಿಗಳು ನಿಕ್ಷಿಪ್ತವಾಗಿದ್ದ ರಾಮಗ್ರಾಮವೂ, ಬುದ್ಧದೇವನಿಗಿಂತಲೂ ಪೂರ್ವದಲ್ಲಿದ್ದ ಕೋನಾಕನೆಂಬ ಮಹಾಮುನಿಯ ಆಶ್ರಯವೂ, ಬುದ್ಧದೇವನ ಪಾದಧೂಳಿಯಿಂದ ಪವಿತ್ರವಾದ ವೈಶಾಲೀನಗರವೂ, ಸೇವ್ಯಗಳಾಗಿರುವುವು. ಈ ಮಹಾಸ್ಥಲಗಳಿಗೆ ನಿನ್ನನ್ನು ಕರೆದುಕೊಂಡು ಹೋಗುವೆನು. ನಡೆ !

ಅಶೋ :—ಪೂಜ್ಯರ ಅಪ್ಪಣೆಯಂತಾಗಲಿ!

[ಎಲ್ಲರೂ ಹೊರಡುವರು].

ಇದು ಪಂಚಮಾಂಕವು.

ಷಷ್ಠಾಂಕಂ.

[ಅಶೋಕನು ಸಾಮಾಜಿಕರೊಡನೆ ಆ ಸ್ಥಾನದಲ್ಲಿ ಮಂಡಿತನಾಗಿರುವನು].

ಭಿಕ್ಷುಗಳು: [ಪ್ರವೇಶಿಸಿ] ಧಾರ್ಮಿಕ ಸಾರ್ವಭೌಮನು ವಿಜಯಿಸಲಿ!

ಅಶೋ :—[ವಿನಯದಿಂದ] ಧರ್ಮಗುರುಗಳಿಗೆ ನಮಸ್ಕಾರವು.

[ನಮಸ್ಕರಿಸಿ] ಪೂಜ್ಯರು ಆಸನೋಪವಿಷ್ಟರಾಗಬೇಕು. ತಮ್ಮ ನಿಯಮಗಳು ನಿರಾತಂಕವಾಗಿ ನಡೆಯುತ್ತಿರುವಷ್ಟೆ? ಧರ್ಮವು ತನ್ನ ಪ್ರಕಾಶವನ್ನು ಎಲ್ಲೆಡೆಯಲ್ಲಿಯೂ ತುಂಬಿರುವುದಷ್ಟೆ?

ಭಿಕ್ಷು :—ಕಂ|| ಧರೆಯೊಳ್ ಧರ್ಮಂ ರೂಪಾಂ|
ತರಮಾಂತಾಡಂಬರಕ್ಕೆ ಪಕ್ಕಾದುದು ಮೇಣ್ |
ಪರಧರ್ಮಂ ಮರೆಯಾಗಿರೆ|
ತರತರದಿಂ ಪರ್ಬುತಿರ್ಪುದೆತ್ತಂ ಭೂಪಾ ||೮೧||

ಅಶೋ :—[ಆಶ್ಚರ್ಯದಿಂದ] ಪೂಜ್ಯರೆ! ಸನಾತನವಾದ ಧರ್ಮಕ್ಕೂ ರೂಪಾಂತರವುಂಟೆ?

ಭಿಕ್ಷು :—ಸಾರ್ವಭೌಮ!

ಕಂ|| ಬಗೆವಗೆಯಿಂ ಬಿತ್ತರಿಸು|
ತ್ತೊಗುಮಿಗೆ ತಾಂ ಸಂಚರಿಪ್ಪ ಧರ್ಮವ್ಯಾಖ್ಯಾ||
ತೃಗಳೆತ್ತಂ ತೀವಿರ್ದಪ||
ರಗಣಿತಮೆನೆ ಭಿಕ್ಷುವೇಷಧರರೀ ಮಹಿಯೊಳ್ ||೮೨||

ಅಶೋ :—ಧರ್ಮಸ್ವರೂಪಜ್ಞಾನವಿಲ್ಲದವರು ಗುರುಪದಕ್ಕೆ ಪೋಗಿ ನಿಲ್ಲುವರೆಂಬುದಿದು ವಿಚಾರಣೀಯವಾಗಿರುವುದು.

ಭಿಕ್ಷು :—ಸಾರ್ವಭೌಮನೆ! ಇದೇ ಧರ್ಮಗ್ಲಾನಿಗೆ ಮುಖ್ಯಕಾರಣವು. ಆಡಂಬರದ ಸನ್ಯಾಸಿಗಳ ಗರ್ಜನೆಯಿಂದ ಸಾತ್ವಿಕಭಿಕ್ಷುಗಳ ತತ್ವವಿಚಾರವು ಎಲ್ಲಿಯೋ ಅಡಗಿಹೋಗಿರುವುದು.

ಅಶೋ :—ಪೂಜ್ಯರೆ! ಧರ್ಮಸಂರಕ್ಷಣೆಯು ಅತ್ಯಾವಶ್ಯವಾದುದು ; ಈ ಭಾರವು ಧರ್ಮಗುರುಗಳಿಗೆ ಸೇರಿದುದು.

ಭಿಕ್ಷು :—ಅಹುದು ; ಧರ್ಮಗುರುಗಳು ಯಾರೆಂಬುದು ನಿರ್ಣಯವಾಗಬೇಕಷ್ಟೆ!

ಅಶೋ :—ಬುದ್ಧಾಗಮಪಾರೀಣರಾದ ಮಹಾತ್ಮರೇ ಈ ನಿರ್ಣಯವನ್ನು ಮಾಡಬೇಕು.

ಭಿಕ್ಷು :—

ವೃ|| ನೆರೆಯಿಸ! ನೀಂ ನೃಪಾಲವರ! ಧರ್ಮದ ಸಂಸ್ಥೆಯ ನಳ್ಕೆಯಿಂದೆ ಸ|
ತ್ವರದೊಳೆ ಭಾರತಾವನಿಯೊಳೆಲ್ಲಿಯುಮೊಪ್ಪುವ ಭಿಕ್ಷುವೃಂದಮಂ ||
ಕರೆಯಿಸ! ನಣ್ಪಿನಿಂ ಗುರುಪದಾರ್ಹರೆನಿಪ್ಪರ ನಿರ್ಣಯಿಪ್ಪುದಂ |
ತಿರದುತುಧರ್ಮರೂಪದ ಸುನಿರ್ಣಯಮಂಬುಧರಿಂದೆ ಮಾಡಿಸಾ ||೮೩||

ಜಗಜ್ಜ್ಯೋತಿಯಾದ ಬುದ್ಧದೇವನ ಮಹಾಪರಿನಿರ್ವಾಣವಾದಮೇಲೆ ಆತನ ಪ್ರಿಯಶಿಷ್ಯನಾದ ಮಹಾಕಾಶ್ಯಪನ ಅಧ್ಯಕ್ಷತೆಯಲ್ಲಿ ಉಪಾಲಿ ಆನಂದ ಇವರ ಸಹಾಯದಿಂದ ಧರ್ಮವಿನಯ ಸೂತ್ರಗಳೆಂಬ ಪಿಟಕತ್ರಯವು ಸಂಗ್ರಹಿಸಲ್ಪಟ್ಟಿತು! ಕೆಲವು ಕಾಲದಮೇಲೆ ಭಿಕ್ಷುಗಳಲ್ಲಿ ಧರ್ಮಗ್ಲಾನಿಯ ಲಕ್ಷಣವು ಕಂಡುಬಂದುದರಿಂದ ಮಗಧಚಕ್ರವರ್ತಿಯಾದ ಕಾಲಾಶೋಕಮಹಾರಾಜನು ವೈಶಾಲಿಯ ಮಹಾವನವಿಹಾರದಲ್ಲಿ ದೊಡ್ಡದೊಂದು ಸಭೆಯನ್ನು ನೆರೆಯಿಸಿ, ಸ್ಥವಿರರೇವತನ ಅಧ್ಯಕ್ಷತೆಯಲ್ಲಿ ಧರ್ಮಸ್ವರೂಪವನ್ನು ನಿರ್ಣಯಮಾಡಿಸಿದನು ; ಈಗ ಧರ್ಮಾಶೋಕನಾದ ನೀನು ಧರ್ಮಗ್ಲಾನಿಯನ್ನು ದೂರಮಾಡಿ ಸಂರಕ್ಷಿಸಬೇಕಾಗಿರುವುದು.

ಕಂ|| ಮುಸುಕಿರ್ಪ ಮೋಡಮಂ ಪರಿ|
ಯಿಸಿ, ನಲಪಿಂ ಧರ್ಮಮೆಂಬರವಿಯತಿಶಯದಿಂ|
ದೆಸೆವವೊಲೆಸಗೈ ; ಧಾರ್ಮಿಕ|
ವಸುಧಾಧಿಪ! ನಿನ್ನ ಜಸಮದುರ್ವುಗೆ! ಜಗದೊಳ್ ||೮೪||

ಅಶೋ :—[ಆತ್ಮಗತ] ಆಹಾ! ಧರ್ಮರಕ್ಷಣೆಗಿಂತಲೂ ಬೇರೆ ಕಾರ್ಯವುಂಟೆ? [ಪ್ರಕಾಶ] ಪೂಜ್ಯರೆ! ತಮ್ಮ ಅನುಜ್ಞೆಯಂತೆ ಮಹಾಸಭೆಯನ್ನು ನಡೆಯಿಸಲು ಪ್ರಯತ್ನಿಸುವೆನು.

ಭಿಕ್ಷುಗಳು :—ಸಾರ್ವಭೌಮನೆ! ನಿನ್ನ ಧರ್ಮಾನುರಾಗವು ವಿಜಯಿಸಲಿ! ನಾವು ಹೊರಡುವೆವು.

[ಆಶೀರ್ವದಿಸಿ ಹೊರಡುವರು].

ಅಶೋ : —ಅಮಾತ್ಯ! ರಾಧಾಗುಪ್ತ* ಉಪೋಸಥ ಕ್ರಿಯಾನಿಮಿತ್ತವಾಗಿ ವಿಜ್ಞಾಪಿಸಿ ಎಲ್ಲಾ ಭಿಕ್ಷುಭಿಕ್ಷುಣಿಯರೂ ಅಶೋಕಾರಾಮದಲ್ಲಿ ಸೇರಲು ಏರ್ಪಡಿಸು.

ರಾಧಾ : —ಸಾರ್ವಭೌಮನ ಅಪ್ಪಣೆಯಂತೆ ! [ಹೊರಡುವನು].

[ಎಲ್ಲರೂ ಹೊರಡುವರು].

[ಅಶೋಕಾರಾಮದಲ್ಲಿ ವಿಧರ್ಮಿಗಳಾದ ಭಿಕ್ಷುಗಳು ಪ್ರವೇಶಿಸುವರು].

ಪ್ರಭಾಕರ :—ನಾವೇ ಧರ್ಮಗುರುಗಳು ! ನಮ್ಮ ನುಡಿಗಳೇ ಬುದ್ಧಾಗಮ ಸೂತ್ರಗಳು ! ನಮ್ಮ ಉಪದೇಶವೇ ಪರಮಧರ್ಮವು !

ಚಂದ್ರದೇವ :—ಆಃ ! ಅದಕ್ಕೆ ಸಂದೇಹವೇನು ? ಪ್ರಭಾಕರಸ್ವಾಮಿಗಳೆ ! ನಿಗ್ರಹಾನುಗ್ರಹ ಸಾಮರ್ಥ್ಯವು ನಮಗಲ್ಲದೆ ಇನ್ನಾರಿಗಿರುವುದು ?

ವಿಜಯದೇವ :—ಮಹಾಗುರುಗಳೆ ! ಸರ್ವತಂತ್ರಸ್ವತಂತ್ರರಾದ ನಮ್ಮನ್ನು ಆಶ್ರಯಿಸಿ ತಾನೆ ಲೋಕವೆಲ್ಲವೂ ಪುನೀತವಾಗಬೇಕು !

ಚಕ್ರಪಾಣಿ :—ಭಿಕ್ಷುಶ್ರೇಷ್ಠರೆ ! ಆ ನಿರ್ವಾಣವೆಂಬುದು ನಮ್ಮ ಕರಗತವಾಗಿರುವುದು ; ಧನಕನಕವಸ್ತುವಾಹನಗಳಿಂದ ನಮ್ಮನ್ನು ತೃಪ್ತಿಪಡಿಸಿದವರಿಗೆ ನಾವು ಅಮೃತವನ್ನು ಧಾರೆಯೆರೆಯುವೆವು.

ವಿಶಾಖದತ್ತ :—ಧರ್ಮಗುರುಗಳೆ ! ವಿಧರ್ಮಿಗಳಾದ ಭಿಕ್ಷುಗಳ ಸಂಖ್ಯೆಯು ಅತ್ಯಲ್ಪವಾಗಿ ನಮ್ಮ ಸಂಘವೇ ದೇಶದಲ್ಲೆಲ್ಲಾ ಪ್ರಬಲವಾಗಿರುವುದರಿಂದ ಅಪ್ರತಿಹತವಾಗಿ ನಮ್ಮ ಶಕ್ತಿಯನ್ನು ಹರಡುವುದಕ್ಕೆ ಅವಕಾಶವುಂಟು ! ಆ ಸ್ಥವಿರಮೌದ್ಗಲಿಪುತ್ರ ತಿಷ್ಯನು ತಪಸ್ಸಿಗೆಂದು ಅಹೋಗಂಗಾಪರ್ವತಕ್ಕೆ ಹೋದುದು ನಮಗೆ ಕ್ಷೇಮವಾಯಿತು ! ನಡೆಯಿರಿ ; ಎಲ್ಲಾ ಕಡೆಯಲ್ಲಿಯೂ ನಾವೇನಾವಾಗಿ ಸಂಚರಿಸಿ ಬೌದ್ಧಧರ್ಮವನ್ನು ವಿಸ್ತರಿಸುವ.

[ಅನಂತರ ಭದ್ರಕನೆಂಬ ಒಬ್ಬ ಅಧಿಕಾರಿಯು ಪ್ರವೇಶಿಸುವನು].

* ಪೌರ್ಣಿಮಾ, ಅಮಾವಾಸ್ಯೆ, ಚತುರ್ದಶಿ, ಅಷ್ಟಮೀ ತಿಥಿಗಳಲ್ಲಿ ಭಿಕ್ಷುಗಳೆಲ್ಲರೂ ಒಂದು ವಿಹಾರದಲ್ಲಿ ಸೇರಿ ಪ್ರಾತಿಮೋಕ್ಷವನ್ನು ಓದುವರು ; ಮತ್ತು ತಮ್ಮ ಅಪರಾಧಗಳನ್ನು ಒಪ್ಪಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವರು.

ಭದ್ರಕ :—ಎಲ್ಲೆಲ್ಲಿಯೂ ಭಿಕ್ಷುಗಳೇ ತುಂಬಿಹೋಗಿರುವರು ; ನಾನು ಕಂಡಂತೆ ರಾಜಾಶ್ರಯದಲ್ಲಿ ಉದರಪೋಷಣೆಮಾಡಿಕೊಳ್ಳುತ್ತಿದ್ದ ಎಷ್ಟೋ ಮಂದಿ ನಿರುದ್ಯೋಗಿಗಳು ಈಗ ಆಶ್ರಯಾಭಾವದಿಂದ ಮುಂಡಿತಮಸ್ತಕರಾಗಿ ಭಿಕ್ಷುವೇಷವನ್ನು ಅವಲಂಬಿಸಿ ಧನಾರ್ಜನೆಗೆ ಉದ್ಯುಕ್ತರಾಗಿರುವರು ! ವಿದ್ಯಾಗಂಧವೇ ಇಲ್ಲದವರಿಗೂ ಕಷ್ಟವಿಲ್ಲದೆ ಈ ಭಿಕ್ಷುವೇಷವು ಉದರ ಭರಣವನ್ನು ಮಾಡಿಸುವುದು. ಇಂತಹ ಸ್ವಾರ್ಥಪರರೂ ಲೋಭಿಗಳೂ ಆದವರಿಂದ ಧರ್ಮವು ಊರ್ಜಿತವಾಗಬಲ್ಲುದೇ ! ಇರಲಿ ! "ಕಾಷಾಯ ದಂಡಮಾತ್ರೇಣ ಯತಿಃ ಪೂಜ್ಯೋನಸಂಶಯಃ" ನಾನೂ ತಕ್ಕಂತೆ ಗೌರ ವಿಸಿ ಚಕ್ರವರ್ತಿಯ ವಿಜ್ಞಾಪನೆಯನ್ನು ಅರಿಕೆಮಾಡುವೆನು [ಎಂದು ಸಮೀಪಕ್ಕೆ ಹೋಗಿ] ಭಿಕ್ಷುಶ್ರೇಷ್ಠರ ಚರಣಾರವಿಂದಗಳಲ್ಲಿ ವಂದನೆಗಳು. ಉಪೋಸಥವನ್ನಾಚರಿಸಲು ಎಲ್ಲ ಭಿಕ್ಷುಭಿಕ್ಷುಣಿಯರೂ ಸೇರಬೇಕೆಂದು ಸಾರ್ವಭೌಮನು ವಿಜ್ಞಾಪಿಸುವನು.

ಭಿಕ್ಷುಗಳು [ಅಸಹ್ಯದಿಂದ] ಉಪೋಸಥವೆಂದರೇನು ? ನಾವು ಉಪೋಸಥ ಕ್ರಿಯೆಗೆ ಆರಂಭಿಸಿದೆವೆಂದರೆ ಆ ವಿಧರ್ಮಿಗಳೂ ಬಂದು ನಮ್ಮ ಜತೆಗೆ ಸೇರಿ ಕೊಳ್ಳುವರು ; ನಮಗೆ ಅವರೊಡನೆ ಸೇರಲು ಇಷ್ಟವಿಲ್ಲ.

ಭದ್ರಕ :—ಪೂಜ್ಯರೆ ! ಸರ್ವಗುರುಗಳ ಸಂದರ್ಶನವನ್ನು ಏಕಕಾಲದಲ್ಲಿಯೇ ತೆಗೆದುಕೊಳ್ಳುವುದಕ್ಕೆ ಚಕ್ರವರ್ತಿಯು ಅಪೇಕ್ಷಿಸುವಾಗ, ತಾವುಗಳೇಕೆ ತಿರಸ್ಕರಿಸುವಿರಿ ?

ಭಿಕ್ಷುಗಳು :—ಆ ಚಕ್ರವರ್ತಿಯಿಂದಾಗಲೀ, ಮತ್ತೊಬ್ಬರಿಂದಾಗಲೀ, ನಮಗಾಗಬೇಕಾದುದೇನು ! ಸ್ವತಂತ್ರರಾದ ನಾವು ನಮ್ಮಿಷ್ಟದಂತೆ ನಡೆಯುವೆವು ; ಸಾಮಾನ್ಯಪ್ರಜೆಗಳಂತೆ ನಾವು ರಾಜಾಜ್ಞೆಗೆ ಒಳಪಟ್ಟವರೇನು ?

ಭದ್ರಕ :—ಪೂಜ್ಯರೆ ಯಾರೊಬ್ಬರ ಪ್ರಾರ್ಥನೆಯನ್ನೂ ಅಂಗೀಕರಿಸಿ, ಅನುಗ್ರಹಿಸಬೇಕಾದುದು ಗುರುಗಳಾದವರಿಗೆ ಧರ್ಮವಲ್ಲವೆ ?

ಭಿಕ್ಷು :—ಛೀ ! ಮೂರ್ಖನೆ ! ಸೇನೆಯೋ ! ನಮಗೆ ಗುರುಧರ್ಮವನ್ನು ಬೋಧಿಸುವವನು ! ಹೆಚ್ಚು ಮಾತಾಡಿದರೆ ಹಲ್ಲುಮುರಿದು ಆಚೆಗೆ ಕಳುಹಿಸಿಬಿಡುವೆವು. ಒಬ್ಬರನೊಡನೆ ನಾವು ಸೇರತಕ್ಕವರಲ್ಲವೆಂದು ಹೇಳಿದ ಮೇಲೆ ನಿರ್ಬಂಧಿಸುವುದಕ್ಕೆ ನಿನಗೇನಧಿಕಾರವು ?

ಭದ್ರಕ:—ಸ್ವಾಮಿ! ಶಾಂತಿಮೂರ್ತಿಗಳಾದ ಭಿಕ್ಷುಗಳಿಗೆಲ್ಲಿಯಾದರೂ ಇಷ್ಟು ಕೋಪವೇ? ಕ್ಷಮಿಸಬೇಕು.

ಭಿಕ್ಷು:—ಎಲೋ ಪತಿತನೆ! ನಮ್ಮನ್ನು ಆಕ್ಷೇಪಿಸುವ ನಿನ್ನ ನಾಲಿಗೆಯನ್ನು ಸೀಳುವೆವು!

ಭದ್ರಕ:—ಸ್ವಾಮಿ! ಬುದ್ಧಾಗಮದಲ್ಲಿ ನಾಲಗೆಯನ್ನು ಸೀಳುವುದೂ, ಹೇಳಲ್ಪಟ್ಟಿರುವುದೆ?

ಭಿಕ್ಷು:—ಎಲೆ ಪಾಪಿಯೆ! ನಾಯಿಯಾದ ನಿನಗೆ ಬುದ್ಧಾಗಮಧರ್ಮರಹಸ್ಯವನ್ನು ತಿಳಿದುಕೊಳ್ಳಲು ಯೋಗ್ಯತೆಯೆಲ್ಲಿಯದು. ಸುಮ್ಮನೆ ಹೊರಟು ಹೋಗು. [ಗದರಿಸುವರು].

ಭದ್ರಕ:—ಕಂ|| ಶಾಂತಸ್ವಭಾವಮಂ ತೂ|
ಳ್ದಿಂತುಟಹಂಕಾರದಿಂದೆ ವರ್ತಿಪನೀಂಗಳ್ |
ಎಂತೀಪದಕರ್ಹರೊ? ಇದ|
ನಾಂತಿಳಿಯೆಂ: ಬೌದ್ಧಧರ್ಮ ಬಾಹಿರರಲೆ ನೀಂ ||೮೫||

ಭಿಕ್ಷು:—ಛೀ! ನೀಚನೆ! ಗುರುನಿಂದೆಯನ್ನು ಮಾಡುವ ನಿನ್ನನ್ನು ಸೀಳಿದರೂ ಪಾಪವಿಲ್ಲ [ಮೇಲೆ ಬೀಳಲು ನುಗ್ಗುವರು].

ಭದ್ರಕ:—[ಕೋಪದಿಂದ] ಜೋಕೆ! ಜೋಕೆ!
ಕಂ|| ಎಲೆ ಮೂರ್ಖ ಶಿಖಾಮಣಿಗಳಿ|
ಮಲಿನಾತ್ಮರೆ! ಗುರುಗಳೆಂದು ನೋಡುತೆ ನಿಮ್ಮಂ|
ಸಲೆ ನಾಂ ಕ್ಷಮಿಸಿದೆನಿನ್ನೆಗ|
ಮೇಲೆ ಧೂರ್ತರೆ! ತಕ್ಕ ಫಲವನಿಂ ಕಾಣ್ಬಿರಲೇ ||೮೬||

ಭಿಕ್ಷುಗಳು:—ಚೀ! ಹೇಡಿಯೆ! ನಿನ್ನಿಂದೇನಾಗುವುದೋ ನೋಡುವೆವು.
[ಎಲ್ಲರೂ ಹಿಡಿದುಕೊಳ್ಳುವರು].

ಭದ್ರಕ:—ಭದ್ರಕ:—[ಕೋಪದಿಂದ ಕತ್ತಿಯನ್ನು ಹಿರಿದು]
ಕಂ|| ಚಂಡರೆ! ಘಡಘಡ! ನಿಮ್ಮಯ|
ಮುಂಡಿತಮಸ್ತಕವನೀಗಳೇ ಖಂಡಿಸಿ. ನಾಂ|
ಚೆಂಡಾಟಮನಾಡುವೆನೆಲೆ|
ಭಂಡರೆ! ಚೀ! ಪ್ರಾಣದಾಸೆಯುಳ್ಳೊಡೆ ತೊಲಗಿಂ. ||೮೭||

[ಹೆದರಿಸುವನು].

ಭಿಕ್ಷು :—ಛೀ ! ಮೂರ್ಖನೆ! ನಿನ್ನನ್ನು ಮೊದಲು ಸಂಹರಿಸಿ, ಆಮೇಲೆ ಬುದ್ಧಾಗಮದಲ್ಲಿ ಹೇಳಿರುವಂತೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವೆವು. ಪಾಪಿಯೆ ! ಈ ಮುಷ್ಟಿಪ್ರಹಾರಗಳಿಂದ ಸಾಯಿ. [ಎಂದು ಹೊಡೆಯುವರು].

ಭದ್ರಕ :—[ಕೋಪೋದ್ರೇಕದಿಂದ]

ಕಂ|| ಪತಿತರೆ ! ನೀಂ ಮೃತಿಯೊಂದಲ್ |
ಕ್ಷಿತಿಭಾರಂ ಕಳೆಗುಮಲ್ತೆ ? ತಾಗದು ದೋಷಂ |
ಖತಿಯಾಂತೆನ್ನೀಖಡ್ಗ |
ಹುತಿಯಾಗಿಂ ಪೋಗಿಮಂತಕಾಶ್ರಯಕೀಗಳ್ ||೮೮||

[ಎಂದು ಬಿಟ್ಟು ಭಿಕ್ಷುವನ್ನು ಶಿರಶ್ಛೇದಮಾಡುವನು].

[ತೆರೆಯಲ್ಲಿ]

ಭದ್ರಕ ! ಸೈರಿಸು ! ಸೈರಿಸು ! ಈ ಅತ್ಯಾಚಾರವು ಸಾಕು !

ಭದ್ರಕ:—ಆಃ | ಇದಾರು ? ನನ್ನನ್ನೆಚ್ಚರಿಸುವರು. [ನೋಡಿ] ಚಕ್ರವರ್ತಿ ಸಹೋದರನಾದ ತಿಷ್ಯಸ್ವಾಮಿಯು !

[ಖಡ್ಗವನ್ನು ಹಿಂದೆಗೆಯುವನು].

ಭಿಕ್ಷುಗಳು ! [ರೋಷಾವೇಶದಿಂದ]

ವೃ|| ಹಡಹತ ! ದುಷ್ಟ ! ಧರ್ಮಗುರುವಂ ಕಡಿದಿಕ್ಕಿದ ನೀಚ ! ನಿನ್ನನೊರ್ಕಿನಿ |
ಸ್ನಡಗಿಪೆವಾಕುಲಾಧಮನ, ಪಾಪಿಯಶೋಕನನಿಂದೆ ಸುಟ್ಟು ಸಂ |
ಗಡಿಸಿದ ಕೋಪಮುಂ ವ್ಯಸನಮುಂ ಕಳೆದಪ್ಪೆವೆಲೋ ಸುದಾತ್ತ ! ಈ |
ಪೊಡವಿಯೊಳಿಂತು ಪಾಪಭಯಮಿಲ್ಲದೆ ಪೋದುದೆ? ಕೆಟ್ಟರಾಜ್ಯದೊಳ್ ||೮೯||

ತಿಷ್ಯ :—ಭದ್ರಕ ! ನಡೆ ನಡೆ ! [ಕೈಹಿಡಿದು ಕರೆದುಕೊಂಡು ಹೋಗುವನು].

ಪ್ರಭಾಕರ:—ವಿಜಯದೇವ ಸ್ವಾಮಿಗಳೆ ! ಚಕ್ರವರ್ತಿಯು ಮಹಾಸಭೆಯನ್ನು ನೆರೆಯಿಸುವ ಉದ್ದೇಶವು ಏನಾಗಿರಬಹುದು ?

ವಿಜಯ :—ಪ್ರಭಾಕರಾಚಾರ್ಯರೆ! ಅದೇನೋ ಕೃತ್ರಿಮಾನುಸಂಧಾನದಂತೆ ತೋರುವುದು.

ಚಂದ್ರದೇವ :—ಅದೇನೋ ಗುರುಪದಕ್ಕರ್ಹರಾದವರನ್ನು ಆರಿಸುವುದೂ, ಧರ್ಮಸೂತ್ರಗಳನ್ನು ನಿರ್ಣಯಿಸುವುದೂ, ಉದ್ದೇಶವಂತೆ

ಪ್ರಭಾ :— ಈಗಿನ ಭಿಕ್ಷುಗಳಲ್ಲಿ ಅನರ್ಹರಾದವರು ಯಾರಿರುವರು ? ಧರ್ಮಕ್ಕೆ ಅಂತಹ ಗ್ಲಾನಿಯಾಗಿರುವುದೇನು ?

ಚಂದ್ರ :— ಅನೇಕ ಭಿಕ್ಷುಗಳಿಗೆ ಅಪಮಾನಪ್ರಸಂಗವೊದಗಬಹುದಾಗಿ ತೋರುವುದು.

ಪ್ರಭಾ :— ನಮಗಂತೂ ಸಭೆ ಸೇರುವುದು ಇಷ್ಟವಿಲ್ಲ ; ಏನಾದರೂ ಆಗಲಿ ! ಈ ಪ್ರಯತ್ನವನ್ನು ಮುರಿದುಬಿಡಬೇಕು.

ಚಂದ್ರದೇವ :— ಭರತಖಂಡದ ಸಮಸ್ತ ಭಿಕ್ಷುಗಳೂ ತಂಡತಂಡವಾಗಿ ಸೇರುತ್ತಿರುವರು ! ಏನುಮಾಡುವ ?

ಪ್ರಭಾ :— ಬರಲಿ ! ಸಭೆಯನ್ನು ನೆರೆಯಿಸದಂತೆ ಮುರಿಯುವ ಉಪಾಯವು ನಮಗೆ ಸ್ವಾಧೀನವಾಗಿರುವುದು.

ಚಂದ್ರ ;— ಅದೇನು ?

ಪ್ರಭಾ :— ನೋಡಿ ಅಕಸ್ಮಾತ್ತಾಗಿ ಒದಗಿದ ಭಿಕ್ಷುಸಂಹಾರವು ನಮಗೆ ಅನುಕೂಲವಾಗಿರುವುದು ; ಈ ಕಾರಣದಿಂದ ಚಕ್ರವರ್ತಿಗೇ ದೇಹಾಂತಪ್ರಾಯಶ್ಚಿತ್ತವನ್ನು ವಿಧಿಸಿದರೆ ಸಭೆಯು ತಾನಾಗಿಯೇ ಮುರಿದುಹೋಗುವುದು.

ಎಲ್ಲರೂ :— ಪ್ರಭಾಕರಾಚಾರ್ಯರೆ ! ತಮ್ಮ ಬುದ್ಧಿಯು ಅಸದೃಶವಾದುದು ಒಳ್ಳೆಯ ಯುಕ್ತಿ ! ಒಳ್ಳೆಯ ಯುಕ್ತಿ ! ನಡೆಯಿರಿ ; ಆ ಅಶೋಕನಿಗೆ ಅಗ್ನಿಪ್ರವೇಶಶಿಕ್ಷೆಯನ್ನು ವಿಧಿಸಿ ಕೃತಕೃತ್ಯರಾಗುವ. [ಎಲ್ಲರೂ ಸಂಭ್ರಮದಿಂದ ಹೊರಡುವರು].

[ಅಶೋಕನು ತನ್ನ ಮಂದಿರದಲ್ಲಿ ಧರ್ಮಿಗಳಾದ ಭಿಕ್ಷುಗಳೊಡನೆ ಪ್ರವೇಶಿಸಿ]

ಅಶೋ :— [ಚಿಂತಾಕ್ರಾಂತನಾಗಿ]

ತರಿಣೀ ವೃ|| ಹತನಾದನೆ ! ಗತಿಗಾಣೆನೆ ಹಿತವಾವುದೊ ವಿಧಿಯೇ !
ಯತಿವೊಂದಿದ ಕತದಿಂದವೆ ಧೃತಿಗುಂದಿದೆನಕಟಾ ||
ಮತಿಶೂನ್ಯನ ಕೃತಿಯಿಂ ಮನಕತಿಖೇದಮಿದಕಟಾ |
ನತತಂ ತಿರಗತಿಪಾಪಿಯೆನತಿನೀಚನೆನಿಸಲ್ ||೯೦||

ಅಯ್ಯೋ ! ಭದ್ರಕನು ತಾನೇಕೆ ದುಡುಕಿದನೊ ? ಶಾಂತಸ್ವಭಾವರಾದ ಭಿಕ್ಷುಗಳಲ್ಲಿಯಾದರೂ ಸೈರಣೆಯೇಕೆ ತೋರದೆಹೋಯಿತೊ ? ಅಕ್ಕಟಾ ! ಎಲ್ಲ

ಕಷ್ಟ! ನನ್ನ ಪಾಪವೇ ಕಾರಣವು! ಯಾರಿಂದಲೂ ದೋಷವಿಲ್ಲ! [ದುಃಖಿಸುವನು].

ಭಿಕ್ಷುಗಳು :— ಸಾರ್ವಭೌಮನೆ! ಈ ಭಿಕ್ಷುಹತ್ಯೆಯ ದೋಷವು ನಿನ್ನನ್ನು ಸೋಕದೆಂದು ತೋರುವುದು; ಆದರೂ ಧರ್ಮಸೂಕ್ಷ್ಮವನ್ನು ವಿಚಾರಮಾಡಿ ದೊಡ್ಡವರು ಇದನ್ನು ನಿರ್ಣಯಿಸಬೇಕಾಗುವುದು.

ಅಶೋ :—[ಅಳುತ್ತ]

ಕಂ|| ಧರ್ಮಂಗಾವೊಡೆ ನೆರೆಯುಲ |
ಧರ್ಮಂ ಸಂಗಳಿಸಿದತ್ತು; ವಿಧಿಕೃತವಕಟಾ |
ಧರ್ಮಾಶೋಕನೆನಿಪ್ಪುದ |
ದೊರ್ಮೆಯೆ ಪಾಳಾಯ್ತು; ಬದುಕಿ ಫಲಮೇನಿಳೆಯೊಳ್ ||೯೧||

ಹಾ! ನಿರ್ಭಾಗ್ಯನಾದ ಅಶೋಕ! "ಪ್ರಿಯದರ್ಶಿ" ಎಂಬ ನಾಮಕ್ಕೆ ಇಂದಿನಿಂದ ನೀನು ಅರ್ಹನಲ್ಲ!

ಭಿಕ್ಷುಗಳು :— ಮಹಾರಾಜ! ಮಹಾತ್ಮರಾದ ಮೌದ್ಗಲಿಪುತ್ರತಿಷ್ಯಸ್ವಾಮಿಗಳೊಬ್ಬರೇ ಈ ಧರ್ಮನಿರ್ಣಯವನ್ನು ಮಾಡತಕ್ಕವರು; ಹೇಗಾದರೂ ಅವರನ್ನು ಬರಮಾಡು! ಧರ್ಮವನ್ನು ಉದ್ಧರಿಸಲು ಪ್ರಾರ್ಥಿತರಾದರೆ ಅವರು ಬರುವರಲ್ಲದೆ ಇನ್ನಾವ ಕಾರಣದಿಂದಲೂ ಬಾರರು.

ಅಶೋ ;— ಮಂತ್ರಿಗಳೆ! ಅಹೋಗಂಗಾಪರ್ವತದಲ್ಲಿ ತಪಸ್ಸಿಗೆ ಕುಳಿತಿರುವ ಸ್ಥವಿರಮೌದ್ಗಲಿಪುತ್ರ ತಿಷ್ಯಸ್ವಾಮಿಗಳನ್ನು ಧರ್ಮೋಜ್ಜೀವನಾರ್ಥವಾಗಿ ನಾನು ಪ್ರಾರ್ಥಿಸುವೆನೆಂದು ವಿಜ್ಞಾಪಿಸಿ ಕರೆದುಕೊಂಡು ಬನ್ನಿರಿ.

ಮಂತ್ರಿಗಳು :— ಸಾರ್ವಭೌಮನ ಆಜ್ಞೆಯಂತೆ [ಎಂದು ಹೊರಡುವರು].

[ಅನಂತರ ವಿಧರ್ಮಿಗಳಾದ ಭಿಕ್ಷುಗಳು ಕೋಪಾಟೋಪದಿಂದ ಪ್ರವೇಶಿಸಿ]

ವಿಧರ್ಮಿಗಳು :—

ಕಂ|| ಸುಡುಸುಡು! ನಿನ್ನಯ ಬಾಳ್ಕೆಯ |
ಸುಡುಸುಡು! ಧೀಮೂಢ! ನಿನ್ನ ಪರ್ಬಿದೆ ಜನಮಂ |
ಫಡಫಡ! ಗುರುವಂ ಕೊಲ್ಲಿಸಿ |
ಪಡೆದಿರ್ಪೈ ನೀಚಕೀರ್ತಿಯುಂ ದುರಿತಾತ್ಮಾ! ||೯೨||

ಮೂರ್ಖನೆ! ನಿನ್ನೀಪಾಪಿ ದೇಹವನ್ನು ಅಗ್ನಿಕುಂಡದಲ್ಲಿ ಕೆಡಹಿ ಪ್ರಾಯಶ್ಚಿತ್ತವನ್ನು ಮಾಡಿಕೊ; ಇದು ಹೊರತು ಈ ಅತ್ಯುತ್ಕಟವಾದ ಪಾಪವಿಮೋಚನವಾಗಲು ಉಪಾಯವಿಲ್ಲ.

ಅಶೋ:—[ಶೋಕದಿಂದ] ಪೂಜ್ಯರೆ! ಗುರುವಿನ ಮರಣದಿಂದ ನಾನೂ ತಮ್ಮಂತೆ ದುಃಖಿಯಾಗಿರುವೆನು! ಈ ದಗ್ಧಹೃದಯವನ್ನು ಸಮಾಧಾನಪಡಿಸುವ ಮಾರ್ಗವನ್ನೇ ಕಾಣಲಾರದವನಾಗಿರುವೆನು.

ವಿಧರ್ಮಿ:—ಚಂಡಾಲನೆ! ಕಟುಕನಾದ ನಿನಗೆ ದುಃಖವೋ? ಇನ್ನೂ ಧರ್ಮಗುರುಗಳನ್ನು ನಿನ್ನ ಕಯ್ಯಾರ ಸಂಹರಿಸು; ನಿನ್ನ ದುಃಖವು ಶಮನವಾಗುವುದು. ದ್ರೋಹಿಯೇ! ಘಾತುಕನೇ!

ಅಶೋ:—ಪೂಜ್ಯರೆ! ತಾವಾದರೋ ಭಿಕ್ಷುಹತ್ಯಾದೋಷಕ್ಕೆ ನನ್ನನ್ನೇ ಪಾತ್ರನನ್ನು ಮಾಡಿರುವಿರಿ; ಮತ್ತೆ ಕೆಲವರು ಗುರುಗಳು ಅಕಸ್ಮಾತ್ತಾಗಿ ನಡೆದ ಕಾರ್ಯದಿಂದ ನನಗೆ ಈ ಪಾಪದ ಲೇಪವಿಲ್ಲವೆಂದು ಸಾರುವರು; ಬಹುಮತದಿಂದ ಈ ದೋಷವು ನನ್ನನ್ನೇ ಸೇರುವುದಾದರೆ ದೊಡ್ಡವರಿಂದ ಉಕ್ತವಾಗುವ ಪ್ರಾಯಶ್ಚಿತ್ತವನ್ನು ಅಂಗೀಕರಿಸಲು ಸಿದ್ಧನಾಗಿರುವೆನು.

ವಿಧರ್ಮಿ:—ಎಲೈ ನೀಚನೆ! ಇನ್ನು ಮೂರು ದಿನಗಳೊಳಗಾಗಿ ನೀನು ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಮೃತಭಿಕ್ಷುವಿನ ಔರ್ಧ್ವದೈಹಿಕ ಕ್ರಿಯೆಗಳನ್ನು ನಿರ್ವರ್ತಿಸಲು ನಾವು ಹೊರಡುವೆವು. [ಹೊರಟು ಹೋಗುವರು].

ಅಶೋ:—ಕಂ|| ಗುರುವರ ಚರಣಾನುಗ್ರಹ |
ವರರೇ! ತಾಂ ನ್ಯೂನಮೆನಸಿ ತೆನ್ನೊಳಗಕಟಾ |
ಪರತರಧರ್ಮವನಿಳೆಯೊಳ್ |
ನೆರೆ ಪಬಿಸಸೆನನುವಳ್ಕಿ ಕುಡಿನುರಿದುದೆ? ಹಾ! ||೯||

ಅಯ್ಯೋ! ಸತ್ಕಾರ್ಯವು ಎಷ್ಟು ವಿಘ್ನಗಳಿಂದ ಕುಂಠಿತವಾಗುವುದು! ಇರಲಿ! ನಾನೀಗ ಗಂಗಾತೀರವನ್ನು ಸಾರಿ ಮಹಾತ್ಮರಾದ ಮೌದ್ಗಲಿಪುತ್ರತಿಷ್ಯಾಚಾರ್ಯರವರ ಆಗಮನವನ್ನು ಇದಿರುನೋಡುತ್ತಿರುವೆನು. [ಹೊರಡುವನು] [ಎಲ್ಲರೂ ಹೊರಡುವರು].

[ಅನಂತರ ಪಕ್ಷಸಮುದ್ರನೆಂಬ ಭಿಕ್ಷು ಪ್ರವೇಶಿಸಿ]

ಸತ್ಯ :—ಕಂ|| ತೊಲಗಿತು : ಶಾಶ್ವತಧರ್ಮಂ |
ಬೆಳಗಿತು ; ದೆಸೆದೆಸೆಯ ಮೋಡವಳಿದಾರವಿವೊಲ್ ||
ಇಳೆಯೊಳಗೆತ್ತಂ ಧಾರ್ಮಿಕ |
ತಿಲಕನ ಬೆಳ್ಗಸಮದೇಳ್ಗೆವೆತ್ತುದು. ನೋಡಲ್ ||೯೪||

[ವಿಧರ್ಮಿಗಳಾದ ಭಿಕ್ಷುಗಳು ಪ್ರವೇಶಿಸುವರು].

ಪ್ರಭಾಕರ :—ಸತ್ಯಾಚಾರ್ಯರವರಿಗೆ ನಮಸ್ಕಾರವು ! ಗುರುವಧೆಯಿಂದ ಕಲುಷಿತನಾದ ಅಶೋಕನು ಧರ್ಮಪ್ರಕಾಶಕ್ಕೆ ಕಾರಣವೆಂಬುದು ಹೇಗೆ ?

ಸತ್ಯ :—ಪ್ರಭಾಕರಾಚಾರ್ಯರೆ ! ಮಹಾತ್ಮರಾದ ಮೌದ್ಗಲಿಪುತ್ರ ತಿಷ್ಯರವರ ಬಾಯಿಂದ ಸಾರ್ವಭೌಮನು ನಿರ್ದೋಷಿಯೆಂದು ನಿರ್ಣೀತನಾದ ಮೇಲೆ ಹೇಳುವುದೇನು ?

ಪ್ರಭಾಕರ :—[ವಿಷಾದದಿಂದ ಆತ್ಮಗತ] ಆಹಾ ! ನಮ್ಮ ತಂತ್ರವು ನಿಷ್ಫಲವಾಯಿತು ! [ಪ್ರಕಾಶ] ಮೌದ್ಗಲಿಪುತ್ರತಿಷ್ಯಾಚಾರ್ಯರವರು ಯಾವಾಗ ದಯೆಮಾಡಿದರು ?

ಸತ್ಯ :—ನಿನ್ನೆಯ ಸಂಜೆಯಲ್ಲಿ ಸಾರ್ವಭೌಮನು ಸಪರಿವಾರನಾಗಿ ಗಂಗಾತೀರದಲ್ಲಿ ಕಾದಿದ್ದು ಸ್ವಾಮಿಗಳವರನ್ನು ಭಕ್ತಿಯಿಂದ ತಾನೇ ನೌಕೆಯಿಂದ ಇಳಿಯಿಸಿ ಕಾಲ್ತೊಳೆದು ಪೊಡಮಟ್ಟು ಕರೆತಂದು, "ರತಿವರ್ಧನ" ಎಂಬ ಪ್ರಾಸಾದದಲ್ಲಿ ಇರಿಸಿದನು.

ಪ್ರಭಾ :—ಅಶೋಕನು ನಿರ್ದೋಷಿಯೆಂದು ಹೇಗೆ ನಿರ್ಣಯಿಸಿದರು ?

ಸತ್ಯ :—ಈದಿನ ಪ್ರಾತಃಕಾಲದಲ್ಲಿ ಆಚಾರ್ಯರವರ ಅಧ್ಯಕ್ಷತೆಯಲ್ಲಿ ಗುರುಸಭೆಯು ಪ್ರಾರಂಭವಾದ ಕೂಡಲೆ ಮೊದಲು ಭಿಕ್ಷುಹತ್ಯಾದೋಷವೇ ಚರ್ಚಿಸಲ್ಪಟ್ಟಿತು.

ಪ್ರಭಾ :—ಆಮೇಲೆ !

ಸತ್ಯ :—ಆಮೇಲೆ ಸ್ವಾಮಿಗಳವರು ಹೀಗೆ ಅಪ್ಪಣೆಕೊಡಿಸಿದರು :—

ಪ್ರಭಾ :—ಹೇಳಿ ಹೇಳಿ !

ಸತ್ಯ :—ಭಿಕ್ಷುಹತ್ಯೆಯ ವಿಷಯದಲ್ಲಿ ಸಾರ್ವಭೌಮನ ಮನಸ್ಸು ಪ್ರವರ್ತಿಸಿರಲಿಲ್ಲವಾದುದರಿಂದ ದೋಷವು ಆತನಿಗೆ ತಟ್ಟದೆಂದು ಮಹಾಗುರುಗಳವರು ಅಪ್ಪಣೆಕೊಡಿಸಿದರು ; ಭಿಕ್ಷುಸಭೆಯೆಲ್ಲವೂ ಜಯಜಯಧ್ವನಿಯಿಂದ ಅದನ್ನು ಅನುಮೋದಿಸಿತು.

ಪ್ರಭಾ :—ಆಹಾ ! ಇನ್ನೇನು ಮಾಡುವುದು [ಚಿಂತಿಸುವನು] [ಪ್ರಕಾಶ] ಸತ್ಯಾಚಾರ್ಯರೆ ! ಸಭೆಯಲ್ಲಿ ಆಮೇಲೆ ನಡೆದುದೇನು ?

ಸತ್ಯ :—ಗುರುಪದಾರ್ಹರನ್ನು ನಿರ್ಣಯಿಸಿದರು. ಬೌದ್ಧಾಗಮದಲ್ಲಿ ಅನಭಿಜ್ಞರಾದವರನ್ನು* "ಉಪ್ವಾಹಿಕಾ" ನಿಯಮದಂತೆ ಬಹಿಷ್ಕರಿಸಿದರು ; ಹೀಗೆ ಬಿಡುಗಡೆಹೊಂದಿದವರು ಅರವತ್ತು ಸಾವಿರ ಮಂದಿ. ತ್ರಿಪಿಟಿಕಗಳಲ್ಲಿ ಪಂಡಿತರೂ, ಧರ್ಮಜ್ಞರೂ ಆದ ಒಂದು ಸಾವಿರಮಂದಿ ಮೌದ್ಗಲಿಪುತ್ರ ತಿಷ್ಯರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಧರ್ಮಸೂತ್ರನಿರ್ಣಯವನ್ನು ಮಾಡುವರು. ಈ † ಧರ್ಮಸಂಗೀತಿಯು ನಾಳೆಯಿಂದ ಪ್ರಾರಂಭವಾಗುವುದು.

ಪ್ರಭಾ :—[ತಮ್ಮವರೊಡನೆ] ಮಿತ್ರರೆ ! ನಾವು ಸಭಾಪ್ರವೇಶವನ್ನು ಮಾಡದಿದ್ದುದೇ ಮೇಲಾಯಿತು ; ಅಪಮಾನಪ್ರಾಪ್ತಿಯು ತಪ್ಪಿತು ! ಇನ್ನು ನಾವು ಈ ಭಿಕ್ಷುವೇಷದ ಗೈರಿಕವಸ್ತ್ರಗಳನ್ನು ಧರಿಸಿದರೆ ಶಿಕ್ಷಾರ್ಹರಾಗುವೆವು ; ಆದುದರಿಂದ ವೃತ್ತ್ಯಂತರವನ್ನು ಅವಲಂಬಿಸಿ ಬದುಕೋಣ.

ಎಲ್ಲರೂ :—ಹಾಗೆಯೇ ಆಗಲಿ [ಎಲ್ಲರೂ ಹೊರಟುಹೋಗುವರು].

ಸತ್ಯಾ :—ನಾನು ಮಹಾಗುರುಗಳವರ ಸಂದರ್ಶನವನ್ನು ತೆಗೆದುಕೊಳ್ಳಲು ಹೋಗುವೆನು [ಹೊರಡುವನು].

[ಅನಂತರ ಅಶೋಕ ಸಾರ್ವಭೌಮನು ಭಿಕ್ಷುಗಳೊಡನೆ ಪ್ರವೇಶಿಸಿ]

ಮೌದ್ಗಲಿ :—ಪ್ರಿಯದರ್ಶಿ ಮಹಾರಾಜ !

ಕಂ|| ಸಲೆ ಸಾಣೆವಿಡಿದ ಮಣಿವೊಲ್ |
ವಲ ಮೆಸೆದುದು ತಪ್ತಕಾಂಚನಂ ಬೊಲ್ ಧರ್ಮಂ |
ಎಲೆ ಸಾರ್ವಭೌಮ ಕರಮು |
ಜ್ವಲತತ್ವಮನೆಲ್ಲತಿರೆಯೊಳಂ ಬಿತ್ತರಿಸಾ ||೯೫||

ಅಶೋ :—ಮಹಾಗುರು ! ಧರ್ಮವನ್ನು ಲೋಕದಲ್ಲೆಲ್ಲಾ ಹಬ್ಬಿಸಲು ಏನು ಮಾಡಬೇಕು ?

---

* ಉಪ್ವಾಹಿಕಾ (ಸಂ- ಉದ್ವಾಹಿಕಾ) ಭಿಕ್ಷುಸಂಘದಿಂದ ಬಹಿಷ್ಕಾರಹಾಕುವುದು.

† ಧರ್ಮಸಂಗೀತಿ :—ಮಹಾಸಭೆಗಳಲ್ಲಿ ಧರ್ಮಾನುವಾದವನ್ನು ಸಂಗೀತವಾಗಿಯೇ ಹೇಳುವ ರೂಢಿಯಿದ್ದಿತು.

ಮೌದ್ಗಲಿ :—ಮಹಾರಾಜ ! ಭಗವಂತನಾದ ಬುದ್ಧದೇವನು ಲೋಕವನ್ನು ಉದ್ಧರಿಸಲು ತನ್ನ ಶಿಷ್ಯರನ್ನು ಕುರಿತು ಹೀಗೆ ಹೇಳಿದನು:—"ಚರಥ ಭಿಕ್ಖವೇ ಚಾರಿಕಂ; ಬಹುಜನಹಿತಾಯ, ಬಹುಜನಸುಖಾಯ, ಲೋಕಾನುಕಂಪಾಯ, ಅತ್ಥಾಯ, ಹಿತಾಯ, ಸುಖಾಯ, ದೇವಮನುಸ್ಸಾನಂದೇಸೇಥ. ಭಿಕ್ಖವೇಧಮ್ಮಂ, ಪರಿಶುದ್ಧಂ. ಬ್ರಹ್ಮಚರ್ಯಂ, ಪಕಾಸೇಥ" ["ಎಲೈ ಭಿಕ್ಷುಗಳೇ ! ನೀವು ಮನುಷ್ಯರ ಹಿತಕ್ಕಾಗಿ, ಮಂಗಳಕ್ಕಾಗಿ, ಸುಖಕ್ಕಾಗಿ, ಜಗತ್ತಿನ ಸಲುವಾಗಿ, ದೇವ ಮನುಷ್ಯರ ಸಲುವಾಗಿ ದಯಾವಶರಾಗಿ ದೇಶದೇಶಗಳಲ್ಲಿ ಸಂಚಾರಮಾಡಿರಿ ; ನನ್ನ ಧರ್ಮವನ್ನು ಪ್ರಚಾರಗೊಳಿಸಿರಿ ; ಮತ್ತು ಎಲ್ಲ ಕಡೆಯಲ್ಲಿಯೂ ಪರಿಶುದ್ಧವಾದ ಬ್ರಹ್ಮಚರ್ಯವನ್ನು ನೆಲೆಗೊಳಿಸಿರಿ"] ಎಂದು

ಮಹಾರಾಜನೆ ! ನೀನು ಇದೇ ಕ್ರಮವನ್ನನುಸರಿಸಿ ಧರ್ಮಪ್ರಚಾರ ಮಾಡು !

ವೃ|| ಚರಿಸುಗೆ ! ಧರ್ಮಬೋಧಕ ಮಹಾವಿಬುಧಾವಳಿಯೆತ್ತಲೆತ್ತಲುಂ |
ಸುರುಚಿರಮಂಗಳಂ ಬಜೆಗೆ ! ಬುದ್ಧನನಾಶ್ರಯದಿಂದ ಲೋಕಮುಂ |
ಪರಮದಯಾಪ್ರಕಾಶಮುರುಸತ್ಯವಿಲಾಸಮದೇಳ್ಗೆವೆತ್ತು ತಾಂ |
ಮೆರೆಗೆ! ಮಹೀಧರೇಂದ್ರ! ಗುಣಸಾಂದ್ರ! ನಿರಂತರಧರ್ಮಸಾಗರಾ ||೯೫||

ಮತ್ತು ಅನುಷ್ಠೇಯವಾದ ನಿಯಮಗಳನ್ನು ಶಾಸನಗಳಲ್ಲಿ ಕೆತ್ತಿಸಿ ಜನಗಳ ಕಣ್ಣಿಗೆ ಬೀಳುವ ಎಲ್ಲಾ ಕಡೆಗಳಲ್ಲಿಯೂ ಸ್ಥಾಪಿಸು ; ಧರ್ಮರಕ್ಷಣಾರ್ಥವಾಗಿ ಅಧಿಕಾರಿಗಳನ್ನು ನಿಯಮಿಸು ; ಇದಕ್ಕಾಗಿಯೇ ನಿನಗೆ ಚಕ್ರವರ್ತಿತ್ವವು ಸಂಪ್ರಾಪ್ತವಾಗಿರುವುದು.

ಅಶೋ :—[ವಿನಯದಿಂದ] ಮಹಾಗುರುವಿನ ಆಜ್ಞೆಯಂತೆ. ಅಮಾತ್ಯರಾಧಾಗುಪ್ತ ! ಧರ್ಮಪ್ರಚಾರಾರ್ಥವಾಗಿ ಶಾಸನಗಳನ್ನು ಸಿದ್ಧಗೊಳಿಸು. ಅವುಗಳಲ್ಲಿ ಹೀಗೆ ಬರೆಯಲ್ಪಡಲಿ :—

ವೃ|| ಬಿಡುವುದು ಜೀವಹಿಂಸೆಯನೆ ಮೈತ್ರಿಯ ನೆಲ್ಲಯುಮಾಂತು ಮೋದಮಂ |
ಪಡೆವುದು ಲೋಕದಲ್ಲಿ ಪರಧರ್ಮಸಹಿಷ್ಣುತೆ ನಿತ್ಯಮಂಗಳಂ |
ಕೊಡುವುದು ಸಾಧುಗಳ್ಗೆ ನಲೆ ಶಾಂತಿಯ ನಾಂಪುದು ಧರ್ಮದೀಕ್ಷೆಯಂ |
ಪಿಡಿವುದು ಲೋಕಸೇವೆಯೊಳಗಾಗಲು ಮರ್ಪಿಪುದಾತ್ಮಮಂ ಕರಂ ||೯೬||

ಇಂತಹ ಶಿಲಾಶಾಸನಗಳನ್ನು ಎಲ್ಲೆಲ್ಲಿಯೂ ಪ್ರತಿಷ್ಠೆಗೊಳಿಸು ; ಇರುವೆ

ಮೊದಲುಗೊಂಡು ಆನೆಯವರೆಗಿನ ಎಲ್ಲಾ ಪ್ರಾಣಿಗಳೂ ಎಳ್ಳಷ್ಟು ಜೇನೆಪಡುವು ದನ್ನೂ ಪ್ರಿಯದರ್ಶಿಯು ಸಹಿಸಲಾರನು. ಪ್ರಾಣಿಹಿಂಸಾನಿವಾರಣಶಾಲೆಗಳು, ಚಿಕಿತ್ಸಾಲಯುಗಳು ಇವುಗಳನ್ನು ಎಲ್ಲಾ ಕಡೆಗಳಲ್ಲಿಯೂ ಏರ್ಪಡಿಸು ; ಮತ್ತು ಧರ್ಮಾನುಷ್ಠಾನವನ್ನು ಅಭಿವೃದ್ಧಿಗೊಳಿಸಲು ಧರ್ಮಮಹಾಮಾತ್ರರೆಂಬ ಅಧಿ ಕಾರಿಗಳನ್ನು ನಿಯಮಿಸು.

ರಾಧಾ :—ಪ್ರಭುವಿನ ಆಜ್ಞೆಯಂತೆ ಎಲ್ಲವನ್ನೂ ಮಾಡುವೆನು.

ಮೌದ್ಗಲಿ :—ಮಹಾರಾಜ! ನಿನ್ನ ದೇಶದಲ್ಲಿ ಮಾತ್ರವಲ್ಲದೆ ದೇಶದೇಶಗಳಲ್ಲಿ ಧರ್ಮವು ಹಬ್ಬಿ ಆನಂದವು ನೆಲೆಗೊಳ್ಳುವಂತೆ ಏರ್ಪಾಡುಗಳನ್ನು ಮಾಡಿ ಸುವುದು ಬಹು ಶ್ರೇಯಸ್ಕರವು !

ಅಶೋ :—ಪೂಜ್ಯರ ಆಜ್ಞೆಯಂತಾಗಲಿ ! ಸಿಂಹಳ ದೇಶಾಧಿಪತಿಯಾದ ದೇವ ಪ್ರಿಯ ತಿಷ್ಯಮಹಾರಾಜನು ನನಗೆ ಪರಮಮಿತ್ರನಾಗಿ ಧರ್ಮಬೋಧಕ ರನ್ನು ಕಳುಹಿಸಬೇಕೆಂದು ಕೇಳಿಕೊಂಡಿರುವನು. ಆದುದರಿಂದ ಮಹೇಂ ದ್ರನೂ ಸಂಘಮಿತ್ರೆಯೂ, ಸಿಂಹಳದ್ವೀಪಕ್ಕೆ ಪ್ರಯಾಣಮಾಡಿ, ಭಿಕ್ಕು ಭಿಕ್ಕುಣೀಸಂಘವನ್ನು ನೆಲೆಗೊಳಿಸಲಿ.

ಮಹಾಸ್ಥವಿರ ಮಜ್ಝಂತಿಕಾಚಾರರು ಕಾಶ್ಮೀರ ಗಾಂಧಾರ ದೇಶಗಳಿಗೆ ಧರ್ಮಪ್ರಚಾರಾರ್ಥವಾಗಿ ಹೋಗಬೇಕೆಂದು ಪ್ರಾರ್ಥಿಸುವೆನು.

ಸ್ಥವಿರ ಮಹಾದೇವ ಸ್ವಾಮಿಗಳೆ! ತಾವು ಮಹಿಷಮಂಡಲವನ್ನು ಅನು ಗ್ರಹಿಸಬೇಕು ; ರಕ್ಷಿತಾಚಾರ್ಯರೆ! ಬನವಾಸಿಯ ಪ್ರಾಂತವು ತಮ್ಮ ಪಾದಧೂಳಿ ಯಿಂದ ಕಲ್ಯಾಣವನ್ನೊಂದಲಿ; ಮಹಾ ಧರ್ಮರಕ್ಷಿತರೆ! ಮಹಾರಾಷ್ಟ್ರದ ಮಂಗಳವು ತಮಗೆ ಸೇರಿದುದು ; ಮಹಾರಕ್ಷಿತಸ್ವಾಮಿಗಳೆ ! ತಾವು ಯವನ ದೇಶಕ್ಕೆ ದಯೆಮಾಡಿಸೋಣವಾಗಲಿ : ಸ್ಥವಿರ ಮಜ್ಝಮಕಾಶ್ಯಪ ಸ್ವಾಮಿಗಳು ಹಿಮಾಲಯ ಪ್ರದೇಶಗಳಲ್ಲಿ ಧರ್ಮತತ್ವಗಳನ್ನು ಹರಡಲಿ ; ಸೋನಾಚಾರ್ಯರೂ, ಉತ್ತರಾಚಾರ್ಯರೂ ಸುವರ್ಣಭೂಮಿಯನ್ನು ಪವಿತ್ರಮಾಡಲಿ.

ಮಹಾತ್ಮರೆ! ತಾವು ಆಯಾಯ ಸ್ಥಳಗಳಲ್ಲಿ ಆಚಾರ್ಯರಾಗಿ ನೆಲಸಿ ಧರ್ಮ ವನ್ನು ಉದ್ಧರಿಸೋಣವಾಗಲಿ. ಪ್ರಪಂಚವೆಲ್ಲವನ್ನೂ ಅಮೃತಮಯವನ್ನಾಗಿ ಮಾಡೋಣವಾಗಲಿ.

ಭಿಕ್ಷುಗಳು :—ಸಾರ್ವಭೌಮನ ಸಾಧುವಾದ ಉದ್ದೇಶಕ್ಕೆ ಮಂಗಳವುಂಟಾಗುವುದು.

ಮೌದ್ಗಲಿ :—ಮಹಾರಾಜ! ಧರ್ಮವು ಉದ್ಧಾರವಾಯಿತು; ಭರತಖಂಡವು ಪವಿತ್ರವಾಯಿತು; ಲೋಕವು ಧನ್ಯವಾಯಿತು.

ಅಶೋ :—ಎಲ್ಲವೂ ಗುರುಚರಣಾನುಗ್ರಹವೇ ಸರಿ!

[ಎಲ್ಲರೂ ಹೊರಡುವರು]

ಇದು ಷಷ್ಠಾಂಕಂ.

ಸಪ್ತಮಾಂಕವು.

[ರಾಜಪುತ್ರನಾದ ಕುನಾಲನು ಚತುರಿಕೆಯೊಡನೆ ಪ್ರವೇಶಿಸುವನು]

ಚತುರಿಕೆ :—ಯುವರಾಜನು ಹೀಗೆ ದಯೆಮಾಡಿಸಬೇಕು.

ಕುನಾಲ :—ಚತುರಿಕೆ! ಪೂಜ್ಯಳಾದ ನಮ್ಮ ಮಲತಾಯಿ ತಿಷ್ಯರಕ್ಷಿತಾದೇಯು ನನ್ನನ್ನು ಕರೆಯೆಕಳುಹಿಸಿದ ಕಾರಣವೇನಿರಬಹುದು.

ಚತುರಿಕೆ :—ಕುಮಾರ! ಮಹಾರಾಣಿಯವರು ಏಕೋ ದೇಹದಲ್ಲಿ ಸ್ವಲ್ಪ ಅಸ್ವಸ್ಥರಾಗಿರುವರು: ಮನೋಹರವಾದ ನಿನ್ನ ಕೊಳಲಿನ ಗಾನವನ್ನು ಕೇಳಿ ಆತ್ಮಕ್ಕೆ ಶಾಂತಿಯನ್ನುಂಟುಮಾಡಿಕೊಳ್ಳಬೇಕೆಂದು ಅಪೇಕ್ಷಿಸುವರು.

ಕುನಾಲ :—ಪೂಜ್ಯಳಾದ ಮಾತೆಯ ಮನಸ್ಸಿಗೆ ಆನಂದವನ್ನುಂಟುಮಾಡುವುದೇ ನನಗೆ ಶ್ರೇಯಸ್ಕರವಾದುದು. ಚತುರಿಕೆ! ಮಾತೃಶ್ರೀಯವರ ಆಜ್ಞೆಯನ್ನು ತಲೆಯಲ್ಲಿ ತಾಳಿದೆನು; ನಡೆ! ಅವರಿರುವ ಸ್ಥಳವನ್ನು ತೋರಿಸು.

ಚತುರಿಕೆ :—ಇದೊ ಇದೊ! ಈ ಉದ್ಯಾನದಲ್ಲಿ ವಿಶ್ರಾಂತಿಯನ್ನು ಹೊಂದುತ್ತಿರುವರು. [ಇಬ್ಬರೂ ಉದ್ಯಾನವನ್ನು ಪ್ರವೇಶಿಸುವರು]

[ಅನಂತರ ಉದ್ಯಾನವನದಲ್ಲಿ ತಿಷ್ಯರಕ್ಷಿತೆ ಪ್ರವೇಶಿಸಿ]

ತಿಷ್ಯರಕ್ಷಿತೆ :—[ವಿರಹತಾಪದಿಂದ]

ವೃ|| ಎಲೆ ಕಂಜಾಸ್ತ್ರ ಕಿರಾತನೇ! ತರವಿದೇಂ? ಮಾಣ್! ಮಾಣ್!! ಮಹಾಪಲ್ಲವೋ|
ಜ್ವಲಬಾಣಂಗಳಿನುರ್ಚದಿರ್ ಹೃದಯಮಂ; ಮೇಣ್ ಕೊಲ್ಲದಿರ್ ಕೊಲ್ಲದಿರ್!
ಛಲದಿಂ ನಿರ್ದಯನಾಗಿ ನೀಂ ಪ್ರಮದೆಯಂ ಘಾತಿಪ್ಪೊಡೇಂ ಪೇಳ್ ಫಲಂ?
ಕೊಲೆಯುಂ ದುಷ್ಟಜನಕ್ಕೆ ನಾಡೆ ಜನದಂ ಬೇಡೆಂದೊಡೇಂ ಮಾಣ್ಪರೇ ||

ಚತುರಿಕೆ :—ಮಹಾರಾಣಿಯವರು ವಿಜಯಿಸಲಿ ! ಇದೋ ಕುನಾಲಕುಮಾರ ನನ್ನು ಕರೆದುತಂದಿರುವೆನು.

ತಿಷ್ಯರಕ್ಷಿತೆ :—ಒಳ್ಳೆಯದು ; ನೀನು ನನ್ನ ರಾಜಶುಕದ ಯೋಗಕ್ಷೇಮವನ್ನು ನೋಡು ಹೋಗು.

ಚತುರಿಕೆ :—ಅಪ್ಪಣೆ [ಎಂದು ಹೊರಡುವಳು]

ಕುನಾಲ :—[ಪ್ರವೇಶಿಸಿ] ಮಾತೆಯೆ ! ನಮಸ್ಕರಿಸುವೆನು.

ತಿಷ್ಯರಕ್ಷಿತೆ : —[ಶೃಂಗಾರ ಲಜ್ಜೆಯನ್ನು ಅಭಿನಯಿಸಿ ಪೀಠದಿಂದೆದ್ದು]
ಯುವರಾಜನೆ! ಜಯಶೀಲನಾಗು ; ಈ ಪೀಠವನ್ನಲಂಕರಿಸು.

ಕುನಾಲ :—ಮಾತೆ! ನಿನಗೆ ಆಯಾಸವು ಬೇಡ; ಅಸ್ವಸ್ಥಳಾಗಿರುವ ನೀನು ವಿಶ್ರಾಂತಿಯನ್ನು ಹೊಂದು.

ತಿಷ್ಯ :—ಕುನಾಲ ! ನನ್ನ ಆಯಾಸಪರಿಹಾರಕ್ಕೆ ನಿನ್ನ ಸಹಾಯವು ಬೇಕು.

ಕುನಾಲ :—ಮಾತೆ ! ಪಾದಸೇವೆಯಿಂದ ಕೃತಾರ್ಥನಾಗಲು ಸಿದ್ಧನಾಗಿರುವೆನು. ಈ ವೇಣುಗಾನದಿಂದ ತಮ್ಮ ಅಂತರಂಗದ ಬೇಸರವು ಹೋಗುವುದೆ? [ಕೊಳಲನ್ನು ಬಾಜಿಸುವನು].

ತಿಷ್ಯ !—ಕಂ|| ನಿನ್ನಯ ಮೃದುತರಗಾನಂ |
ನಿನ್ನ ಕೊಳಲ್ದನಿಗೆಸಂದ ಚಾತುರ್ಯಂ ಮೇಣ್ |
ನಿನ್ನಯತಾರುಣ್ಯಂ ಕರ |
ಮೆನ್ನ ಮನಂಗೊಂಡು ನಲ್ಮೆವೆರ್ಚಿಪುದಲ್ತೇ ||೯೯||

ಕುನಾಲ :—ಮಾತೆಯಪ್ರೀತಿಗೆ ಪಾತ್ರನಾದ ನಾನು ಧನ್ಯನು.

ತಿಷ್ಯ :—[ಕುನಾಲನನ್ನು ನೋಡಿ, ದಿಗ್ಭ್ರಾಂತಳಾದಂತೆ ನಟಿಸಿ] ಕುನಾಲ, ನಿನ್ನ ಅಸದೃಶವಾದ ಸೌಂದರ್ಯಕ್ಕೆ ತಕ್ಕ ಸ್ತ್ರೀಯು ಯಾರಿರುವಳೆಂದು ಚಿಂತಿಸುವೆನು.

ಕುನಾಲ :—ಮಾತೆ! ನಶ್ವರವಾದ ಸೌಂದರ್ಯದಿಂದ ಪ್ರಯೋಜನವೇನು?

ತಿಷ್ಯ :—ಕುನಾಲನೆ! ಇರಲಿ! ಪುರುಷರಲ್ಲಿ ಅಸಮಾನ ಸೌಂದರ್ಯಶಾಲಿಯೆಂದು ನಿನ್ನನ್ನು ನಾನು ಎಣಿಸಿರುವೆನು : ಸ್ತ್ರೀಯರಲ್ಲಿ ಸೌಂದರ್ಯವತಿಯಾರೆಂದು ನೀನು ಎಣಿಸಿರುವೆ? ನಿನ್ನಿಂದ ಒಪ್ಪಲ್ಪಟ್ಟ ನಾರೀರತ್ನವು ತ್ರಿಲೋಕ ಮಾನ್ಯವೆಂದು ಭಾವಿಸುವೆನು.

ಕುನಾಲ :—ಮಾತೆಯೆ ! ತಾಯಿಯಂತೆಯೂ, ಸಹೋದರಿಯರಂತೆಯೂ, ಭಾವಿಸಬೇಕಾದ ಪರಸತೀಮಣಿಯರ ಸೌಂದರ್ಯವನ್ನು ಬಣ್ಣಿಸುವುದು ಮಹಾಪಾಪವೆಂದು ಭಾವಿಸಿರುವೆನು.

ತಿಷ್ಯ :—ಕುನಾಲನೆ! ಲೋಕದಲ್ಲಿ ಅತ್ಯಂತ ಚಲುವೆಯೆಂದು ನನ್ನ ಕನ್ನಡಿಯು ನನ್ನನ್ನು ಸಂಪ್ರ್ಮನೆ ಹೊಗಳುತ್ತಿರುವುದು. ನಿಷ್ಪಕ್ಷಪಾತಬುದ್ಧಿಯಿಂದ ನೀನೂ ಅದನ್ನೇ ಸಮರ್ಥಿಸುವೆಯಾದರೆ ನನ್ನ ರೂಪಕ್ಕೆ ನಿಜವಾದ ಪ್ರಾಶಸ್ತ್ಯವುಂಟಾಗುವುದು.

ಕುನಾಲ :—ಮಾತೆಯೆ ! ಈ ವಿಮರ್ಶೆಯಿಂದ ಫಲವೇನೋ ಕಾಣೆನು ; ಗುಣಕ್ಕಿಂತಲೂ ಸೌಂದರ್ಯವೇ ಮೇಲೆಂಬುದು ಅಜ್ಞರ ಭಾವನೆ!

ತಿಷ್ಯ :—ಕುನಾಲ ! ಅದಿರಲಿ ! ನನ್ನನ್ನು ಚೆನ್ನಾಗಿ ನೋಡಿರುವೆಯಾ ? ನಾನು ನಿನ್ನ ಕಣ್ಣಿಗೆ ಹೇಗೆ ಕಾಣಿಸುತ್ತಿರುವೆನು ?

ಕುನಾಲ :—ಮಾತೆ ! ನಿಮ್ಮ ಪಾದದರ್ಶನವು ನನ್ನ ಹೃದಯದಲ್ಲಿ ಭಕ್ತಿರಸವನ್ನು ಉಕ್ಕಿಸುತ್ತ ಪರದೇವತೆಯ ಸನ್ನಿಧಿಯಲ್ಲಿರುವೆನೆಂಬ ಭಾವನೆಯನ್ನೇ ಉಂಟುಮಾಡುತ್ತಿರುವುದು.

ತಿಷ್ಯ :—ಕುನಾಲ ! ನಿನ್ನ ಮಾತನ್ನೇ ನೀನು ಆಡುತ್ತಿರುವೆ ! ನನ್ನ ಅಂತರಂಗದ ವ್ಯಾಕುಲವನ್ನು ಕಳೆದವನಾಗಲಿಲ್ಲವಲ್ಲ ! ನಾನು ನಿನಗೆ ತಕ್ಕ ಸುಂದರಿ ಅಹುದೆ? ಅಲ್ಲವೆ ಹೇಳು !

ಕುನಾಲ :—[ಕಿವಿಮುಚ್ಚಿ] ಪಾಪವು ಶಾಂತವಾಗಲಿ ! ಮಾತೆ ! ನಿನ್ನ ಈ ಪ್ರಶ್ನೆಯು ಕರ್ಣಶೂಲದಂತಿರುವುದು.

ತಿಷ್ಯ :—ಕುನಾಲ ! ಹೋಗಲಿ ! ಆ ಮಾತನ್ನು ಬಿಡು ! ನೀನು ಕುಶಲಕಲಾನಿಪುಣನಷ್ಟೆ ? ನಾನು ಅನುರಕ್ತರಾದ ದಂಪತಿಗಳ ಚಿತ್ರವೊಂದನ್ನು ಬರೆದಿರುವೆನು ; ಅದನ್ನು ನೀನು ನೋಡಿ ಗುಣದೋಷಗಳನ್ನು ತಿಳಿಸುವೆಯಾ ? [ಎಂದು ಚಿತ್ರವೊಂದನ್ನು ಕೈಗೆ ಕೊಡುವಳು]

ಕುನಾಲ :—[ನೋಡಿ ಅಸಹ್ಯದಿಂದ] ಛೀ ! ಛೀ ! ಇದು ಪ್ರೇಕ್ಷಣೀಯವಾದ ಚಿತ್ರವಲ್ಲ ! ತಿಷ್ಯರಕ್ಷಿತಾದೇವಿಯು ಸಮೀಪದಲ್ಲಿ ಕುನಾಲನಿರುವಂತೆ ಚಿತ್ರಿಸಿರುವುದು ! ಕುನಾಲನು ಪೂಜ್ಯಳಾದ ಮಲತಾಯಿಯ ಪಾದಕ್ಕೆ ಸಾಷ್ಟಾಂಗ ನಮಸ್ಕಾರಮಾಡುತ್ತಿದ್ದಂತೆ ಚಿತ್ರಿಸಿದ್ದರೆ ನೋಡಬಹುದಾಗಿ

ದ್ದಿತು! [ಬೇರೊಂದುಕಡೆಗೆ ತಿರುಗಿಕೊಂಡು ಚಿತ್ರವನ್ನು ಹಿಂದಕ್ಕೆ ತಳ್ಳುವನು]

ತಿಷ್ಯ:—ಕುನಾಲ! ನಿನ್ನನ್ನು ನಾನು ಇದುವರೆಗೂ ಅಭಿಜ್ಞನೆಂದು ಭಾವಿಸಿದ್ದೆನು! ನೀನು ಅನುರಾಗದ ಆಳವನ್ನೇ ತಿಳಿದವನಾಗಲಿಲ್ಲ!

ಕುನಾಲ:—[ಆತ್ಮ] ಈಕೆಯು ಪಾಪಾಶಯಳಾಗಿರುವಂತೆ ತೋರುವುದು! ಇನ್ನು ಇಲ್ಲಿರುವುದು ಸರಿಯಲ್ಲ. [ಪ್ರಕಾಶ] ಮಾತೆಯೇ! ನನಗೆ ಹೊರಡಲು ಅನುಜ್ಞೆಯನ್ನು ಕೊಡು.

ತಿಷ್ಯ:—ಪ್ರಿಯನೇ! ನನ್ನ ಆಯಾಸವನ್ನು ಕಳೆಯದೆ ಹೋಗಬಹುದೆ?

ಕುಸುಮಷಟ್ಪದಿ || ಬಾರೊ! ಮೋಹನರೂಪ |
ಬಾರೊ! ನೃಪಕುಲದೀಪ |
ಬಾರೊ! ನಾಂ ಸ್ಮರತಾಪನ್ಕೈನೆನೋಪ||

ಕುನಾಲ:— ಸಾರು, ಸಾರೆಲೆ ಮಾತೆ |
ಘೋರಪಾಪವಿದಲ್ತೇ |
ಮೀರುವರೆ ಸನ್ನೀತಿಪದಮನಂತು ||೧೦೦||

ತಿಷ್ಯ:— ಕಾಪಾಡು! ಸುಂದರಾ |
ಕಾಪಾಡು! ಚಂದಿರಾ |
ಕಾಪಾಡು ಬೇಡುವೆನು ಮದನರೂಪ |

ಕುನಾಲ:— ಈಪರಿಯೊಳಾಡಿ, ಸಂ |
ತಾಪಗೊಳಿಪುದದೇಕೆ |
ನೃಪನುಳಿವರೆತಾಯೆ? ತರವೆ? ಸದಯೆ ||೧೦೧||

ತಿಷ್ಯ:— ನಳಿನಶರಘಾತುಕ ನಿ |
ನಳಿವುದೆನ್ನಯ ಹರಣ |
ವುಳಿಯಿಸೈ ಕರುಣಾಳು! ಮಣಿವೆನಿಂದು |

ಕುನಾಲ:— ಉಳಿದು ಧರ್ಮವನಂತು |
ತುಳಿದು ನಿಜಕೀರ್ತಿಯನು |
ಪಳಿದುಸೌಶೀಲ್ಯವನು ನುಡಿಯಲಹುದೇ ||೧೦೨||

ತಿಷ್ಯ :—ಕುನಾಲ! ನನ್ನನ್ನು ಏಕೆ ತಿರಸ್ಕರಿಸುವೆ? ನಿನ್ನ ತಾಯಿಯಾದ ಅಸಂಧಿಮಿತ್ರೆಯು ಕಾಲಗತಿಯನ್ನು ಹೊಂದಲು ಚಕ್ರವರ್ತಿಯು ನನ್ನನ್ನೇಕೆ ಪಾಣಿಗ್ರಹಣಮಾಡಿಕೊಂಡನು? ನನ್ನೀ ತಾರುಣ್ಯವನ್ನು ಏಕೆ ಅರಣ್ಯಚಂದ್ರಿಕೆಗೆಣೆಮಾಡಿದನು? ನೀನಾದರೂ ನನಗೆ ಆಲಂಬನವಾಗದಿದ್ದರೆ ನನ್ನ ಗತಿಯೇನು?

ಕುನಾಲ:—[ಅಸಹ್ಯದಿಂದ] ಮಾತೆ! ನಿನ್ನ ದುಷ್ಪ್ರವರ್ತನೆಯು ನನ್ನ ಮನಸ್ಸನ್ನು ತಕಮಳನೆ ಕುದಿಸುತ್ತಿರುವುದು. ಅಯ್ಯೋ! ನಾನು ಇಲ್ಲಿಗೆ ಕಾಲಿಟ್ಟುದೇ ಅನುಚಿತವಾಯಿತು.

ತಿಷ್ಯ :—ಸುಂದರಾಂಗನೆ! ನಿನ್ನ ಹೃದಯವೇಕೆ ಕಲ್ಲಾಗಿರುವುದು? ಇಲ್ಲವೇ ಕುರೂಪಿಣಿಯೆಂದು ನನ್ನನ್ನು ತಿರಸ್ಕರಿಸುವೆಯೋ? ನಿನ್ನ ಚಿತ್ತವನ್ನು ಆಕರ್ಷಿಸಲು ಇನ್ನೆಂತಹ ಉಡುಗೆತೊಡುಗೆಗಳಿಂದ ಅಲಂಕೃತಳಾಗಲಿ? ಹೇಳು.

ಕುನಾಲ :—ಅಮ್ಮಾ! ನನಗೆ ಹಿತಕರವಾದಂತಹ ಒಂದಲಂಕಾರವನ್ನು ಮಾತ್ರ ನೀನು ಧರಿಸು!

ತಿಷ್ಯ :—[ಸಂತೋಷದಿಂದ] ಮನೋಹರ! ಈ ನುಡಿಯಿಂದ ನೀನು ನನ್ನನ್ನು ಅನುಗ್ರಹಿಸಿದಂತೆ ಎಣಿಸುವೆನು; [ಎಂದು ಆತುರದಿಂದ] ಹೇಳು ಹೇಳು! ನಾನು ಯಾವ ಸಿಂಗರವನ್ನು ಅಳವಡಿಸಿಕೊಳ್ಳಲಿ?

ಕುನಾಲ :—ಪೂಜ್ಯಳೆ!

ಕಂ|| ಕಂದುವ ಸೊಬಗೇತಕೆ? ಮೇಣ್ |
ಕುಂದುವ ಸಿಂಗರವದೇಕೆ? ಪೇಳೆಲೆತಾಯೇ!
ಚಂದದೊಳೆಂದೆಂದಿಗುಮಳಿ |
ವೊಂದದ ಸೌಶೀಲ್ಯವೆಂಬ ತೊಡವಂ ಧರಿಸಾ ||೧೦೩||

ತಿಷ್ಯ :—[ಮುಖವನ್ನು ತಿರುಗಿಸಿ] ಸಾಕು! ಸಾಕು! ನಿನ್ನ ಉಪದೇಶವು!

ಕುನಾಲ :—ಅಮ್ಮಾ ಪೂಜ್ಯಳಾದ ನಿನಗೆ ಉಪದೇಶಿಸುವುದಕ್ಕೆ ನಾನೆಷ್ಟರವನು? ಮಾತೆಯಾದ ನಿನ್ನ ಸದುಪದೇಶದಿಂದ ನಾನು ಕೃತಾರ್ಥನಾಗಲರ್ಹನು!

ತಿಷ್ಯ:—ಹಾಗಾದರೆ ಅನಂಗದರ್ಪವನ್ನು ಭಂಗಿಸುವುದಕ್ಕೆ ನನಗೆಸಹಾಯಕನಾಗು

ಕುನಾಲ :—[ಕಿವಿಮುಚ್ಚಿ] ಅಕಟಕಟಾ! ಪಾಪವು ಶಾಂತವಾಗಲಿ! ಮಾತೆ.

ನಿನ್ನ ಕರ್ಕಶವಾದ ನುಡಿಗಳನ್ನು ಕೇಳುವ ನನ್ನ ಕಿವಿಗಳು ಕಿವುಡಾಗಿದ್ದರೆ ಚೆನ್ನಾಗಿದ್ದಿತು.

ತಿಷ್ಯ :—ಕುನಾಲ! ಕಡೆಗೂ ನನ್ನ ಕೋರಿಕೆಯನ್ನು ನಿರರ್ಥಕವಾಡುವೆಯಾ? ಛೀ! ಛೀ! ನಿರ್ಭಾಗ್ಯನೆ! ನಿನ್ನ ಅನುಪಮವಾದ ಸೌಂದರ್ಯವನ್ನು ಹೊರ ಸೂಸಿ, ನನ್ನನ್ನು ಮೋಹಗೊಳಿಸಿದ ನಿನ್ನ ಕಣ್ಣುಗಳು ಹಾಳಾಗಲಿ! [ಕೋಪಿಸಿಕೊಳ್ಳುವಳು]

ಕುನಾಲ :— ಅಮ್ಮಾ! ನಿನಗೆ ಪಾಪದಲ್ಲಿ ಅಭಿರುಚಿಯನ್ನುಂಟುಮಾಡಿದ ಮತ್ತು ನನಗೆ ಪಾಪವನ್ನು ಸಂಘಟಿಸಿದ ನನ್ನ ಕಣ್ಣುಗಳು ಹಾಳಾಗಲಿ! ನಿನ್ನ ನಡತೆಯು ಪವಿತ್ರವಾದುದಾದರೆ ಸಂತೋಷ!

ತಿಷ್ಯ :—ಛೀ! ಛೀ! ಪಾಪಿಯೇ! ತೊಲಗು! ತೊಲಗು! ದೇಶಭ್ರಷ್ಟನಾಗಿ ಹೋಗು ನನ್ನ ಕಣ್ಣಿಗೆ ಬೀಳದಂತೆ ಎಲ್ಲಿಯಾದರೂ ಹಾಳಾಗಿಹೋಗು.

ಕುನಾಲ :—ಮಾತೆಯೆ ನನ್ನನ್ನು ಕ್ಷಮಿಸು! [ಎಂದು ನಮಸ್ಕರಿಸಿ ಹೊರಡುವನು]

ತಿಷ್ಯ :—ಹಾ! ನಿರ್ಘೃಣ! ನಿರ್ಭಾಗ್ಯ! ದ್ರೋಹಿ! ನನ್ನ ಆಸೆಯನ್ನು ಬಯಲು ಮಾಡಿದೆಯಾ? ಪಾಪಿಯೇ! ನಿನ್ನ ಕಣ್ಣುಗಳನ್ನು ಕೀಳಿಸಿ, ನಿನ್ನ ಚೆಲುವನ್ನು ಹಾಳುಮಾಡದೆ ಬಿಡುವೆನೆ?

[ಚಿಂತಿಸುತ್ತ ಹೊರಡುವಳು].

[ಅನಂತರ ಕಂಚುಕಿಯೊಬ್ಬನು ಪ್ರವೇಶಿಸಿ]

ಕಂಚುಕಿ :—ಕಂ|| ಕಡುದಂಡಿಸುತುಂ ನರರವ |
ನೊಡೆಯನ ಕಜ್ಜಗಳ ಗೆಯ್ದು ಮೆಯ್ಗರೆನಸ್ಸಿತಂ |
ನಡುಗುತುಮಾತನ ಕಿನಿಸಿಂ |
ದೊಡಲಂ ಪೊರೆವೀ ಕುವೃತ್ತಿಯಮಮಾ ಕಷ್ಟಂ ||೧೨||

ನಮ್ಮಂತಹವರ ಬಾಳು ಬಾಳಲ್ಲ! ಇನ್ನು ಅಂತಃಪುರದ ಬಾಗಿಲನ್ನು ಕಾಯುವುದಕ್ಕೆ ಹೋಗಬೇಕು. [ಅನಂತರ ಚತುರಿಕೆ ಒಂದು ಕಾಗದವನ್ನು ಹಿಡಿದುಕೊಂಡು ಪ್ರವೇಶಿಸಿ]

ಚತುರಿಕೆ :—ವಿಜಯವರ್ಮ!

ಕಂಚುಕಿ :—ಏನಮ್ಮ ಅದು! ವಿಜಯವರ್ಮನಿಗೆ?

ಚತುರಿಕೆ:—ಏನೂ ಇಲ್ಲ! ಮಹಾರಾಣಿಯವರ ಆಜ್ಞೆಯಾಗಿದೆ.

ಕಂಚುಕಿ:—ಸರಿ ಸರಿ! ಇದ್ದೇ ಇದೆ. ಮಹಾರಾಣಿಯವರ ಆಜ್ಞೆ ಇರಲಿ; ನಿಮ್ಮಾಜ್ಞೆ ಮೊದಲಾಗಲಿ.

ಚತುರಿಕೆ:—ನಿನಗೆ ಆಜ್ಞೆಯನ್ನು ಕೊಡಲು ನನಗೇನು ಅಧಿಕಾರವುಂಟು?

ಕಂಚುಕಿ:—ಇಲ್ಲದೇ ಏನು? ಅರಮನೆಯಲ್ಲಿ ಸ್ವಲ್ಪ ಓಡಾಡಿದ ಮಾತ್ರಕ್ಕೇ ಅಧಿಕಾರಮದವು ಎಂತಹವರಿಗೂ ತಲೆಗೇರಿ ಬಿಡುವುದು.

ಅದೇನೋ ಅಪ್ಪಣೆಯಾಗಲಿ!

ಚತುರಿಕೆ:—ವಿಜಯವರ್ಮ! ನೀನೀಗ ತಕ್ಷಶಿಲೆಗೆ ಹೋಗಿಬರಬೇಕಾಗುವುದು.

ಕಂಚುಕಿ:—ತಕ್ಷಶಿಲೆಗಾಗಲೀ, ಫಾಲಾಕ್ಷಶೈಲಕ್ಕಾಗಲೀ, ಅಪ್ಪಣೆಯಾದ ಮೇಲೆ ಹೋಗಲೇಬೇಕು. ಆಮೇಲೆ?

ಚತುರಿಕೆ:—ಯುವರಾಜನಾದ ಕುನಾಲನು ಚಕ್ರವರ್ತಿಗಳವರಿಂದ ತಕ್ಷಶಿಲೆಯ ಪ್ರತಿನಿಧಿಯಾಗಿ ನಿಯಮಿಸಲ್ಪಟ್ಟಿರುವುದು, ನಿನಗೆ ತಿಳಿದಿರುವುದಷ್ಟೆ?

ಕಂಚುಕಿ:—ಅದನ್ನೇನೂ ಹೇಳಬೇಕಾದುದಿಲ್ಲ; ನಾನು ಮಾಡಬೇಕಾದುದೇನು?

ಚತುರಿಕೆ:—ನಿನ್ನ ಕೆಲಸವಿಷ್ಟೆ! ಈ ಪತ್ರವನ್ನು ಈಗಲೇ ತೆಗೆದುಕೊಂಡು ಹೋಗಿ ಕೊಟ್ಟುಬರುವುದು.

ಕಂಚುಕಿ:—[ತಲೆಯಲ್ಲಾಡಿಸಿ] ಇಷ್ಟೇ ತಾನೆ! ಇದು ಬಹು ಸುಲಭವು. [ಪತ್ರವನ್ನು ಕೈಗೆ ತೆಗೆದುಕೊಳ್ಳುವನು]

ಚತುರಿಕೆ:—ಸುಲಭವೋ! ಕಷ್ಟವೋ! ಬೇಗನೆ ಹೋಗಿ ಬಾ; ನಿನಗೆ ಬಹುಮಾನವು ಸಿಕ್ಕುವುದು.

ಕಂಚುಕಿ:—ಬಂದಮೇಲೆ ಬಹುಮಾನವಿರಲಿ! ಈಗ ದಾರಿಯ ವೆಚ್ಚಕ್ಕೇನಾದರೂ ಉಂಟೋ?

ಚತುರಿಕೆ:—ಅದು ನನಗೆ ಸಂಬಂಧಿಸಿದ ವಿಷಯವಲ್ಲ.

ಕಂಚುಕಿ:—ಇದು ಮಾತ್ರ ಸಂಬಂಧಿಸಿದ ವಿಷಯವಲ್ಲ! ಅಲ್ಲದೆ ಇದ್ದರೆ ಹೋಗಲಿ: ಹೊಟ್ಟೆಯಮೇಲೆ ಒದ್ದೆಯ ಬಟ್ಟೆಯನ್ನು ಹಾಕಿಕೊಂಡು ಹೋಗಿಬರುತ್ತೇನೆ.

ಚತುರಿಕೆ:—ಒದ್ದೆಯ ಬಟ್ಟೆಯೇಕೆ? ಮನೆಯಲ್ಲಿ ನಿನ್ನ ಹೆಂಡತಿಗೆ ಹೇಳಿ ರೊಟ್ಟಿಯ ಬುತ್ತಿಯನ್ನು ಕಟ್ಟಿಸಿಕೊಂಡು ಹೋಗು.

ಕಂಚುಕಿ:—ಅರಮನೆಯ ಪರಮಾನ್ನದಿಂದ ಕೊಬ್ಬಿರುವವರಿಗೆ ರೊಟ್ಟಿಯ ಬುತ್ತಿ ಜ್ಞಾಪಕ ಬಂದುದು ಹೆಚ್ಚು! ಆಗಲಿ ಹೋಗಿಬರುವೆನು. [ಎಂದು ಹೊರಡುವನು]

[ಅನಂತರ ಕುನಾಲನು ಆಸ್ಥಾನದಲ್ಲಿ ಮಂತ್ರಿಯೊಡನೆ ಪ್ರವೇಶಿಸುವನು].

ದೌವಾರಿಕಂ:—[ಪ್ರವೇಶಿಸಿ] ಯುವರಾಜನು ವಿಜಯಿಸಲಿ! ಪಾಟಲೀಪುತ್ರದಿಂದ ಕಂಚುಕಿಯೊಬ್ಬನು ಸಂದೇಶಪತ್ರದೊಡನೆ ಸಮಯವನ್ನು ನಿರೀಕ್ಷಿಸುತ್ತಿರುವನು.

ಕುನಾಲ:—[ಸಂತೋಷದಿಂದ] ಆಹಾ! ಚಕ್ರವರ್ತಿಯ ಸಂದೇಶವೆ! ಆತನನ್ನು ಒಳಕ್ಕೆ ಬಿಡು.

ದೌವಾರಿಕಂ:—[ಹಾಗೆ ಮಾಡುವನು]

ಕಂಚುಕಿ:—ಯುವರಾಜನು ವಿಜಯಿಸಲಿ. [ನಮಸ್ಕರಿಸಿ, ಪತ್ರವನ್ನು ಕೊಡುವನು]

ಕುನಾಲ:—[ನೋಡಿ] ಇದು ತಂದೆಯ ಮುದ್ರಾಂಕಿತವಾದ ಪತ್ರವು; ಇದನ್ನು ಶಿರಸಾವಹಿಸುವೆನು. [ಒಡೆದು ನೋಡಿ ಗಾಬರಿಯಿಂದ] ಆಹಾ! ಇದೇನು! ನಾನು ಕಣ್ಣು ಕೀಳಿಸಿಕೊಂಡು ರಾಜ್ಯಭ್ರಷ್ಟನಾಗಬೇಕೆಂದು ಚಕ್ರವರ್ತಿಯ ಆಜ್ಞೆಯಾಗಿರುವುದು!

ಮಂತ್ರಿ:—ಎಲ್ಲಿ ಎಲ್ಲಿ! [ಪತ್ರವನ್ನು ತೆಗೆದುಕೊಂಡು ನೋಡಿ] ಆಹಾ! ಇದೆಂತಹ ಆಜ್ಞೆ? ಯಾವುದೊಂದು ಕಾರಣವೂ ಇಲ್ಲದೆ ಸಾರ್ವಭೌಮನು ಹೀಗೆ ಆಜ್ಞೆಮಾಡಿರುವನೆ? [ಚಿಂತಿಸುವನು]

ಕುನಾಲ:—ಮಂತ್ರಿಯೆ! ಹೇಗಾದರೂ ಆಗಲಿ, ತಂದೆಯ ಆಜ್ಞೆಯನ್ನು ನೆರವೇರಿಸಲೇ ಬೇಕು.

ಮಂತ್ರಿ:—ಯುವರಾಜ! ಏನೊಂದು ಒಕ್ಕಣೆಯೂ ಇಲ್ಲದೆ ಅಸ್ಫುಟವಾದ ಅಕ್ಷರಗಳುಳ್ಳ ಪತ್ರವು ಏನೋ ಕೃತ್ರಿಮವಾದುದಾಗಿರಬೇಕು.

ಕುನಾಲ :—[ಆತ್ಮ] ನನ್ನ ಮಲತಾಯಿಯಾದ ತಿಷ್ಯರಕ್ಷಿತಾದೇವಿಯ ಕೈತವ ವಿಕಟಮುದೆ? ನನ್ನ ಕಣ್ಣುಗಳನ್ನು ಕೀಳಿಸುವೆನೆಂದು ಪ್ರತಿಜ್ಞೆಮಾಡಿದ್ದವಳು ಆಕೆಯೇ!

[ಪ್ರಕಾಶ.] ಮಂತ್ರಿಯೆ! ತನ್ನ ಮುದ್ರಾಂಕಿತವಾದ ಆಜ್ಞೆಗಳನ್ನು ಪಾಲಿಸತಕ್ಕದೆಂದು ಸಾರ್ವಭೌಮನು ನನಗೆ ವಿಧಿಸಿರುವನು; ಆದುದರಿಂದ ಇದು ಶಿರೋಧಾರ್ಯವು.

ಕಂ|| ಧರೆಯೊಳ್ ಬಹು ದುರಿತಕ್ಕಾ |
ಕರಮೆನಿಸುವ ಕಣ್ಗಳಿಂದೆ ಅಳಿಗೆಮ ! ಭರದಿಂ |
ಪರಮಾರ್ಥಸುಖದಮೆನಿಸುವ |
ಸುರುಚಿರ ಸುಜ್ಞಾನಚಕ್ಷು ತೆರೆವುದು ನಿಸದಂ ||೧೦೬||

ಮಂತ್ರಿ :—ಯುವರಾಜ! ನಿಮ್ಮ ಉದಾತ್ತತೆಯು ಅಸಾಧಾರಣವಾದುದು. ಇದು ದಯಾಳುವಾದ ಚಕ್ರವರ್ತಿಯ ಆಜ್ಞೆ ಆಹುದೋ ಅಲ್ಲವೋ? ವಿಮರ್ಶೆಮಾಡತಕ್ಕುದಾಗಿರುವುದು

ಕುನಾಲ :—ಬೇಡ! ಬೇಡ! ಗುರ್ವಾಜ್ಞೆಯು ವಿಮರ್ಶೆಗೆ ತಕ್ಕುದಲ್ಲ.

ಕಂ|| ಕೆನ್ನೆಗೆ ಪೊಡೆದಣುಗಂ ಗೊ |
ಳ್ವಿಂ ನೆರೆ ಪಾಲ್ಗುಡಿಸುವಂತೆ ನನಗನುವಿಂದಂ |
ಇನ್ನೀಶಿಕ್ಷಾವಿಧಿಯಿಂ |
ನನ್ನುತಪರಮಾರ್ಥಬೋಧೆಗೆಯ್ವರೆ? ಗುರುಗಳ್ ||೧೦೭||

ಆದುದರಿಂದ ನಾನೀಶಿಕ್ಷೆಯನ್ನು ಸಂತೋಷದಿಂದ ಅನುಭವಿಸುವೆನು; ಚಂಡಾಲರನ್ನು ಬೇಗನೆ ಬರಮಾಡತಕ್ಕುದು.

ಮಂತ್ರಿ :—ಅಕಟಕಟಾ! ಗುಣಾಢ್ಯನಾದ ಯುವರಾಜನಿಗೆ ಇಂತಹ ದಂಡನೆಯೆ!

ಕುನಾಲ :—ಮಂತ್ರಿಯೆ! ಈ ವಿಷಯದಲ್ಲಿ ಸ್ವಲ್ಪವೂ ದುಃಖಿಸಬಾರದು. ಇನ್ನೀ ಅಧಿಕಾರಪದವು ನನಗುಚಿತವಲ್ಲ: ನೀವೆಲ್ಲರೂ ಸಮಾಧಾನದಿಂದ ನನಗನುಜ್ಞೆಯನ್ನು ಕೊಡಿ. [ಎದ್ದು ಹೊರಡಲನುವಾಗುವನು]

ಮಂತ್ರಿ :—ಅಯ್ಯೋ! ಅಯ್ಯೋ! ಇದನ್ನು ನಾವು ಹೇಗೆ ಸಹಿಸುವೆವು! [ದುಃಖಿಸುವನು]

ಕುನಾಲ :—ಮಂತ್ರಿಯೆ! ನನ್ನಿಂದ ಯಾವುದೋ ಅಪರಾಧವು ನಡೆದಿರುವುದರಿಂದಲೇ ಸಾರ್ವಭೌಮನು ಹೀಗೆ ವಿಧಿಸಿರುವನು. ಅಪರಾಧಕ್ಕೆ ತಕ್ಕ ದಂಡನೆಯನ್ನು ಅನುಭವಿಸಲೇಬೇಕು. [ಹೊರಡುವನು] [ಎಲ್ಲರೂ ಹೊರಡುವರು]

[ಅನಂತರ ಕುನಾಲನು ಕಯ್ಯಲ್ಲಿ ಶಸ್ತ್ರವನ್ನು ತೆಗದುಕೊಂಡು ಚಂಡಾಲನೊಡನೆ ಅರಣ್ಯದಲ್ಲಿ ಕಾಣಿಸಿಕೊಳ್ಳುವನು.]

ಕುನಾಲ :—ಮಿತ್ರ! ವೀರಬಾಹುವೆ! ಇದೋ ಈ ಶಸ್ತ್ರದಿಂದ ನನ್ನ ಕಣ್ಣುಗಳನ್ನು ಕಿತ್ತುಬಿಡು.

ಚಂಡಾಲ :—ಅಯ್ಯೋ! ಅಯ್ಯೋ! ಯುವರಾಜ! ಇಂತಹ ಕೆಟ್ಟಕೆಲಸವನ್ನು ನಾನೆಂದಿಗೂ ಮಾಡಿದವನಲ್ಲವಲ್ಲ!

ಕುನಾಲ :—ಎಲೈ ಶಾಂತಹೃದಯ! ನೀನೇಕೆ ವಿಷಣ್ಣನಾಗುವೆ? ಈ ಮಾಂಸಪಿಂಡಗಳನ್ನು ನೀನು ಕೀಳದೆ ಇದ್ದರೆ ನಾನೇ ಆದರೂ ಕಿತ್ತುಕೊಳ್ಳುವೆನು. ನನ್ನನ್ನು ಉದ್ಧರಿಸಿದ ಪುಣ್ಯವು ನಿನಗೆ ಇರಲಿ; ಎಲ್ಲಿ ಬೇಗನೆ ಇವುಗಳನ್ನು ತೆಗೆದುಬಿಡು. [ಶಸ್ತ್ರವನ್ನು ಕೊಡುವನು]

ಚಂಡಾಲ :—[ದುಃಖದಿಂದ] ಅಯ್ಯೋ! ನಾನೇನು ಮಾಡಲಿ! ರಾಜಪುತ್ರ! ರಾಜ್ಯವಿಲ್ಲದಿದ್ದರೆ ಹೋಗಲಿ; ಕಣ್ಣುಗಳಿದ್ದರೆ ತಿರುಪವನ್ನಾದರೂ ಬೇಡಿ ಬದುಕಬಹುದು. ಈ ಅನ್ಯಾಯವಾದ ರಾಜ್ಯದಲ್ಲಿರಬೇಡ; ಎಲ್ಲಿಗಾದರೂ ದೂರವಾಗಿ ಹೋಗಿಬಿಡು! ಬದುಕು!

ಕುನಾಲ :—ಅಯ್ಯಾ! ಕರುಣಾಳುವೆ! ನಿನಗೆ ಬಹು ಕೃತಜ್ಞನಾಗಿರುವೆನು; ಈ ಕಣ್ಣುಗಳನ್ನು ಕೀಳು.

ಚಂಡಾಲ :—[ಅಳುತ್ತ] ಯುವರಾಜ! ಹೇಗೆ ಕೀಳಲಿ? ನನ್ನ ಕಯ್ಯೇ ಬಾರದಲ್ಲ!

ಕುನಾಲ :—ಮಿತ್ರ! ಎಲ್ಲಿ ಶಸ್ತ್ರ? [ಎಂದು ತೆಗೆದುಕೊಂಡು] ಇದೊ ಈ ಕಣ್ಣನ್ನು ನಾನೇ ಕಿತ್ತುಕೊಂಡಿರುವೆನು [ಕಿತ್ತು] ವೀರಬಾಹು! ಮತ್ತೊಂದನ್ನಾದರೂ ವಿಲಂಬಿಸದೆ ಕಿತ್ತುಹಾಕುವೆಯಾ?

ಚಂಡಾಲ :—[ದುಃಖದಿಂದ] ಅಯ್ಯೋ! ನಾನೆಂತಹ ಪಾಪಿಯು! [ಎಂದು ಮತ್ತೊಂದು ಕಣ್ಣನ್ನು ಕಿತ್ತು] ಹಾಹಾ! [ಎಂದು ನೆಲಕ್ಕೆ ಬೀಳುವನು]

ಕುನಾಲ :— ಎಲೈ ಸುಹೃದಯನೆ! ಅಳಬೇಡ!

ಕಂ|| ಪರಮಾನಂದವನೊಂದಿದೆ |
ನರರೇ! ದಲ್ ಪುಣ್ಣಳೆಸಿಪ ಕಣ್ಗಳಿವಳಿಯಲ್ |
ಗುರುಗಳನುಗ್ರಹದಿಂ ಸಲೆ |
ಧರೆಯೊಳ್ ಸಂಚರಿಸಿ ತಿರಿಯುತೊಡಲಂ ಪೊರೆವೆಂ ||೧೦೮||

ಅಯ್ಯಾ! ಸಜ್ಜನಶಿರೋಮಣಿಯೆ! ದಯೆಯಿಟ್ಟು ನನ್ನ ಪತ್ನಿಯಾದ ಕಾಂಚನಮಾಲೆಯನ್ನು ಇಲ್ಲಿಗೆ ಬರಮಾಡುವೆಯಾ?

ಚಂಡಾಲ :—[ಅಳುತ್ತ] ಅಯ್ಯೋ! ಮಹಾರಾಯ ನಿಮ್ಮ ಉಪ್ಪತಿಂದು ಬಳೆದ ನಾನು ಅಷ್ಟನ್ನಾದರೂ ಮಾಡಲಾರೆನೆ? [ಎಂದು ಹೋಗಿ ಕರೆದುತಂದು] ಅಮ್ಮಾ! ಹೀಗೆ ಬರಬೇಕು.

ಸ್ವಾಮಿ ಇದೊ ತಮ್ಮ ಹೆಂಡತಿಯನ್ನು ಕರೆತಂದಿರುವೆನು.

ಕುನಾಲ :—ಪ್ರಿಯೆ! ಕಾಂಚನಮಾಲೆ! ಎಲ್ಲಿರುವೆ? ಎಲ್ಲಿಯಾದರೂ ಹೊರಟು ಹೋಗೋಣ; ಅಂಧನಾದ ನನಗೆ ದಾರಿಯನ್ನು ತೋರಿಸು.

ಕಾಂಚನಮಾಲೆ :—[ಪತಿಯನ್ನು ನೋಡಿ] ಹಾ! ಪ್ರಾಣಕಾಂತನೆ! ಈ ದುರವಸ್ಥೆಯೇನು?

ಕುನಾಲ :— ಪ್ರಿಯೆ! ಸಾರ್ವಭೌಮನ ಆಜ್ಞೆಯಂತೆ ಕಣ್ಣುಗಳು ಕೀಳಲ್ಪಟ್ಟಿವೆ; ಅಕಾರಣದಿಂದಲೇ ರಾಜ್ಯಭ್ರಷ್ಟನಾಗಿರುವೆನು.

ಕಾಂಚನ :—[ಅಳುತ್ತ] ಹಾ! ಹಾ! ಆರ್ಯಪುತ್ರ! ಮುಂದೇನುಗತಿ?

ವೃ|| ಗುರುಪಾದಂಗಳ ಕಂಡೊಡಂ ಮಣಿಯದೇಂ ನೀನಂಧನಂತಿರ್ದೆಯೋ? |

ಕುನಾಲ :—ಪ್ರಿಯೆ! ನಾನು ಎಂದಿಗಾದರೂ ಹಾಗೆ ಉಪೇಕ್ಷಿಸೆನೆಂಬುದು ನಿನಗೆ ತಿಳಿಯದೆ?

ಕಾಂಚನ :—ದುರಿತಂಗೊಂಡೆಯೊ? ಕಂಡು ಮೋಹಿಸಿ, ಪರಸ್ತ್ರೀರತ್ನಸೌಂದರ್ಯಮಂ |

ಕುನಾಲ:—ಕುನಾಲನು ಅಂತಹ ಪಾಪಕ್ಕೆಂದಿಗೂ ಅವಕಾಶಕೊಡುವವನಲ್ಲ.

ಕಾಂಚನ:—ಧರೆಯೊಳ್ ತ್ವತ್ಪ್ರಜೆಮಾಳ್ಪ ದುಷ್ಕೃತಿಯ ಕಂಡುಂ ಕಾಣದಂತಿರ್ದೆಯೋ!

ಕುನಾಲ:—ಕಾಂಚನಮಾಲೆ! ಅಂತಹ ಅಧರ್ಮವು ನನ್ನ ರಾಜ್ಯದಲ್ಲಿಯೇ ಇಲ್ಲ.

ಕಾಂಚನ:—ಅರರೇ! ಪಾತಕಮಾವುದರ್ಕಿದು ಫಲಂ? ಪೇಳೆಂತು ನಾಂ ಸೈಸವೆಂ ||೧೦೯||

ಕುನಾಲ:—ಪ್ರೇಯಸಿ! ನನ್ನ ಅಪರಾಧವಿಂತಹುದೆಂಬುದನ್ನು ನನ್ನ ಮನಸ್ಸೇ ತಿಳಿಯದಾಗಿರುವುದು; ನೀನು ಚಿಂತಿಸಬೇಡ; ಎಲ್ಲಿಯಾದರೂ ಒಡಲನ್ನು ಹೊರೆದುಕೊಳ್ಳುವ. ಯುವರಾಜ್ಞಿಯಾದ ನಿನಗೂ ನನ್ನ ನಿಮಿತ್ತವಾಗಿ ಕಷ್ಟವೊದಗಿದುದಕ್ಕೆ ಚಿಂತಿಸುವೆನು.

ಕಾಂಚನ:—ಅಯ್ಯೋ! ಪ್ರಾಣೇಶ್ವರ! ಅಂಧನಾದ ನೀನು ಹೇಗೆ ಜೀವನವನ್ನು ಸಂಪಾದಿಸುವೆ?

ಕುನಾಲ:—ಕಾಂಚನಮಾಲೆ! ಬೇರೆ ಮಾರ್ಗವೇನಿರುವುದು? ನನಗೆ ಬಾಲ್ಯದಿಂದಲೂ ಅಭ್ಯಾಸವಿರುವ ಕೊಳಲನ್ನು ಬಾಜಿಸಿ ಜೀವನಕ್ಕೆ ಸಂಪಾದಿಸುವೆನು.

ಕಾಂಚನ:—ಅಕ್ಕಟಾ! ಸಾರ್ವಭೌಮನ ಪುತ್ರನಿಗೀಗತಿಯೆ! ಹಾ! [ನಿಟ್ಟುಸಿರ್ ಬಿಡುತ್ತ] ಆ ಕೆಟ್ಟ ವಿಧಿಯು ತನ್ನ ಅಧಿಕಾರವನ್ನು ಎಲ್ಲೆಲ್ಲಿಯೂ ತೋರಿಸುವುದು. [ಚಿಂತಿಸುತ್ತ] ಆರ್ಯಪುತ್ರನೆ! ಬಾ! ಹೋಗುವ. [ಎಂದು ಕಯ್ಯನ್ನು ಹಿಡಿದು ಕರೆದುಕೊಂಡು ಹೋಗುವಳು]

[ಅನಂತರ ಅಶೋಕನೂ, ತಿಷ್ಯರಕ್ಷಿತೆಯೂ ಚಂದ್ರಿಕೆಯನ್ನು ಅನುಭವಿಸುತ್ತ, ಚಂದ್ರಶಾಲೆಯನ್ನು ಪ್ರವೇಶಿಸುವರು]

ಅಶೋ:—ಪ್ರಿಯೆ! ಈ ಸುಧಾಂಶುವಿನ ಕೀರ್ತಿಯನ್ನು ಕೊಂಡಾಡುವೆನು. ಏತಕ್ಕೆಂದರೆ:—

ಕಂ|| ಮಿಗೆ ಸೌಮ್ಯಾಂಶುಗಳಿಂದಂ |
ಜಗಕೆಲ್ಲಂ ಸುಧೆಯನೂಸಿ ಮುದಮೊಡರಿಸುವಂ |
ಮೃಗಧರನೇಂ ಮಾನ್ಯನೊ! ಸಾ |
ಧುಗಳೆಂದುಂ ಲೋಕಸೇವೆಯಿಂ ಚರಿತಾರ್ಥರ್ ||೧೧೦||

ತಿಷ್ಯರಕ್ಷಿತೆ :—ಆರ್ಯಪುತ್ರನೆ! ಅಮೃತಕಿರಣನಾದ ಈ ನಿಶಾನಾಥನಲ್ಲಿಯೂ ಸ್ವಲ್ಪ ಕಳಂಕವಿರುವುದಲ್ಲ!

ಅಶೋ :—ಇದ್ದರೇನು? ತನ್ನ ಅಲ್ಪವಾದ ಕಳಂಕವನ್ನು ತಾನೇ ಲೋಕಕ್ಕೆ ಪ್ರಕಟಿಸಿ, ಪರಿಶುದ್ಧನೆಂದೆನ್ನಿಸಿಕೊಂಡಿರುವನು; ಮತ್ತು ದೋಷಾಕರನೆಂದು ತನ್ನನ್ನು ಹಿಯ್ಯಾಳಿಸಿದವರಿಗೂ ತನ್ನ ಅಮೃತಕಿರಣಗಳ ಸುಖವನ್ನು ಯಥೇಚ್ಛವಾಗಿ ದಾನಮಾಡಿ, ಕೃತಾರ್ಥನಾಗಿರುವನು; ಇದಲ್ಲವೆ ಸತ್ಪುರುಷರ ಲಕ್ಷಣವು.

ತಿಷ್ಯರಕ್ಷಿತೆ :—ಆರ್ಯಪುತ್ರನೆ! ಈತನ ಶಾಂತತೆಯು ಸ್ತೋತ್ರಾರ್ಹವಾದುದು; ಇಂತಹವನನ್ನೂ ವೃದ್ಧಿಕ್ಷಯಗಳು ಪೀಡಿಸುವುವಲ್ಲಾ!

ಅಶೋ :- ಪ್ರೇಯಸಿ! ಲೋಕದಲ್ಲಿ ಸಿರಿತನ ಬಡತನಗಳು ಪರಿವರ್ತನಕ್ರಮದಿಂದ ಎಲ್ಲರನ್ನೂ ಅನುಸರಿಸುವುವು; ಇದರಲ್ಲಿ ಆಶ್ಚರ್ಯವೇನು?

[ತೆರೆಯಲ್ಲಿ ಕೊಳಲಿನ ಶಬ್ದವಾಗುವುದು]

ಅಶೋ :—[ಕೇಳಿ ಆನಂದಿಸಿ] ಆಹ! ಎಂತಹ ಮಧುರವಾದ ಗಾನ?

ಕಂ॥ ಸೊದೆಯಂ ಸೂಸುತೆ ಕರ್ಣದೆ ।
ಹೃದಯದೊಳಾನಂದರಸವನುರ್ವಿಸುತುಂ ಮೇಣ್ ।
ಪುದಿದೀವೇಣುನಿನಾದಂ ।
ಪದುಳದೆ ತಾನಾರಮನವನಾಕರ್ಷಿಸದೋ? ॥೧೧೧॥

ಪ್ರಿಯೆ! ಈ ಸಂಗೀತದ ಸವಿಯನ್ನು ಅನುಭವಿಸುವೆಯಾ! ಇದು ನಮ್ಮ ಸುಕುಮಾರನಾದ ಕುನಾಲನ ವೇಣುವಾದನದಂತೆ ಇರುವುದಲ್ಲವೆ? ಬಹು ದಿನಗಳ ಹಿಂದೆ ನನ್ನನ್ನು ಆನಂದಗೊಳಿಸಿದ್ದ ಆತನ ಕಲಾಪ್ರೌಢಿಮೆಯು ಇಂದು ನನ್ನ ಮನಸ್ಸಿಗೆ ಜ್ಞಾಪಕ ಬರುತ್ತಿದೆ.

ತಿಷ್ಯ :—[ಅಸೂಯೆಯಿಂದ] ಲೋಕದಲ್ಲಿ ಒಬ್ಬರಿಗಿಂತ ಮತ್ತೊಬ್ಬರಲ್ಲಿ ಚಾತುರ್ಯವು ಮಿಗಿಲಾಗಿಯೇ ಇರುವುದು.

ಅಶೋ :—ಒಳ್ಳೆಯದು; ವೇತ್ರವತಿ! ಹೊರಗೆ ವೇಣುವಾದನವನ್ನು ಮಾಡುವವರು ಯಾರೋ ನೋಡು.

ವೇತ್ರ :—ಅಪ್ಪಣೆ [ಎಂದು ಹೋಗಿ ನೋಡಿ ಬಂದು] ಮಹಾಪ್ರಭು! ಯಾರೋ ಒಬ್ಬ ಕುರುಡನು ಕೊಳಲನ್ನು ಬಾಜಿಸಿ ತಿರುಪವನ್ನು ಬೇಡುತ್ತಿರುವನು.

ಅಶೋ :—ಏನು ಕುರುಡನು ತಿರುಪನೆತ್ತುತ್ತಿರುವನೆ? ಪಾಪ! [ಮರುಕವನ್ನು ಅಭಿನಯಿಸಿ] ಆತನನ್ನು ಇಲ್ಲಿಗೆ ಕರೆದುಕೊಂಡು ಬಾ.

ತಿಷ್ಯ :—[ಅಸಮಾಧಾನದಿಂದ] ಚಕ್ರವರ್ತಿಗಳವರು ಆ ಕುರುಡನನ್ನು ಇಲ್ಲಿಗೇ ಏತಕ್ಕೆ ಬರಮಾಡಬೇಕು? ತಿಂಡಿಗೆ ಏನನ್ನಾದರೂ ಕೊಟ್ಟು ಕಳುಹಿಸಿದರೆ ಆಯಿತು.

ಅಶೋ :—ಆಃ! ಪ್ರಿಯದರ್ಶಿಯ ರಾಜ್ಯದಲ್ಲಿಯೂ ವಿಕಲಾಂಗರ ವಿಷಯದಲ್ಲಿ ಅನಾದರವುಂಟೆ? ವೇತ್ರವತಿ! ಬೇಗನೆ ಆತನನ್ನು ಇಲ್ಲಿಗೆ ಕರೆದುಕೊಂಡು ಬಾ.

ವೇತ್ರ :—ಅಪ್ಪಣೆ [ಎಂದು ಹೋಗಿ ಕರೆತರುವಳು] [ಕುನಾಲನು ತನ್ನ ಕುಮಾರನಾದ ಸಂಪದಿಯ ಸಹಾಯದಿಂದ ನಡೆದು, ರಾಜನ ಸನ್ನಿಧಿಗೆ ಬರುವನು.]

ಕುನಾಲ :—ಮಹಾಪ್ರಭು! ಈ ಅನಾಥನು ವಂದಿಸುವನು. [ನಮಸ್ಕರಿಸುವನು]

ಅಶೋ :—[ಕರುಣದಿಂದ] ಎಲೈ ವಿನೀತನೆ! ಇಲ್ಲಿ ಬಾ! ಕುಳಿತುಕೋ. [ಎಂದು ಸಮೀಪದಲ್ಲಿ ಕೈ ಹಿಡಿದು ಕುಳ್ಳಿರಿಸಿಕೊಂಡು] ಅಯ್ಯಾ! ನಿನ್ನ ವೇಣುವಾದನಚಾತುರ್ಯವು ಅಸಾಧಾರಣವಾದುದು.

ಕುನಾಲ :—ಪ್ರಭುಗಳವರಿಗೆ ಕೇಳುವ ಆಸೆಯಿದ್ದರೆ ನಾನು ಕೃತಾರ್ಥನು!

[ಎಂದು ವೇಣುವನ್ನು ಬಾಜಿಸುವನು]

ಅಶೋ :—[ಹಾಗೆಯೇ ಕುನಾಲನನ್ನು ಚೆನ್ನಾಗಿ ನೋಡುತ್ತ] ಇದೇನು? ಇವನು ರೂಪಿನಲ್ಲಿಯೂ ನಮ್ಮ ಕುನಾಲನನ್ನೇ ಹೋಲುತ್ತಿರುವನು! ಮೈದಡವಿ] ಎಲೈ! ಯಾಚಕನೆ! ನಿನ್ನ ವಾದನವು ಸಾಕು; ಬಹು ಸಂತೋಷವಾಯಿತು. ಅಯ್ಯ! ನೀನು ಯಾರು? ನಿನಗೆ ಕಣ್ಣುಗಳು ಹೋಗಲು ಕಾರಣವೇನು?

ಕುನಾಲ :—ಮಹಾಪ್ರಭುವಿನ ಸನ್ನಿಧಿಯಲ್ಲಿ ಅಪರಾಧಿಯಾದ ನಾನು ಕ್ಷಮೆಯನ್ನು ಬೇಡುತ್ತಿರುವೆನು; ಸಾರ್ವಭೌಮನು ನನ್ನ ಕಣ್ಣುಗಳ ವಿಷಯದಲ್ಲಿ ಮಾಡಿದ್ದ ಆಜ್ಞೆಯನ್ನು ಮರೆತಿರುವಂತೆ ತೋರುವುದು.

ಅಶೋ :—[ಆಲೋಚನಾಗ್ರಸ್ತನಾಗಿ] ಎಲೈ! ನಿನ್ನ ವಿಷಯದಲ್ಲಿ ನನ್ನ ಆಜ್ಞೆಗೆ ಕಾರಣವೇನೂ ಇಲ್ಲವಲ್ಲ.

ಕುನಾಲ:—ಸಾರ್ವಭೌಮನು ತನ್ನ ಪುತ್ರನಾದ ಕುನಾಲನ ಕಣ್ಣು ಕೀಳಿಸುವ ಆಜ್ಞೆಮಾಡಿದುದನ್ನು ಸ್ಮರಿಸಿಕೊಂಡು ಈಗಲಾದರೂ ಆ ನಿರ್ಭಾಗ್ಯನನ್ನು ಕ್ಷಮಿಸಲಿ!

ಅಶೋ :—[ಭ್ರಾಂತನಾಗಿ] ಇದೇನು? ಕುನಾಲನು ನೀನೆಯೋ? ನಿನ್ನ ಕಣ್ಣುಗಳನ್ನು ನಾನೇ ಕೀಳಿಸಿರುವೆನೆ? ಅಯ್ಯೋ! ನನ್ನ ದುರ್ದೈವವಷ್ಟೇನೆನ್ನಲಿ! ಹಾಹಾ!

[ಎಂದು ಮೂರ್ಛಿತನಾಗಿ ಬಿದ್ದೆದ್ದು]

ಕಂ|| ಸುಕುಮಾರನೆ! ನಿನ್ನಂದವ|
ನಕಟಕಟಾ! ಪೆಚಿಸುತ್ತು ವಿದಾರ್ವಿಲಸ||
ದ್ವಿಕಸಿತ ಸಾರಸನಿಭದಂ|
ಬಕಯುಗ್ಮಮದಳಿಯೆ ನೋಳ್ಪೆನೆಂತೀಮುಖಮಂ ||೧೧೨||

[ಎಂದು ಕುನಾಲನನ್ನಾಲಂಗಿಸಿ] ಹಾ! ಸುಕುಮಾರ! ನೀನೆಂದಿಗೂ ನನಗೆ ಅವಿಧೇಯತೆಯನ್ನು ತೋರಿದವನಲ್ಲವಲ್ಲ! ನನ್ನ ಹೆಸರಿನಿಂದ ಯಾರೋ ಈ ಮೋಸಕೃತ್ಯವನ್ನು ಮಾಡಿರುವಂತೆ ತೋರುವುದು; ಅಯ್ಯೋ! ಅಯ್ಯೋ! ದುರ್ಗತಿಯೇ! [ಕಣ್ಣೀರು ಸುರಿಸಿ]

ವೃ|| ಸೈರಿಪೆನೆಂತೊ! ನನ್ನೆರ್ದೆಯ ಚುರ್ಚುವ ಶೋಕಮನಕ್ಕಟಕ್ಕಟಾ|
ವಾರಿಪೆನೆಂತೊ ಬಾಲಕನ ದುಸ್ಥಿತಿಯಂ ನಡೆ ನೋಳ್ಪೆನೆಂತುಟೋ?||
ದಾರುಣಕಾರ್ಯಮಂ ನೆಗಳ್ದಪಾಪಿಯದಾವನೊ? ಕಾಣ್ಪೆನೆಂತುಟೋ|
ಘೋರಕಿರಾತನಂ ಪಿಡಿದು ದಂಡಿಪೆನೆಂತುಟೊ ಬಾಳ್ವೆನೆಂತುಟೋ ||೧೧೩||

[ಅಳುತ್ತ] ಕುನಾಲ! ಪತ್ರವನ್ನು ಚೆನ್ನಾಗಿ ನೋಡಿದೆಯಾ? ನನ್ನ ಆಜ್ಞೆಯೆಂದು ಹೇಗೆ ತಿಳಿದೆ? ಯಾವ ಅಪರಾಧವು ನಿನ್ನ ಮೇಲೆ ಹೊರಿಸಲ್ಪಟ್ಟಿದ್ದಿತು?

ಕುನಾಲ:—ತಮ್ಮ ಮುದ್ರೆಯಿಂದ ಅಂಕಿತವಾಗಿದ್ದುದರಿಂದ ತಮ್ಮ ಆಜ್ಞೆಯೆಂದು ತಿಳಿದೆನು; ನನ್ನ ಅಪರಾಧವಿಂತಹುದೆಂದು ಅದರಲ್ಲಿ ಕಾಣಿಸಿರಲಿಲ್ಲ.

ಅಶೋ :—ವತ್ಸ! ಕುನಾಲ! ನಾವಿಬ್ಬರೂ ಮೋಸಹೋದೆವು; ಮಾಡುವುದೇನು? [ನಿಟ್ಟುಸಿರುಬಿಡುವನು]

ಕುನಾಲ:—ತಂದೆಯೆ! ದುಃಖಿಸುವುದೇಕೆ? ನಮ್ಮ ಮಲತಾಯಿಯಾದ ತಿಷ್ಯ ರಕ್ಷಿತಾದೇವಿಗೆ ದಯೆಯಿಟ್ಟು ನನ್ನನ್ನು ಕಾಣಿಸಿರಿ! ಆಕೆಯ ಆಜ್ಞೆಯಂತೆ ನಾನು ಕಣ್ಣುಕೀಳಿಸಿಕೊಂಡಿರುವುದನ್ನು ನೋಡಿ ಸಂತೋಷಿಸಲಿ!

ಅಶೋ:—[ದುಃಖವನ್ನೂ, ಕೋಪವನ್ನೂ ಅಭಿನಯಿಸಿ] ಆಃ! ಈ ನೀಚಳು ನಿನ್ನ ಕಣ್ಣುಗಳನ್ನು ಕೀಳಿಸಿದವಳೆ? [ಕೋಪದಿಂದ ತಿಷ್ಯರಕ್ಷಿತೆಯನ್ನು ನೋಡುವನು].

ತಿಷ್ಯ:—[ಗಡಗಡನೆ ನಡುಗುತ್ತ] ಆರ್ಯಪುತ್ರನೆ! ಕಾಪಾಡು! ಕಾಪಾಡು! [ಎಂದು ಪಾದದಲ್ಲಿ ಬೀಳುವಳು].

ಅಶೋ:—ಮಾಲಿನೀ

ವೃ|| ಛಡ! ಛಡ! ಛಡ! ದುಷ್ಟೇ! ರಕ್ಕಸೀ! ಛೀ ಕಠೋರೇ!
ಪೆಡವಿಯೊಳಿರದೆನ್ನಂ ಕೊಂದ ಪಾಪಾತ್ಮಳೇ ನೀಂ |
ಮಡದಿಯೆ? ಛಡ! ಮೂಢೇ ಕಾಳಸರ್ಪೋಪಮಾನೇ |
ಸುಡು! ಸುಡು! ಸುಡು! ನಿನ್ನೀ ಬಾಳ್ತೆಯಂ ಘೋರರೂಪೇ! ||೧೧೪||

ಛೀ! ನಿರ್ಭಾಗ್ಯಳೆ! ವಂಚಕಿಯೆ! ಪುತ್ರಘಾತಿನಿ! ಸುಕುಮಾರನಾದ ಕುನಾಲನು ನಿನಗೇನಪರಾಧವನ್ನು ಮಾಡಿದ್ದನು! ಶಾಕಿನಿಯೆ! ಈ ತಂತ್ರವನ್ನು ನಾನರಿಯದಂತೆ ಯಾವಾಗ ಮಾಡಿದೆ? ಚಂಡಾಲಿನಿಯೆ! ನಿನ್ನನ್ನೀಗಲೇ ಚಂಡಾಲರ ಕೈಯಿಂದ ಜೀವಸಹಿತವಾಗಿ ಸುಡಿಸಿಬಿಡುವೆನು!

ತಿಷ್ಯ:—ಹಾ! ಸುಕುಮಾರ! ಕುನಾಲ! ರಕ್ಷಿಸು! ರಕ್ಷಿಸು [ಮರೆಹೋಗುವಳು].

ಕುನಾಲ:—[ಅಶೋಕನ ಕಾಲನ್ನು ಹಿಡಿದು ಪ್ರಾರ್ಥಿಸುವನು].

ವೃ|| ಬದುಕಿಸುಮಾತೆಯಂ; ಜನಕ! ನಿನ್ನಡಿದಾವರೆಯಲ್ಲಿ ಬೇಡುವೆಂ |
ಸದಯನೆ! ಪೆಣ್ಗಳಂ ಜಗದೆ ಕೊಲ್ವರೆ? ಧರ್ಮವಿರೋಧಮಲ್ತೆ? ಪೇಳ್ ||
ವಿಧಿಕೃತಮಲ್ಲದೀಕೆಯ ಕಟೆಂತುಟೊ ಕಾರಣಮೆನ್ನನೇತ್ರಮಿಾ |
ವಿಧದಳಿವೊಂದಲಿಂ ನಡೆದ ಕಜ್ಜಕೆ ಚಿಂತಿಪುದೇಕೆ? ನಿಷ್ಫಲಂ ||೧೧೫||

ಅಶೋಕ:—ಕುನಾಲ! ನಿನ್ನ ದುರವಸ್ಥೆಗೆ ಕಾರಣನಾದ ನನ್ನನ್ನು ಕ್ಷಮಿಸು! ನಿನ್ನ ಅಭಿಮತವೇನಿರುವುದು ಹೇಳು; ಅದನ್ನು ನಡೆಯಿಸಿಕೊಡುವೆನು.

ಕುನಾಲ:—ಜನಕನೆ! ಅಂಧನಾದ ನನಗೆ ಆಗಬೇಕಾದುದೇನಿರುವುದು? ಈ ನನ್ನ ಮಗನಾದ ಸಂಪದಿಗೆ ಯುವರಾಜ ಪಟ್ಟವನ್ನು ಕಟ್ಟಬೇಕೆಂದು

ಬೇಡುವೆನು. [ಸಂಪದಿಯನ್ನು ಕುರಿತು] ವತ್ಸ! ಸಂಪದಿ! ನಿನ್ನ ಪಿತಾಮಹನ ಪಾದವನ್ನು ಆಶ್ರಯಿಸಿ ಬದುಕು [ಅಶೋಕನಿಗೆ ಒಪ್ಪಿಸುವನು].

ಅಶೋ:—[ಸಂಪದಿಯನ್ನು ಆಲಂಗಿಸಿ, ತೊಡೆಯಮೇಲೆ ಕುಳ್ಳಿರಿಸಿಕೊಂಡು] ಕುನಾಲ! ನಿನ್ನ ಇಷ್ಟದಂತೆ ನಿನ್ನ ಕುಮಾರನಿಗೆ ರಾಜ್ಯಾಭಿಷೇಕವನ್ನು ಮಾಡುವೆನು.

ಕುನಾಲ:—ಚಕ್ರವರ್ತಿಯ ಪ್ರೀತಿಗೆ ಪಾತ್ರರಾದ ನಾನೂ ಸಂಪದಿಯೂ ಧನ್ಯರು!

ಅಶೋ:—ವತ್ಸ! ಕುನಾಲ! ಬಾ! ಹೋಗೋಣ! ಸಂಪದಿಯ ಅಭಿಷೇಕ ಪ್ರಯತ್ನವನ್ನು ಮಾಡೋಣ. [ಎಲ್ಲರೂ ಹೊರಡುವರು].

[ಅನಂತರ ಸಂಪದಿಯು ಸಿಂಹಾಸನದಲ್ಲಿ ಮಂಡಿಸುವನು. ಎಲ್ಲರೂ ಆಶೀರ್ವದಿಸುವರು].

ಕಂ|| ವಿಜಯಿಸು! ಧರ್ಮಾಶ್ರಯದಿಂ |
ನಿಜಕೀರ್ತಿಯ ಪಸರಿಸೀಮಹಿತಲದೆಲ್ಲಂ |
ಸುಜನರನೊಲವಿಂ ಪೊರೆಯುತೆ |
ಭುಜಿಸೈ! ಸಂಪದಿಕುಮಾರ! ಬಹು ಸಂಪದಮಂ ||೧೧೬||

ಅಶೋ:—ವತ್ಸ! ಕುನಾಲ! ನಿನ್ನ ಮಗನಾದ ಸಂಪದಿಯು ಚಕ್ರೇಶ್ವರನಾದನು; ದಯಾಮಯನಾದ ಅರ್ಹಂತನನುಗ್ರಹದಿಂದ ನಿನಗೆ ಕಣ್ಣುಗಳು ಪ್ರಾಪ್ತವಾದುವು; ನಿನಗೆ ಇನ್ನಾವ ಅಭಿಮತವಿರುವುದು ಹೇಳು!

ಕುನಾಲ:—ಜನಕನೆ! ಎಲ್ಲವೂ ಸಂತೋಷವೇ ಸರಿ! ಭಿಕ್ಷುಸಂಘವನ್ನು ಸೇವಿಸಿ ಕೃತಾರ್ಥನಾಗಲು ನನಗೆ ಅನುಜ್ಞೆಯನ್ನು ಕೊಡಿ.

ಅಶೋ:—ವತ್ಸ! ನಿನ್ನಿಷ್ಟದಂತೆ ಧರ್ಮದೀಕ್ಷೆಯನ್ನು ಅಂಗೀಕರಿಸು. ಮತ್ತೇನು?

ಕುನಾಲ:—ಎಲ್ಲವೂ ಆನಂದವೆ; ಆದರೂ ಈ ಭರತ ವಾಕ್ಯವು ನೆರವೇರಲಿ.

ಕಂ|| ಭಾರತಧರ್ಮಂ ವಿಜಯಿಕೆ |
ವೀರಾರುಗೆ ದೇಶಾಭಿಮಾನಮೆಲ್ಲರ ಮನದೊಳ್ |
ಸಾರಸುಖೋದಯಗಣದಿಂ |
ಚಾರುಮಹೀಶೂರ ಕೃಷ್ಣ ಭೂಪಂ ಮೆರೆಗೇ ||೧೧೭||

ತಥಾಸ್ತು. [ಎಲ್ಲರೂ ಹೊರಡುವರು].

ಇದು ಸಪ್ತಮಾಂಕವು.

ಸಂಪೂರ್ಣಂ.

ಶೋಧನೆ.

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ	ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೧	೬	ಶ್ರೀಯೋಪಾಮ	ಶ್ರೇಯೋಮಾರ್ಗ				
೫	೨೬	ಕೆಡುವುದು?	ಕೆಡುವುದು.	೪೨	೮	[ಅಶೋಕನನ್ನು	[ಪ್ರವೇಶಿಸಿ] ಅಶೋಕನನ್ನು
೭	೧೬	ಆ	ಆಃ !				
,,	೨೨	ಸ್ವಾಧೀನ	ಸ್ವಾಧೀನ	,,	೨೦	ತಪ್ಪರಿದವನು	ತಪ್ಪಿಸಿದವನು
೧೧	೧೦	ಹಾಃ -	ಹಾ !	೪೩	೮	ಪವಿತ್ರವಾಗಿರುವುದು	ಪವಿತ್ರವಾಗಿರುವುದು
೧೩	೧೧	ನೀನಲ್ತಿ	ನೀನಲ್ತೇ				
೧೭	೨	ವೂಜ್ಯ	ಪೂಜ್ಯ	,,	,,	ಬೌದ್ಧಧರ್ಮ	ಬೌದ್ಧಧರ್ಮ
,,	೧೬	ಬುದ್ದ	ಬುದ್ಧ	೪೪	೪	ಪರಿಶುದ್ದ	ಪರಿಶುದ್ಧ
೧೮	೪	ಆಃ —	ಆಃ !	೪೫	೧೮	ಥರ್ಮರಕ್ಷಣೆ	ಧರ್ಮರಕ್ಷಣೆ
,,	೮	ಸುನಂದನಂ	ನಂದನಂ	೪೭	೨	ಗೌತಮಾವ	ಗೌತಮಾಯ
೨೯	೫	ಯುವರಾಜ !	ಯುವರಾಜ !	೪೮	೫	ಒದ್ಧ	ಬುದ್ಧ
,,	೧೯	ಬಿಕ್ಷು	ಭಿಕ್ಷು	,,	೨೭	ಶಿಷ್ಯ:—	ಶಿಷ್ಯ:—
	೨೦	,,	,,	೪೯	೧೦	ಅರೋಕ:—	ಅಶೋಕ:—
೨೧	೧	ನನಗ	ನನಗೆ	೫೨	೧೪	ಸಲ್ಲ್ಗವೊ ?	ಸಲ್ಗುವೊ ?
೨೨	೧೩	ಯಾತಕ್ಕೋ	ಏತಕ್ಕೋ	೫೪	೧೩	[ಮುಂದೆನೋಡಿ	[ಮುಂದೆನೋಡಿ]
೨೩	೨೬	ಹೋಗಿ]	ಹೋಗಿ,	೫೮	೪	ಗೃಹಸ್ಥನೆ	ಗೃಹಸ್ಥನೆ
,,	೨೭	ಹಚ್ಚುವರು.	ಹಚ್ಚುವರು]	೬೦	೭	ಮಕ್ತ್ರಿಯ	ಮೈತ್ರಿಯ
೨೫	೭	ರಯೆಯಿಂ	ರಯದಿಂ	,,	೧೧	ಅಯ್ಯೋ:—	ಅಯ್ಯೋ
,,	೨೨	ಆಜ್ಞೆ	ಆಜ್ಞೆ	೬೧	೭	ಧಗ್ಧ	ದಗ್ಧ
೨೬	೩	ನಮೋಬುದ್ಧಾಯ?	ನಮೋಬುದ್ಧಾಯ!	,,	೧೫	ಹೇಗುಂಟಾಗುವುದೊ	ಹೇಗುಂಟಾಗುವುದೊ
೨೭	೧	ನಾವಿಲ್ಲಯೋ	ನಾವಿಲ್ಲಯೇ	೬೨	೧೭	ಭಿಷ್ಕು	ಭಿಕ್ಷು
೨೮	೭	ನ್ನೊಬ್ಬ	ಇನ್ನೊಬ್ಬ	೬೩	೨೬	ಬಿಕ್ಷುಗಳ	ಭಿಕ್ಷುಗಳು
,,	,,	ಪಇಕ್ಕಿ	ಪಕ್ಕಿ	೬೪	೯	ನಮ್ಮ	ಪಮ್ಮ
೩೧	೭	ಸುಮನೋದ್ಭಕ್ತಿ	ಸುಮನೋಭಕ್ತಿ	೬೬	೮	ಯೋಗ್ಯತ	ಯೋಗ್ಯತೆ
೩೪	೧೮	ಬಿಂಬಸಾರ	ಬಿಂಬಿಸಾರ	,,	೨೩	ಭದ್ರಕ :—	ಭದ್ರಕ :—[
೩೫	೫	ಸಾಮ್ಯತೆ	ಸೌಮ್ಯತೆ			ಭದ್ರಕ :—	

,,	೨೫	ಸವ್ಯಕ್‌ಸ್ಮೃತಿ	ಸಮ್ಯಕ್‌ಸ್ಮೃತಿ	೬೬	೨೧	ಶಿಷ್ಯ:—	ಶಿಷ್ಯ:—[ಆಸುರ
೩೬	೪	ಶಿಬಿರಾಥಕ್ಷನೆ	ಶಿಬಿರಾಧ್ಯಕ್ಷನೆ!				ದಿಂದ ಪ್ರವೇಶಿಸಿ]
,,	೨೩	ನರಳಬೇಕಾವು	ನಂರಳಬೇಕಾಗು	೬೯	೨೪	ಪರ್ಬದೆ	ಪರ್ಬದ
		ಗುವುದು	ವುದು.	೭೦	೨೩	ಅಯ್ಯಾ!	ಅಯ್ಯೋ!
೩೭	೧	ಸೇನಾವೀರರ ವಿ	ಸೇನಾವೀರರ ಉ	೭೨	೧೬	ಭಿಸ್ಕು	ಭಿಕ್ಷು
		ಜಯಲಕ್ಷ್ಮಿಯನ್ನು	ತ್ಸಾಹಧ್ವನಿಯು	೭೩	೨೩	ನೆಲ್ಲಯು	ನೆಲ್ಲಿಯು
		ಸೂಚಿಸುವುದು	ವಿಜಯಲಕ್ಷ್ಮಿ	೭೫	೩	ಮೌದ್ಗಲಿ	ಮೌದ್ಗಲಿ
			ಸೂಚಿಸುವುದು	೭೭	೨೧	ಯಾರಿರುವ	ಯಾರಿರುವ
೩೮	೨೨	ನರೇಂದ್ರಾಗಣಿ	ನರೇಂದ್ರಾಗ್ರಣಿ			ಳಿಂದ	ಳಿಂದು
೩೯	೬	ತನುವಂ	ತನುವಂ				
೩೯	೧೩	ಹಬ್ಬ ಮೊಳಸದ	ಹಬ್ಬಮೊಳಸದೇ	೮೨	೨೨	ನೆರ	ನೆಂ
೪೦	೬	ಸ್ಮರಿಸುವೆಂ	ಸ್ಮರಿಸುವೆಂ	೮೫	೧೯	ಅಕಾರಣ	ಆಕಾರಣ
,,	೨೦	ವಾಣಿಯುನ್ನು	ವಾಣಿಯುನ್ನು	೮೬	೨೦	ಶಿಷ್ಯರಕ್ಷಿತ	ಶಿಷ್ಯರಕ್ಷಿತ
೪೧	೧೦	ಸುವ್ಯವಸ್ಥೆ	ಸುವ್ಯವಸ್ಥೆ	೮೮	೧೦	ಅನಾದವ	ಅನಾದರ
,,	೧೧	ವಿಮುಕ್ತ	ವಿಮುಕ್ತ	,,	೧೨	ನೇತ್ರ:—	ವೇತ್ರ:—
,,	೧೯	ಪೊರೆವಡಾದರೋ	ಪೊರೆವರದಾರೋ	,,	೨೨	ವ್ಯೆದಡವಿ]	[ವ್ಯೆದಡವಿ]